ಕನ್ನಡದಲ್ಲಿ ಮಹಾಭಾರತಗಳು ಮತ್ತು ಇತರ ವಿಮರ್ಶಾ ಪ್ರಬಂಧಗಳು

ಲೇಖಕರು :

ಎನ್ನೆ

ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ

ಧಾ ರ ವಾ ಡ

ಕನ್ನಡದಲ್ಲಿ ಮಹಾಭಾರತಗಳು ಮತ್ತು ಇತರ ವಿಮರ್ಶಾ ಪ್ರಬಂಧಗಳು

ಲೇಖಕರು :

ಎಸ್.

ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ

ಧಾ ರ ವಾ ಡ

ಪ್ರಕಾಶಕರು
ಕಾರ್ಯದರ್ಶಿ
ಕ. ಇ. ಸಂ. ಮಂಡಲ
ಧಾರವಾಡ.

★

@ ಲೇಖಕರು

★

1986

★

ಪ್ರತಿ : 700

★

ಮುದ್ರಿಕೆ
ಜ್ಯೋತಿ ಪ್ರಿಂಟರ್ಸ
ಧಾರವಾಡ

— ಮೊದಲ ಮಾತು —

ನನ್ನ ಈ ಸಾಹಿತ್ಯ ಪ್ರಬಂಧಗಳು ಅಮರ ಕವಿ ಕುಮಾರವ್ಯಾಸ ಹಾಗು ಇತರ ಭಾರತಕಾರರ ಬಗ್ಗೆ ನಾನು ಪಟ್ಟ ಪರಿಶ್ರಮದ ಫಲ. ಆದರಲ್ಲೂ ಮಹಾ ಕವಿ ಕುಮಾರವ್ಯಾಸನ ಬಗ್ಗೆ ನಾನು ಮಾಡಿದ ವ್ಯಾಸಂಗದಫಲವಾಗಿ ಈಗಾಗಲೆ ಐದು ಗ್ರಂಥಗಳು ಹೊರಬಂದಿವೆ. 'ಗದುಗಿನ ಗಂಡು ಕವಿ' ಎಂಬ ನನ್ನ ವಿಮರ್ಶಾತ್ಮಕ ಗ್ರಂಥ ಎಂಟು ವರ್ಷಗಳ ಕೆಳಗೆ ಪ್ರಕಟವಾಗಿದ್ದು ಈಗ ಅದು ಪೇಟೆಯಲ್ಲಿ ಲಭ್ಯವಿಲ್ಲ. ಪ್ರತಿಗಳೆಲ್ಲ ತೀರಿಹೋಗಿವೆ. ಕುಮಾರವ್ಯಾಸನನ್ನು ಕುರಿತು ನಾನು ಬೀದರ್‌ನಲ್ಲಿ, ಗದಗಿನಲ್ಲಿ, ಕೋಳಿವಾಡದಲ್ಲಿ ಪ್ರಸ್ತುತಪಡಿಸಿದ ಪ್ರಬಂಧಗಳು ಅಪ್ರಕಟಿತವಾಗಿ ಉಳಿದಿದ್ದವು. ಅವನ್ನು ಹಾಗೂ ಗಮಕ ಕಲೆಯನ್ನು ಕುರಿತ ಪ್ರಬಂಧಗಳನ್ನು ಹಾಗೂ 'ಕನ್ನಡದಲ್ಲಿ ಮಹಾಭಾರತಗಳು' ಎಂಬ ವಿಶೇಷ ಅಭ್ಯಾಸದ ಪ್ರಬಂಧವನ್ನು ಇತಿಹಾಸ ಸಂಶೋಧನ ಮಂಡಲ ಧಾರವಾಡ ಅವರು ಪುಸ್ತಕ ರೂಪದಲ್ಲಿ ತರುವ ಸಾಹಸವಹಿಡಿದ್ದಾರೆ. ಕನ್ನಡದಲ್ಲಿ ಮಹಾ ಭಾರತಗಳು ಎಂಬ ಪ್ರಬಂಧ ಆನಂದವನದ ಸದ್ಬೋಧ ಚಂದ್ರಿಕೆಯ ಅಮೃತ ಸಂಪುಟದಲ್ಲಿ ಪ್ರಕಟವಾಗಿದ್ದು ಅದರ ಸಂಪಾದಕರಾದ ಆದರಣೀಯ ಶ್ರೀ ಚಿದಂಬರ ಮೂರ್ತಿ ಚಕ್ರವರ್ತಿ ಅವರಿಗೆ ನಾನು ಈ ಮೂಲಕ ನನ್ನ ಕೃತ ಜ್ಞತೆಯನ್ನು ವ್ಯಕ್ತಪಡಿಸಲೇಬೇಕು. ಆ ಪ್ರಬಂಧದ ರಚನೆಗೆ ಅವರೇ ನನ್ನ ಪ್ರೇರಣೆ. ಕುಮಾರವ್ಯಾಸರ ಬಗ್ಗೆ ಆಗ ಬೇಕಾದ ಸಂಶೋಧನೆ ಕುರಿತು ನಾನು ಸಂಪಾದಿಸಿದ 'ತುಳಸಿಯ ಉದಕ' ಎಂಬ ಸಂಸ್ಮರಣ ಸಂಚಿಕೆಯಲ್ಲಿ ಲೇಖನ ರೂಪದಲ್ಲಿ ಪ್ರಕಟಿಸಿದ್ದೆ. ಅವನ್ನು ಇಲ್ಲಿ ಸಮಾವೇಶಗೊಳಿಸಿಕೊಂಡಿದ್ದೂ ಕುಮಾರವ್ಯಾಸ ಸೇವಾ ಸಂಸ್ಥೆಯ ಮಿತ್ರ ಶ್ರೀ ಸುರೇಂದ್ರ ದಾನಿ ಅವರಿಗೂ ಮಾನ್ಯ ಶ್ರೀ ಬಿ.ಎ. ದೇಸಾಯಿ ಅವರಿಗೂ ನಾನು ಋಣಿ.

ಕನ್ನಡ ಸಾಹಿತ್ಯಾಭ್ಯಾಸಿಗಳಿಗೆ ಈ ಪ್ರಬಂಧಗಳಿಂದ ಪ್ರಯೋಜನವಾದರೆ ನನ್ನ ಶ್ರಮ ಸಾರ್ಥಕ.

ಎನ್ಕೆ.

ವಿಳಾಸ :
ಎನ್ಕೆ. ಕುಲಕರ್ಣಿ, ಎಂ.ಎ. ಬಿ.ಟಿ.
'ಮಾತೃ ಶ್ರೀ' ಮಹಿಷಿ ರಸ್ತೆ, ಮಾಳಮಡ್ಡಿ
ಧಾರವಾಡ ೫೮೦ ೦೦೧

ಪರಿವಿಡಿ

		ಪುಟ
೧.	ಕನ್ನಡದಲ್ಲಿ ಮಹಾಭಾರತಗಳು	೧
೨.	ಕುಮಾರವ್ಯಾಸನ ಶೈಲಿ	೨೬
೩.	ಕುಮಾರವ್ಯಾಸನ ಹಾಸ್ಯ ಪ್ರಜ್ಞೆ	೪೯
೪.	ಗದ್ಯವಾಚನ ಮತ್ತು ಗಮಕ	೫೬
೫.	ಗಮಕ ಕಲೆ ಮತ್ತು ಗದುಗಿನ ಭಾರತ	೬೬
೬.	ಮಹಾಕವಿ ಕುಮಾರವ್ಯಾಸನ ಬಗ್ಗೆ ನಡೆಯಬೇಕಾದ ಸಂಶೋಧನಾ ಕಾರ್ಯ	೭೪

ಕನ್ನಡದಲ್ಲಿ ಮಹಾಭಾರತಗಳು

'ವ್ಯಾಸ ಮುನೀಂದ್ರರುಂದ್ರು ವಚನಾಮೃತ ವಾರ್ಧಿ'ಯನ್ನೆ ಈಸಲು ಯುತ್ತಿಸಿದ್ದಾರೆ ಕನ್ನಡ ಆದಿಕವಿ ಪಂಪ, ಕವಿರತ್ನ ರನ್ನ. ಮಹಾಕವಿ ಕುಮಾರವ್ಯಾಸ, ವರಕವಿ ಲಕ್ಷ್ಮೀಶ, ಆಸ್ಥಾನಕವಿ ತಿಮ್ಮಣ್ಣ ಮೊದಲಾದವರು. ಜೈನ ಕವಿಗಳಾದ ಮೊದಲನೆಯ ಗುಣವರ್ಮ (ಸು.೯೦೦), ಚಾವುಂಡರಾಯ (೯೭೮), ನೇಮಿಚಂದ್ರ (ಸು.೧೨೦೦), ಕರ್ಣಪಾರ್ಯ (ಸು.೧೧೫೦) ಬಂಧುವರ್ಮ (೧೨೦೦), ಮಹಾಬಲಕವಿ (೧೨೫೮), ಸಾಳ್ವ (೧೫೫೦), ಮೊದಲಾದವರು ಬೆಳಸಿದ ಜೈನ ಮಹಾಭಾರತ ಕಥೆಯೊಂದು ಬೇರೆಯೆ ಇದ್ದಿತು. ಅದುವೆ ಜಿನಸೇನಾಚಾರ್ಯರು ಸಂಸ್ಕೃತದಲ್ಲಿ ಬರೆದ ಮಹಾ ಜೈನಭಾರತ. 'ಹರಿವಂಶಪುರಾಣ' ಇದರ ಅಂಗವಾಗಿ ಬರುವ ಭಾರತ ಕಥೆ ಅದು. ಅವರ ರೀತಿಯೆ ಬೇರೆ. ವ್ಯಾಸ ಭಾರತದಷ್ಟು ಗಾತ್ರ, ವೈವಿಧ್ಯ, ಹರಹುಗಳು ಜೈನ ಭಾರತದ ಈ ಮೂಲ ಪುರಾಣ ಕಾವ್ಯಕ್ಕಿಲ್ಲ. ಮೊದಲನೆಯ ಗುಣವರ್ಮನ 'ಹರಿವಂಶ' ಈಗ ಉಪಲಬ್ಧವಾಗಿಲ್ಲ. ಮುಖ್ಯವಾಗಿ ನೇಮಿಜಿನೇಶ್ವರನ, ಕರ್ಣಪಾರ್ಯನ, ಮಹಾಬಲಕವಿಯ ನೇಮಿನಾಥ ಪುರಾಣಗಳು ಮತ್ತು ಸಾಳ್ವಕವಿಯ ಭಾರತಗಳು ಕನ್ನಡದ ಜೈನ ಭಾರತದ ಕಥೆಯನ್ನು ವಿಸ್ತರಿಸುತ್ತವೆ.

ತೀರ್ಥಂಕರರ ಪುರಾಣಗಳಲ್ಲೆಲ್ಲ ವಿಶೇಷ ಮಹತ್ವ ಬಂದಿರುವುದು ೨೨ನೆಯ ತೀರ್ಥಂಕರನಾದ ನೇಮಿನಾಥನಿಗೆ. ಏಕೆಂದರೆ ಈತ ಪುರಾಣೇತಿಹಾಸ ಪ್ರಸಿದ್ಧವಾದ 'ಹರಿವಂಶ' ದಲ್ಲಿ ಜನ್ಮತಾಳಿದವನು. ಜೈನ ಭಾರತ ಪರಂಪರೆಯಲ್ಲಿ ಹರಿವಂಶ ಕುರುವಂಶಗಳ ಕಥೆ ಹಾಸುಹೊಕ್ಕಾಗಿ ಹೆಣೆದು ಕೊಂಡಿದೆ. ಉಭಯ ವಂಶಗಳು ಹತ್ತುಗಡೆಯು, ಬಾಳು ಬದುಕಿನ, ಬಳ್ಳಿ-ವಳ್ಳಿಯಿಂದ ಸುತ್ತುವರಿಯಲ್ಪಟ್ಟಂತಹವು. ಸಂಸ್ಕೃತ, ಪ್ರಾಕೃತ, ಕನ್ನಡಗಳಲ್ಲಿ ಒಟ್ಟು ಸುಮಾರು ಇಪ್ಪತ್ತೆರ್ಡು ಕೃತಿಗಳು ಹರಿವಂಶ ಕುರುವಂಶಗಳ ಇತಿಹಾಸವನ್ನು ಹೇಳುತ್ತವೆ. ಕನ್ನಡದ ಮಟ್ಟಿಗೆ ಎಂಟು ಕೃತಿಗಳು ನೇಮಿಜಿನೇಶ್ವರನ

ಚರಿತ್ರೆಯನ್ನೂ ತನ್ಮೂಲಕ ಹರಿವಂಶ ಕುರುವಂಶಗಳ ಚರಿತ್ರೆಯನ್ನೂ ನಿರೂಪಿಸುತ್ತವೆ. ೧ನೆಯ ಗುಣವರ್ಮನ 'ಹರಿವಂಶ' ಕಾವ್ಯವು ಉಪಲಬ್ಧವಿಲ್ಲದುದರಿಂದ ಕರ್ಣಪಾರ್ಯನ (೧೧೫೦)-'ನೇಮಿನಾಥ ಪುರಾಣ'ವೆ ನಮಗೆ ಉಪಲಬ್ಧವಾದ ಪೂರ್ಣ ಹರಿವಂಶ ಕಥೆಯನ್ನು ವಿಸ್ತರಿಸುವ ಪ್ರಾಚೀನ ಕಾವ್ಯ. ಚಾವುಂಡರಾಯ(೯೭೮)ನ ಗದ್ಯವು ೬೩ ಶಲಾಕ ಪುರುಷರ ಚರಿತ್ರೆಯೆನ್ನೊಳಗೊಂಡಿದ್ದು ನೇಮಿನಾಥ ಚರಿತ್ರೆಯು ಅದರ ಒಂದು ಭಾಗ ಮಾತ್ರವಾಗಿದೆ. ಇದು ಗುಣಭದ್ರಾಚಾರ್ಯರ ಸಂಸ್ಕೃತ ಮಹಾಪುರಾಣದ ಜಾಡು ಹಿಡಿದಿದೆ.

ಜೈನ ಸಾಹಿತ್ಯದಲ್ಲಿ ನೇಮಿನಾಥನ ಚರಿತ್ರೆಯನ್ನು ಕುರಿತ ಕೃತಿಗಳೆಲ್ಲವೂ ಪ್ರಸಿದ್ಧಿಯನ್ನೂ, ಜನಪ್ರಿಯತೆಯನ್ನೂ ಗಳಿಸಲಿಕ್ಕೆ ಕಾರಣವೆಂದರೆ ಅದರಲ್ಲಿ ಸಮ್ಮಿಲಿತವಾಗಿರುವ ಭಾರತ-ಭಾಗವತಗಳ ಕಥೆ. 'ಇದರಲ್ಲಿ ಮಹಾಭಾರತ ಕಥೆಯೂ ಬೆರೆತು ಜೈನ-ವೈದಿಕ ಸಮನ್ವಯ ಸಿದ್ಧಾಂತದ ಸೂತ್ರವೊಂದು ಕೋದುಕೊಂಡಿದೆ. ಇದು ಮಹಾಭಾರತಕ್ಕೆ ಮಹಾಭಾರತವೂ ಆಯಿತು, (ನೇಮಿನಾಥ) ಪುರಾಣಕ್ಕೆ ಪುರಾಣವೂ ಆಯಿತು ಎಂಬಂತಿದೆ' ಎಂದು ಶ್ರೀ ಹಂಪ ನಾಗರಾಜಯ್ಯನವರು 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ' (ಸಂಪುಟ ೪ ಭಾಗ ೨.)ಯಲ್ಲಿ ಪಟ್ಟ ಅಭಿಪ್ರಾಯವು(ಪುಟ ೫೦೩) ಹೌದೆನ್ನುವಂತಿದೆ.

ಕರ್ಣಪಾರ್ಯನ ನೇಮಿನಾಥ ಪುರಾಣದ ಹೂರಣವನ್ನೆ ನಾವು ಬಂಧುವರ್ಮನ 'ಹರಿವಂಶಾಭ್ಯುದಯ' ದಲ್ಲೂ ಮಹಾಬಲ ಕವಿಯ 'ನೇಮಿನಾಥ ಪುರಾಣ'ದಲ್ಲೂ ಮುಂದೆ ನಾಳ್ವ ಮತ್ತು ೩ನೆಯ ಮಂಗರಸರ ಕಾವ್ಯಗಳಲ್ಲೂ ಕಾಣುತ್ತೇವೆ. ಸದ್ಯ ಕರ್ಣಪಾರ್ಯನ ಕಾವ್ಯವಸ್ತುವೊಂದನ್ನೆ ಅವಲೋಕಿಸಿದರೆ ಸಾಕು, ಜೈನ ಪರಂಪರೆಯಲ್ಲಿ ಮಹಾಭಾರತವು ನೇಮಿನಾಥ ಪುರಾಣದೊಂದಿಗೆ ಹೇಗೆ ಹೆಣೆದುಕೊಂಡು ಬೆಳೆದುಬಂದಿದೆ ಎಂಬುದನ್ನು ನೋಡಬಹುದು.

ಒಟ್ಟು ಹದಿನಾಲ್ಕು ಆಶ್ವಾಸಗಳಿರುವ ಕರ್ಣಪಾರ್ಯನ ನೇಮಿನಾಥ ಪುರಾಣದ ಮೊದಲ ಎರಡು ಆಶ್ವಾಸಗಳಲ್ಲಿ ನೇಮಿನಾಥನ ಪೂರ್ವಜನ್ಮಗಳ

ವೃತ್ತಾಂತಗಳು ನಿರೂಪಿಸಲ್ಪಟ್ಟಿವೆ. ಅದರೊಂದಿಗೆ ಜರಾಸಂಧನ ಜನನದ ಕಥೆಯೂ ಬರುತ್ತದೆ. ತೃತೀಯಾಶ್ವಾಸದಲ್ಲಿ ಕೇಶವ ಪಾಂಡವರ ಜನನ ಮತ್ತು ಹರಿವಂಶದ ಅಂಧಕವೃಷ್ಣಿಯ ಪೂರ್ವಜನ್ಮದ ಕಥೆಯೂ ಹೇಳಲ್ಪಟ್ಟಿವೆ. ಆತನಿಗೆ ಹತ್ತು ಮಂದಿ ಮಕ್ಕಳು. ಇವರಲ್ಲಿ ಕೊನೆಯವನು ವಸುದೇವ. ನಾಲ್ಕು, ಐದು ಆಶ್ವಾಸಗಳಲ್ಲಿ ಗಂಧರ್ವದತ್ತೆಯ ಸ್ವಯಂವರ, ವಸುದೇವನು ಗಂಧರ್ವದತ್ತೆಯನ್ನು ವಿವಾಹವಾಗುವುದು, ಕಂಸನ ಜನನ, ಆತನ ವಿವಾಹ; ಮುಂದೆ ಆರನೆಯ ಆಶ್ವಾಸದಲ್ಲಿ ವಸುದೇವ ದೇವಕಿಯರ ವಿವಾಹ, ಕೃಷ್ಣ ಜನನ, ಕಂಸ ವಧೆ ಈ ಮೊದಲಾದ ಪ್ರಸಂಗಗಳು ಅಡಕವಾಗುತ್ತವೆ. ಸಪ್ತಮಾಶ್ವಾಸದಿಂದ ಹದಿನಾಲ್ಕನೆಯ ಆಶ್ವಾಸದ ಮುಕ್ತಾಯದವರೆಗೆ ಮುಖ್ಯವಾಗಿ ಜರಾಸಂಧನು ತನ್ನ ಅಳಿಯನಾದ ಕಂಸನನ್ನು ಕೃಷ್ಣನು ವಧಿಸಿದ ಪರಿಣಾಮವಾಗಿ ತನ್ನ (ಜರಾಸಂಧನ) ಮಗನಾದ ಕಾಳಯವನನ್ನು ಯಾದವರ ಮೇಲೆ ದಾಳಿ ಮಾಡಲು ಕಳಿಸುವುದು, ಆದರೆ ಅದು ಸಾಧ್ಯವಾಗದೆ ಕಾಳಯವನು ಹಿಂತಿರುಗಿದುದು, ದ್ವಾರಕಾವಾಸಿಯಾದ ಕೃಷ್ಣನು ಸತ್ಯಭಾಮೆ ರುಕ್ಮಿಣಿಯರನ್ನು ವರಿಸಿದುದುದು, ಪ್ರದ್ಯುಮ್ನನ ಜನನ ಮತ್ತು ವಿವಾಹ; ಚರುದೇವ ಶಿವದೇವಿಯರ ಮಗನಾಗಿ ನೇಮಿಕುಮಾರನ ಜನನ, ಆತನ ಬಾಲ್ಯ ವರ್ಣನೆಯೊಂದಿಗೆ ಇತ್ತ ಕೌರವ ಪಾಂಡವರ ಕಥೆಯೂ ನಿರೂಪಿಸಲ್ಪಡುತ್ತದೆ. ಕೌರವ ಪಾಂಡವರ ಧನುರ್ವಿದ್ಯಾಭ್ಯಾಸದ ಸಮಯಕ್ಕೆ ಕರ್ಣನ ಪ್ರವೇಶ, ಕರ್ಣ ಕೌರವ ಸಖ್ಯ, ದ್ರೋಣನಿಂದ ದ್ರುಪದನ ಸೆರೆ, ಕೌರವ ಪಾಂಡವರ ವೈರವರ್ಧನೆಯಾಗಿ ಕೌರವನು , ಪಾಂಡವರನ್ನು ಪೂರ್ಣ-ನಾಶಮಾಡಲು ಪ್ರತಿಜ್ಞೆ ತೊಡುವುದು; ತದನುಸಾರವಾಗಿ ಅರಗಿನ ಮನೆಯ ಅಗ್ನಿ ಪ್ರಯೋಗದಲ್ಲಿ ಬೆಂದುಹೋಗಬೇಕಾಗಿದ್ದ ಪಾಂಡವರು ಸುರಕ್ಷಿತರಾಗಿ ಪಾರಾಗುತ್ತಾರೆ. ಮುಂದೆ ಬಕಾಸುರ ವಧೆ, ಹಿಡಿಂಬ ರಾಕ್ಷಸ ಸಂಹಾರ, ಹಿಡಿಂಬೆಯೊಡನೆ ಭೀಮನ ವಿವಾಹ ಮೊದಲಾದ ಪ್ರಸಂಗಗಳು ನಡೆದುಹೋಗುತ್ತವೆ. ಆಮೇಲೆ ದ್ರೌಪದಿ ಸ್ವಯಂವರ.ದ್ರೌಪದಿ ಅರ್ಜುನ(ಮಾತ್ರ) ವಿವಾಹ.ಧರ್ಮರಾಯನು ಇಂಪ್ರಪ್ರಸ್ತದಲ್ಲಿ ರಾಜ್ಯಭಾರ ಮಾಡುತ್ತ ಹದುಳವಾಗಿ ಆಳುತ್ತಿರುವುದನ್ನೂ ವಿಸ್ತರಿಸಲಾಗಿದೆ. ಇಲ್ಲಿ ದ್ರೌಪದಿ ಅರ್ಜುನನೊಬ್ಬನಿಗೇ ಪತ್ನಿಯೆಂಬುದು ಗುರುತಿಸಬೇಕಾದ ವೃತ್ತಾಸ. ಪಂಪಕವಿಯ ದೃಷ್ಟಿಯೂ ಇದೆ.

ಮುಂದೆ ಕೌರವ ವೃತ್ತಾಂತ ಮುಂದುವರಿಯುತ್ತದೆ. ಧರ್ಮರಾಯನು ವಿಂಧ್ಯ ರಾಜಮನೆತನದ ಕನ್ಯೆಯನ್ನು ವರಿಸುವುದು ವಿಶೇಷ ವ್ಯತ್ಯಾಸದ ಅಂಶ. ತದನಂತರದಲ್ಲಿ ಅರ್ಜುನ ಸುಭದ್ರಾ ಪರಿಣಯದ ಪ್ರಸಂಗ ವಿಜೃಂಭಿಸುತ್ತದೆ ಇದನ್ನನುಸರಿಸಿ ಪಾಂಡವರ ಕೆಡುಗಾಲ ಚಕ್ರದ ತಿರುವು ಸನ್ನಿಹಿತ. ದ್ಯೂತ ಪ್ರಸಂಗ, ಪಾಂಡವರ ವನವಾಸ, ಅಜ್ಞಾತವಾಸಗಳು ಎಟ್ಟಿಕ್ಕೊಂಡು ಬಂದು ಪಾಂಡವರನ್ನು ಸತ್ವ ಪರೀಕ್ಷೆಗೆ ಗುರಿಪಡಿಸುತ್ತವೆ. ಅಜ್ಞಾತವಾಸದ ಮುಕ್ತಾಯಕ್ಕೆ ಪಾಂಡವರ ಕಷ್ಟ ಪರಂಪರೆಗಳು ಒಂದು ಘಟ್ಟಕ್ಕೆ ಬರುತ್ತವೆ. ಧರ್ಮ ವಿಜಯದ ಅರುಣೋದಯ ಪಾಂಡವರ ದ್ವಾರಾವತಿ ಆಗಮನ ದೊಂದಿಗೆ.

ಇತ್ತ ಕರ್ಣ ಕುಂತಿಯ ರಹಸ್ಯ ಭೇಟಿಯ ಪ್ರಸಂಗ. ಅತ್ತ ಜರಾಸಂಧನು ರತ್ನ ವ್ಯಾಪಾರಿಯ ಮೂಲಕ ಯಾದವರಿನ್ನೂ ಜೀವಂತವಾಗಿರುವರೆಂಬ ವಾರ್ತೆಯನ್ನು ಕೇಳಿ ಆಶ್ಚರ್ಯಚಕಿತನಾಗುವದು ವ್ಯಾಸ ಭಾರತದಿಂದ ಕಥಾ ವಾಹಿನಿ ವ್ಯತ್ಯಾಸಗೊಳ್ಳುತ್ತದೆಂಬುದಕ್ಕೆ ಒಂದು ನಿದರ್ಶನ. ಮೂಲದಲ್ಲಿ ಜರಾಸಂಧನು ಸಭಾಪರ್ವದಲ್ಲಿಯೇ ಸ್ಥಾವನ್ನಪ್ಪುತ್ತಾನೆ. ಇಲ್ಲಿ ಜರಾಸಂಧನು ಕೃಷ್ಣನ ವತ್ತು ಅಖಿಲ ಯಾದವರ ವೈರಿಯಾಗಿ ಭಾರತ ಯುದ್ಧದ ವರೆಗೂ ಜೀವಿಸಿದ್ದಾನೆ.

ಇನ್ನು ಕೃಷ್ಣದೌತ್ಯ ಮತ್ತು ಕುರುಕ್ಷೇತ್ರ ಯುದ್ಧ. ಇಲ್ಲಿ ದೌತ್ಯ ವಹಿಸುವ ಅರ್ಜುನನ ಸಾರಥಿಯಾಗುವ ಕೃಷ್ಣ, ಶ್ರೀಕೃಷ್ಣನಲ್ಲ. ಒಬ್ಬ ಶೂರ, ಈ ಕಥಾ ವೀಥಿಯಂತೂ ವಿಶೇಷ ಭಿನ್ನವಾಗಿದೆ. ಪಾಂಡವರು ಭೂಮಿಯ ದಾಯಭಾವನ್ನು ಬೇಡಲು ದಾಯಾದಿ ದುರ್ಯೋಧನನ ಬಳಿಗೆ ಕೃಷ್ಣನನ್ನು ಕಳಿಸುತ್ತಾರೆ. ದುರ್ಯೋಧನನು ಪಾಲು ಕೊಡುವುದಿಲ್ಲವೆಂದು ತಲೆ ಎಲ್ಲಾಡಿಸಿ ಕೃಷ್ಣನನ್ನು ಅವಮಾನಗೊಳಿಸಿ ಹಿಂದಕ್ಕೆ ಕಳಿಸುತ್ತಾನೆ. ಇದರಿಂದಾಗಿ ಯಾದವರಿಗೂ, ಜರಾಸಂಧನಿಗೂ, ಕೌರವರಿಗೂ ಪಾಂಡವರಿಗೂ ಯುದ್ಧ ಮಸಗುತ್ತದೆ. ಜರಾಸಂಧನು ಯಾದವರೊಡನೆ ಯುದ್ಧಕ್ಕೆ ಸನ್ನದ್ಧನಾದಾಗ ನಡುವೆ ನಾರದರ ರಾಯಭಾರ. ಇಲ್ಲಿ ಜರಾಸಂಧನೊಬ್ಬ ದೊಡ್ಡ ಚಕ್ರವರ್ತಿ

ಯೆಂಬು ದುಗಮನಿಸಬೇಕಾದ ವಿಷಯ. ಬಲದೇವ ವಾಸುದೇವರು ಯುದ್ಧಕ್ಕೆ ಸಿದ್ಧರಾಗಿ ಬರುತ್ತಾರೆ, ಇತ್ತ ಕೌರವ-ಪಾಂಡವರೂ ಯುದ್ಧಕ್ಕೆ ಮೊದಲಾತ್ತಾರೆ. ಈ ಮೊದಲು ಹೇಳಿದಂತೆ ಅರ್ಜುನನ ಸಾರಥಿ ಶ್ರೀಕೃಷ್ಣನ ಶೂರ ಸ್ನೇಹಿತನಾದ ಇನ್ನೊಬ್ಬ ಕೃಷ್ಣ. ಶ್ರೀಕೃಷ್ಣ ಬಲರಾಮರು ಜರಾಸಂಧ ನೊಡನೆ ಯುದ್ಧಕ್ಕೆ ತ್ತೊಡಗಿ ಹರಿವಂಶ ಕುರುವಂಶಗಳ ಕಥಾವಲ್ಲರಿ ತೊಡ್ಡಕ್ಕಿ ಕೊಳ್ಳುತ್ತದೆ. ಪಾಂಡವ ಪಕ್ಷದಲ್ಲಿ ಅರ್ಜುನನಿಗೆ ಸೇನಾಪತಿ ಪಟ್ಟ. ದುರ್ಯೋಧನನ ಪಕ್ಷದಲ್ಲಿ ಕರ್ಣನಿಗೆ ಆ ಸೇನಾಪತಿ ಪಟ್ಟ. ಯುದ್ಧವು ಮುಸಗಿ ಪಾಂಡವರಿಗೇ ವಿಜಯಲಕ್ಷ್ಮಿ ಒಲಿಯುತ್ತಾಳೆ. ಜರಾಸಂಧನ ವಧೆಯಾಗಿ ಯಾದವರ ವಿಜಯಧ್ವಜ ಮೆರೆಯುತ್ತದೆ.

ನೇಮಿನಾಥನ ಚರಿತ್ರೆಗೆ ಪ್ರಾಧಾನ್ಯವಿರುವುದು ಮುಖ್ಯವಾಗಿ ಹದಿಮೂರನೆಯ ಆಶ್ವಾಸ. ನೇಮಿನಾಥ ಶ್ರೀಕೃಷ್ಣರು ದಾಯಾದಿಗಳು. ನೇಮಿನಾಥನು ಶ್ರೀ ಕೃಷ್ಣನ ಕಕ್ಕನ ಮೊಮ್ಮಗ. ಹರಿವಂಶದಲ್ಲಿ ಶ್ರೀ ಕೃಷ್ಣನಿಗೆ ಇರುವುದು ಲೌಕಿಕ ಮಹತ್ವ. ಆತ ಶೃಂಗಾರ ಲೋಲುಪ. ಕರ್ಣಪಾರ್ಯನಿಗೆ ಶ್ರೀ ಕೃಷ್ಣನಿಗಿಂತಲೂ ನೇಮಿಯು ಜ್ಞಾನ, ಯೋಗ, ತಪಗಳಲ್ಲಿ ಶ್ರೇಷ್ಠವೆಂದು ತೋರಿಸಬೇಕಾಗಿದೆ ಸತ್ಯಭಾಮೆಯು ನೇಮಿಯ ಒಗ್ಗೆ ಅಗೌರವದ ಮಾತನಾಡಿದಾಗ ಆತ ಛಲದಿಂದ ತನ್ನ ಬಲ, ಶಕ್ತಿ, ಸಾಮರ್ಥ್ಯಗಳನ್ನು ತೋರುತ್ತಾನೆ. ಇದರಿಂದಾಗಿ ಕೃಷ್ಣನು ತನ್ನ ಕುಶಲ ಯೋಜನೆಯಿಂದಾಗಿ ನೇಮಿನಾಥನ ವೈವಾಹಿಕ ಸಿದ್ಧತೆ ನಡೆಯಿಸುತ್ತಾನೆ. ಆದರೆ ಮದುವೆಯ ಸಮಾರಂಭವು ನೇಮಿಯ ದೀಕ್ಷಾಸಮಾರಂಭವಾಗಿ ಪರಿವರ್ತಿತವಾಗಿ ಆತನು ವೈರಾಗ್ಯ ತಾಳಿ ತಪಶ್ಚರ್ಯಕ್ಕೆ ಹೊರಟು ನಿಲ್ಲುತ್ತಾನೆ. ಸಂದರ್ಭವಶಾತ್ ನೇಮಿನಾಥನು ತನ್ನ ವಿವಾಹ ಭೋಜನಕ್ಕಾಗಿ ಪಶುವಧೆ, ಮಾಂಸಭಕ್ಷಣೆಗಳು ನಡೆಯಲಿವೆಯೆಂಬು ತಿಳಿದು ನಿವೃತ್ತಿ ಮಾರ್ಗವನ್ನು ಹಿಡಿಯುತ್ತಾನೆ. ಅದೇ ಆವನ ಕೈವಲ್ಯೋದಯ. ಮುಂದೆ ದ್ವಾರಾವತಿಯ ಪ್ರಳಯ ಕಾಲ, ಯಾದವ ವಂಶವಿನಾಶ, ಕೃಷ್ಣನ ಮರಣ, ಪಾಂಡವರ ಕೈವಲ್ಯಗಳು ನಿರೂಪಿಸಲ್ಪಡುತ್ತವೆ. ನೇಮಿನಾಥನ ನಿರ್ವಾಣದೊಂದಿಗೆ ಕಥಾವಾಹಿನಿಯು ಕೊನೆ.

ಹೀಗೆ ಜೈನ ಪರಂಪರೆಯ ಭಾರತ ಕಥೆಯು ನೇಮಿನಾಥನ ಚರಿತ್ರೆಗೆ ಪ್ರಾಧಾನ್ಯವಿತ್ತು ಹರಿವಂಶ ಕುರುವಂಶಗಳ ಕಥೆಗಳನ್ನು ಹಾಸು ಹೊಕ್ಕಾಗಿ

ಹೆಣೆದುಕೊಳ್ಳುತ್ತದೆ. ವ್ಯಾಸ ಭಾರತಕ್ಕೂ ಜೈನ ಪರಂಪರೆಯ ಹರಿವಂಶಕೂ ಇರುವ ಹಲವಾರು ವ್ಯತ್ಯಾಸಗಳಲ್ಲಿ ಕೆಲವು ಹೀಗಿವೆ.

೧) ದ್ರೌಪದಿ ಪಂಚಪತಿಗಳ ಸತಿಯಲ್ಲ. ಅರ್ಜುನನ್ನು ವರಿಸಿದ ಅರ್ಧಾಂಗಿ. ಭೀಮ, ಧರ್ಮಾದಿಗಳಿಗೆ ಬೇರೆ ಪತ್ನಿಯರು.

೨) ಜರಾಸಂಧನು ಒಬ್ಬ ದೊಡ್ಡ ಚಕ್ರವರ್ತಿ.

೩) ಕರ್ಣನ ಜನನ, ಮರಣಗಳ ಕಥೆ ಭಿನ್ನವಾಗಿದೆ. ಆತ ಯುದ್ಧದಲ್ಲಿ ಸಾಯದೇ ಜೈನ ಯತಿಗಳಿಂದ ದೀಕ್ಷೆ ಪಡೆದು ಸ್ವರ್ಗದಲ್ಲಿ ದೇವತ್ವ ಪಡೆಯುತ್ತಾನೆ.

೪) ಅರ್ಜುನನ ಸಾರಥಿ ಶ್ರೀಕೃಷ್ಣನಲ್ಲ. ಕೃಷ್ಣನೆಂಬ ಶ್ರೀಕೃಷ್ಣನ ಮಿತ್ರ.

೫) ದ್ರೌಪದಿಯ ವಸ್ತ್ರಾಪಹರಣದ ಪ್ರಸಂಗವೇ ಇಲ್ಲ. ಧರ್ಮನು ದ್ರೌಪದಿಯನ್ನು ಪಣಕ್ಕೆ ಹಚ್ಚುವ ಸನ್ನಿವೇಶಕ್ಕೂ ಅವಕಾಶವಿಲ್ಲ.

೬) ಪಾಂಡವ ಅಜ್ಞಾತವಾಸದಲ್ಲಿ ದ್ರೌಪದಿ ತನ್ನ ತವರು ಮನೆಯಲ್ಲಿ ಇದ್ದು ಕೀಚಕನ ವಧೆ ಪ್ರಸಂಗವು ಇಲ್ಲ.

ಸಾಳ್ವ ಕವಿಯ (ಸು. ೧೪೮೧) ಭಾರತವೆಂದು ಪ್ರಸಿದ್ಧವಾದ ಕಾವ್ಯವೂ ನೇಮಿನಾಥ ತೀರ್ಥಂಕರರ ಚರಿತ್ರೆಯೆ ಆಗಿದೆ. ಹೀಗೆಂದರೂ ಇದು ಉದ್ದಕ್ಕೂ ನೇಮಿನಾಥ ಕಥೆಯೆ ಆಗಿರದೆ ಪಾಂಡವ ಕೌರವರ ಹಾಗೂ ಶ್ರೀಕೃಷ್ಣ ಬಲರಾಮರ ಕುರುವಂಶ, ಹರಿವಂಶಗಳ ಮಹಾಕಥೆಯೆ ಆಗಿದೆ.

ಸಾಳ್ವ ಕವಿಯ ಭಾರತವು ೧೬ ಪರ್ವಗಳುಳ್ಳದ್ದು. ಆ ಪರ್ವಗಳು ಕ್ರಮವಾಗಿ— ಆದಿ, ಅನ್ವಯ, ವಸುದೇವ, ಕೃಷ್ಣೋದಯ, ಕಂಸ ಮರ್ದನ, ಅಭ್ಯುದಯ, ಪ್ರದ್ಯುಮ್ನ, ಇಂದ್ರ, ಕಲ್ಯಾಣ, ಆರಣ್ಯ, ಚಕ್ರ, ದೀಕ್ಷಾ, ಸಭಾ ಮತ್ತು ನಿರ್ಯಾಣ ಹಿಂಗಿವೆ. ಈ ಮಹಾ ಕಾವ್ಯಕ್ಕೆ ನಾಯಕ ೨೨ ನೆಯ

ತೀರ್ಥಂಕರನಾದ್ರ ನೇಮಿನಾಥನೆ. ಇದರಿಂದಾಗಿ ಜೈನ ಭಾರತವು ನೇಮಿನಾಥ ಚರಿತೆ. ಇದಕ್ಕೆ 'ಸಾಳ್ವ ಭಾರತ' ಎಂದು ಹೆಸರು ಬರಲು ಕಾರಣ ನೇಮಿನಾಥನ ಚರಿತ್ರೆ ಹಿನ್ನೆಲೆಯಲ್ಲುಳಿದು, ಮಹಾಭಾರತ ಕಥೆಗೆ ಮಹತ್ವ ನೀಡಿದ್ದಾನೆಂಬುದು. ಮಂಗರಸನ ('ನೇಮಿ ಜಿನೇಶ ಸಂಗತಿ') ಕಾವ್ಯವೂ ಇದೇ ಜಾಡು ಹಿಡಿದಿದೆ. ಸಾಳ್ವ ಭಾರತದ ಒಟ್ಟು ೬೪ ಸಂಧಿಗಳಲ್ಲಿ ಹತ್ತು ಸಂಧಿಗಳಲ್ಲಿ ಮಾತ್ರ ನೇಮಿನಾಥನ ಕಥೆ ಇದೆ. ಉಳಿದ ೫೪ ಸಂಧಿಗಳು ನೇಮಿನಾಥನ ಬಂಧುಗಳ ಕಥೆ

ಕರ್ಣಪಾರ್ಯನು ಪಂಪ ರನ್ನರ ಪ್ರಭಾವದಿಂದಾಗಿ ನೇಮಿನಾಥನ ಕಥೆಯನ್ನು ನಿಮಿತ್ತ ಮಾತ್ರವಾಗಿ ಹೇಳಿ ಮಹಾಭಾರತ ಕಥೆಗೇ ಪ್ರಾಧಾನ್ಯ ನೀಡಿದ್ದಾನೆ. ಇವನ ತರುವಾಯ ಬಂದ ನೇಮಿಚಂದ್ರ ಕವಿ ನೇಮಿನಾಥ ಚರಿತೆಯನ್ನು ಹೆಚ್ಚು ಕಾವ್ಯನಿಷ್ಠವಾಗಿ ಕಲಾಪೂರ್ಣವಾಗಿ ನಿರ್ವಹಿಸಿದ ಕೀರ್ತಿಗೆ ಅರ್ಹನಾಗುತ್ತಾನೆಂದು ಪ್ರೊ. ಹಂ.ಪಾ. ನಾಗರಾಜಯ್ಯ ಅಭಿಪ್ರಾಯ ಪಟ್ಟಿದ್ದಾರೆ. (ಸಮಗ್ರ ಕ. ಸಾ. ಚರಿತ್ರೆ ಸಂ. ೪ ಭಾ ೨ ಪ ೫೦೪) ನೇಮಿಚಂದ್ರನ ಪರಂಪರೆಯನ್ನೆ ಬಂಧುವರ್ಮ (ಸು. ೧೨೦೦), ಮಹಾಬಲ (ಸು. ೧೨೫೪) ಕವಿಗಳು ತಮ್ಮ ಹರಿವಂಶಾಭ್ಯುದಯ ಮತ್ತು ನೇಮಿನಾಥ ಪುರಾಣಗಳಲ್ಲಿ ಮುಂದುವರೆಸಿಕೊಂಡು ಬಂದರು.

ಹೀಗೆ ಕನ್ನಡದಲ್ಲಿ ಜೈನ ಪರಂಪರೆಯ ಭಾರತವೆಂದರೆ ಮೂಲ ಸಂಸ್ಕೃತದ 'ಹರಿವಂಶ ಪುರಾಣ', ಮತ್ತು 'ಮಹಾ ಪುರಾಣ'. ಅವುಗಳ ಕರ್ತೃಗಳು ಜಿನಸೇನಾಚಾರ್ಯರು ಮತ್ತು ಗುಣಭದ್ರಾಚಾರ್ಯರು. ಈ ಮೂಲ ಮಾತೃನೆಯಿಂದ ಸ್ಫೂರ್ತಿಪಡೆದು ಕನ್ನಡದಲ್ಲಿ ೧೦ನೆಯ ಗುಣವರ್ಮ, ಚಾವುಂಡರಾಯ, ಕರ್ಣಪಾರ್ಯ, ನೇಮಿಚಂದ್ರ, ಬಂಧುವರ್ಮ, ಮಹಾಬಲ, ೩೦ನೆಯ ಮಂಗರಸ, ಸಾಳ್ವ ಮೊದಲಾದ ಕನ್ನಡ ಕವಿಗಳು ರಚಿಸಿದ ನೇಮಿನಾಥ ಪುರಾಣದ ಆವೃತ್ತಿಗಳಿ ಜೈನ ಪರಂಪರೆಯ ಭಾರತವೆನಿಸಿದವು.

ಕನ್ನಡಕ್ಕೆ ಆದಿಕವಿಯೆನಿಸಿದ ಪಂಪನು ರಚಿಸಿದ ಮಹಾಭಾರತ ಕಾವ್ಯವು 'ಪಂಪ ಭಾರತ'ವೆಂದೇ ಪ್ರಸಿದ್ಧ. ಮುಖ್ಯವಾಗಿ ಅದು 'ವಿಕ್ರಮಾರ್ಜುನ

ವಿಜಯ'. ತನ್ನ ಆಶ್ರಯದಾತನಾದ ಅರಿಕೇಸರಿಯ ವಿಕ್ರಮವನ್ನು ಅರ್ಜುನನ ಪರಾಕ್ರಮದೊಂದಿಗೆ ಹೋಲಿಸಿ ಹೊಗಳುವ ಉದ್ದೇಶದಿಂದ ಪಂಪಭಾರತ 'ವಿಕ್ರಮಾರ್ಜುನ ವಿಜಯ'ವಾಯಿತು. ಆಡು ರೀತಿ ರನ್ನನ 'ಗದಾಯುದ್ಧ'ವು 'ಸಾಹಸ ಭೀಮ ವಿಜಯ'ವಾಗಿ ರನ್ನನ ಆಶ್ರಯದಾತ ಸತ್ಯಾಶ್ರಯ, 'ಇರಿವ ಬೆಡಂಗ'ನ ಸಾಹಸದ ಕತೆಯಾಗಿದೆ.

ಜೈನನಾದ ಪಂಪಕವಿ ವ್ಯಾಸಭಾರತ ಪ್ರಭಾವದಿಂದಾಗಿ ವ್ಯಾಸರ ವಚನಾಮೃತವಾರ್ಧಿಯನ್ನು ಈಸಲು ಟೊಂಕ ಕಟ್ಟಿದನು. ಆದರೆ ಅದನ್ನು ಕೇವಲ ಲೌಕಿಕ ದೃಷ್ಟಿಯಿಂದ ಮಾತ್ರ ನೋಡಿ, ಆ ಜಾಡನ್ನು ಹಿಡಿದ. ಪಂಚಮ ವೇದವೆನಿಸಿದ ಮಹಾಭಾರತದ ಬಗ್ಗೆ ಅವನಿಗೆ ಧಾರ್ಮಿಕ ಭಾವನೆ ಇಲ್ಲ. ಹಿಂದಿನ ತಲೆಯವರೆಗೂ ವೈದಿಕ ಪರಂಪರೆಯಲ್ಲಿ ಬೆಳೆದುಬಂದ ಬಾಳು; ಈಗ ಜೈನ ಧರ್ಮೀಯ ರೀತಿಯನ್ನೂ ಉಪೇಕ್ಷಿಸಿದ ಸಂಸ್ಕಾರ; ಇತ್ತ ಆಶ್ರಯದಾತನ ಗುಣಗಳನ್ನು ಕಥಾನಾಯಕನಲ್ಲಿ ಆರೋಪಿಸಿ ಕಥೆಯನ್ನು ನಿರ್ವಹಿಸಿಕೊಂಡು ಹೋಗುವ ಸಂಕಲ್ಪ— ಹೀಗೆ ಮೂರು ಬಗೆಯಿಂದಾಗಿ ಪಂಪಭಾರತವು ತನ್ನದೇ ಆದ ಕೆಲವು ಆಭಾಸಗಳಿಂದ ಕೂಡಿರುವುದು ಅನಿವಾರ್ಯವಾಯಿತು. ಬಹುಶಃ ರನ್ನನ ಗುಣವರ್ಮನ 'ಹರಿವಂಶ'ವನ್ನೂ ತನ್ನ ಮೂಲ ಮಾತೃಕೆಯಾದ ಜಿನಸೇನಾಚಾರ್ಯರ ಸಂಸ್ಕೃತ 'ಹರಿವಂಶ ಪುರಾಣ'ವನ್ನೂ ಓದಿಕೊಂಡಿರಬೇಕು. ಇದರಿಂದಾಗಿ ದ್ರೌಪದಿ ಪಂಚಪತಿಗಳ ಪತ್ನಿಯಾಗಿರದೆ ಅರ್ಜುನನೊಬ್ಬನಿಗೇ ಸ್ವಯಂವರ ವಧುವಾಗಿ ಚಿತ್ರಿತಳಾಗಿದ್ದಾಳೆ. ಆದರೆ ವ್ಯಾಸಭಾರತದ ಕಥಾ ಸೂತ್ರವನ್ನನುಸರಿಸುತ್ತ ದ್ರೌಪದಿಯ ಮಾನಭಂಗವೆ ಸೇಡನ್ನು ತೀರಿಸಿಕೊಳ್ಳುವ ಹರಿಬವನ್ನು ಹೊತ್ತ ಭೀಮನು ತನ್ನ ನೂದಿನಿಯನ್ನು 'ತನ್ನ 'ತಲೋದರಿ' ಯೆಂದು ಬಗೆದು, ದುಶ್ಶಾಸನ ದುರ್ಯೋಧನರೊಡನೆ ಕಾದಿ ವಧೆಗೈಯುವುದು ಸಯುಕ್ತಿಕವೆನಿಸುವುದಿಲ್ಲ. ಸ್ವತಃ ಅರ್ಜುನನು ಸುಭದ್ರೆ, ದ್ರೌಪದಿಯರೆಂತಹ ಇಬ್ಬರು ರಾಣಿಯರ ನಡುವೆ ಗೊಂದಲಗೆಟ್ಟಂತೆ ಮಾಡುತ್ತಾನೆ. ಇದೇ ಬಗೆಯಲ್ಲಾಗಿ ತನ್ನ ಪೋಷಕ ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸುತ್ತ ಅರ್ಜುನನನ್ನು 'ಸಾಮಂತ ಚೂಡಾಮಣಿ' ಎಂದು ಕರೆಯುತ್ತಾನೆ. 'ಸಾಮಂತ ಚೂಡಾಮಣಿ'

ಅರಿಕೇಸರಿಯಲ್ಲವೆ ಅರ್ಜುನನಲ್ಲ. ದ್ವಿಭಾರ್ಯನಾದ ಅರ್ಜುನನು ಸುಭದ್ರೆಯನ್ನು ಪಟ್ಟಮಹಿಷಿಯನ್ನಾಗಿ ಮಾಡಿಕೊಂಡಿರುವುದರಿಂದ ವನವಾಸದ ಕಷ್ಟನಿಷ್ಠುರಗಳನ್ನು ಅನುಭವಿಸುವುದು ದ್ರೌಪದಿಯ ಪಾಲಿಗೆ. ಶ್ರೀಕೃಷ್ಣನಲ್ಲಿ ದೈವೀ ಮಹಾತ್ಮೆಯನ್ನು ತೋರ್ಪಡಿಸದೆ ಅವನನ್ನು ಸಾಮಾನ್ಯನಂತೆ ಚಿತ್ರಿಸಿರುವುದಕ್ಕೂ ಜೈನ ದೃಷ್ಟಿಯೆ ಕಾರಣವಾಗಿದೆ. ಭಾರತ ಕಥೆಗೆ ಮೂಲ ಗಿಡಲೀಯದೆ ನಿರೂಪಿಸಲೆತ್ನಿಸಿದ್ದರೂ ಮೇಲಿನ ರೀತಿಯ ಅಭಾಸಗಳು ಅನಿವಾರ್ಯವೆಂಬಂತೆ ನುಸುಳಿಕೊಂಡವು.

ಪಂಪಕವಿಯು ಮೂಲ ಭಾರತದ ಸಮಸ್ತ ಕಥಾಸಾರವನ್ನು ತನ್ನ ಚಂಪೂ ಮಹಾಕಾವ್ಯದ ೧೪ ಆಶ್ವಾಸಗಳಲ್ಲಿ ಹೇಳಿದ್ದಾನೆ. ಆನುಪೂರ್ವಿ ಹೀಗಿದೆ :

ವ್ಯಾಸ ಭಾರತದಲ್ಲಿ—	ಪಂಪಭಾರತದಲ್ಲಿ —
ಆದಿಪರ್ವ	೧ ರಿಂದ ೫ ಆಶ್ವಾಸಗಳು
ಸಭಾಪರ್ವ	೬ ಮತ್ತು ೭ನೆಯ ಆಶ್ವಾಸಗಳು
ಅರಣ್ಯಪರ್ವ	೭ ಮತ್ತು ೮ನೆಯ ಆಶ್ವಾಸಗಳು
ವಿರಾಟಪರ್ವ	೮ ಮತ್ತು ೯ನೆಯ ಆಶ್ವಾಸಗಳೆ
ಉದ್ಯೋಗ ಪರ್ವ	೯ನೆಯ ಆಶ್ವಾಸ
ಭೀಷ್ಮ ಪರ್ವ	೧೦ ಮತ್ತು ೧೧ನೆಯ ಆಶ್ವಾಸಗಳೆ
ದ್ರೋಣ ಪರ್ವ	೧೧ ಮತ್ತು ೧೨ನೆಯ ಆಶ್ವಾಸಗೆಳು
ಕರ್ಣ ಪರ್ವ	೧೨ ಮತ್ತು ೧೩ನೆಯ ಆಶ್ವಾಸಗಳು
ಶಲ್ಯ-ಗದಾ ಪರ್ವಗಳು	೧೪ ನೆಯ ಆಶ್ವಾಸ
ಸೌಪ್ತಿಕ ಪರ್ವ	೧೩ ನೆಯ ಆಶ್ವಾಸ
ಸ್ತ್ರೀ ಪರ್ವ	೧೪ ನೆಯ ಆಶ್ವಾಸ
ಶಾಂತಿ ಪರ್ವ	೧೪ನೆಯ ಆಶ್ವಾಸ

ಚತುರ್ದಶಾಶ್ವಾಸದ ೫೨ನೆಯ ಪದ್ಯದ ನಂತರ ಬರುವ ಗದ್ಯದಲ್ಲಿ 'ಆದಿವಂಶಾವತಾರ ಸಂಭವ ರಂಗಪ್ರವೇಶ'ದಿಂದ ಅರ್ಜುನಾಭಿಷೇಕದ ವರೆಗಿನ ಕಥಾಂಶಗಳನ್ನು ಸಂಗ್ರಹವಾಗಿ ಸುಂದರವಾಗಿ ಸೂಚಿಸಿದ್ದಾನೆ.

ಲೌಕಿಕ ದೃಷ್ಟಿಯಿಂದ ಮಾತ್ರ ವ್ಯಾಸ ಭಾರತವನ್ನು ನೋಡಿ ಅದನ್ನು ಪುನಃ ಸೃಷ್ಟಿಸಿದ ಪಂಪಕವಿ ಶಾಂತಿಪರ್ವಕ್ಕೆ ವಿಕ್ರಮಾರ್ಜುನ ವಿಜಯವನ್ನು ಹಾಡಿ, 'ಸಾಮಂತಚೂಡಾಮಣಿ'ಯ ಪಟ್ಟ ಬಂಧನ ಮಹೋತ್ಸವವನ್ನು ನೆರವೇರಿಸುತ್ತಾನೆ. ಪೌರಾಣಿಕಕ್ಕೆ ಸಂಬಂಧಿಸಿದ ಆನುಪೂರ್ವಿಗಳನ್ನು ಕವಿ ಬಿಟ್ಟು ಬಿಟ್ಟಿದ್ದಾನೆ. ಅಶ್ವಮೇಧ ಪರ್ವ, ಮಹಾಪ್ರಸ್ಥಾನ, ಸ್ವರ್ಗಾರೋಹಣಾದಿ ಪರ್ವಗಳು ಪಂಪಕವಿಗೆ ಇಲ್ಲಿ ಪ್ರಸ್ತುತವಾಗಿಲ್ಲ.

ಸ್ತ್ರೀ ಪರ್ವ, ಶಾಂತಿ ಪರ್ವಗಳೆರಡೂ ಹದಿನಾಲ್ಕನೆಯ ಆಶ್ವಾಸದಲ್ಲಿ ಸಮಾವೇಶಗೊಳ್ಳುತ್ತವೆ. ಕುರುಕ್ಷೇತ್ರದಲ್ಲಿ ಜಯಶಾಲಿಯಾದ ಅರ್ಜುನನ್ನು ಚಕ್ರಿಯೊಡನೆ ಯುದ್ಧದ ನಾಶವಿನಾಶಗಳನ್ನು ವೀಕ್ಷಿಸುತ್ತಿರಲು ಧೃತರಾಷ್ಟ್ರ ಗಾಂಧಾರಿಯರೂ ಅಲ್ಲಿಗೇ ನಡೆತರುತ್ತಾರೆ. ಉಳಿದ ರಾಣಿಯರೂ ಅಲ್ಲಿಗೇ ಧಾವಿಸಿ ಬಂದು ಮೃತರಾದ ತಂತಮ್ಮ ಪತಿರಾಯರ ಕಳೇಬರಗಳನ್ನು ಕಂಡು ಶೋಕನಿರ್ಭರತೆಯಿಂದ ಆಕ್ರೋಶ ಮಾಡುತ್ತ ಕಣ್ಣೀರು ಹಾಕಿ ಗೋಳಾಡ ತೊಡಗುತ್ತಾರೆ. ಹೀಗೆ ಶೋಕಾಕ್ರಾಂತರಾಗಿದ್ದವರನ್ನು ನಾರಾಯಣನ, ಸಂತೈಸಿ, ಜಗದ್ವ್ಯಾಪಾರವೆಲ್ಲಿಯೂ ಈಶ್ವರೇಚ್ಛೆಯಂತೆ ಜರಗುತ್ತದೆ. ಇವ ಕ್ಕಾಗಿ ಶೋಕಿಸಿ ಪ್ರಯೋಜನವಿಲ್ಲವೆಂದು ಬೋಧಿಸುತ್ತಾನೆ. ಮುಂದೆ ಅದೇ ಸ್ಥಳಕ್ಕೆಬಂದ ಕುಂತಿಯಿಂದ ಪಾಂಡವರಿಗೆ ಕರ್ಣನ ಜನನರಹಸ್ಯವು ಭೇದಿಸಲ್ಪ ಟ್ಟಾಗ ಪಾಂಡವರೆಲ್ಲ ಪಶ್ಚಾತ್ತಾಪದಿಂದ ಬಳಲುತ್ತಾರೆ. ಧೃತರಾಷ್ಟ್ರಗಾಂಧಾರಿ ಯರು ತಮ್ಮ ಜೀವನದ ಉಳಿದಭಾಗವನ್ನು ವನಸ್ಥಾನದಲ್ಲಿ ಕಳೆಯಲೆಂದು ತೆರಳುತ್ತಾರೆ ಕುಂತಿಯು ಕೂಡ ಧರ್ಮಪುತ್ರನ ಅನುಮತಿ ಪಡೆದು ತಾನೂ ಗಾಂಧಾರಿಯೊಡನೆ ವನವಾಸಕ್ಕೆ ತೆರಳುತ್ತಾಳೆ. ಧರ್ಮರಾಯನು ಕುರುಕ್ಷೇತ್ರ ಯುದ್ಧವು ಸಮಾಪ್ತವಾಗಿ ಭೀಮಾರ್ಜುನರಿಂದ ವಿಜಯವು ಪ್ರಾಪ್ತವಾಗಿರಲು ಆ ವೈಭವ ಮಾತ್ರವೇ ತನಗೆ ಸಾಕೆಂದೂ ತಾನು ಸಿಂಹಾಸನವನ್ನು ಒಲ್ಲೆನೆಂದೂ ನಾರಾಯಣನಲ್ಲಿ ಅರಿಕೆ ಮಾಡಿಕೊಳ್ಳುತ್ತಾನೆ, ಸಿಂಹಾಸನಕ್ಕೆ ಹರಿಗನೇ ಸಮರ್ಥನೆಂದೂ ಅಂದೇ ಹಸ್ತಿನಾವತಿಗೆ ಪ್ರಯಾಣ ನಡೆಯಬೇಕೆಂದೂ ನುಡಿಯಲು ಮುಕುಂದನೂ ಅದಕ್ಕೆ ಒಪ್ಪುತ್ತಾನೆ. ಆ ಮೇರೆಗೆ ಪಾಂಡವರು ಸಕಲ ಮಂಗಲ ಸೌರಂಭದೊಂದಿಗೆ ವಿಕ್ರಮಾರ್ಜುನನನ್ನು ಗಜಾರೋಹಿಯಾಗಿ

ಮಾಡಿ ಗಜಪುರ ಪ್ರವೇಶಮಾಡುತ್ತಾರೆ. ಇಂದ್ರನೊಡನೆ ಅರ್ಧಾಸನವನ್ನೇರಿದ ಅರ್ಜುನನನ್ನೂ ಯಾದವ ಪುತ್ರಿಯಾದ ಸುಭದ್ರೆಯನ್ನೂ ಪಟ್ಟ ಗಟ್ಟುತ್ತಾರೆ. ಇದು ಪಂಪಕವಿಯ ಮಂಗಲ ಮುಕ್ತಾಯ. ಹೀಗೆ ಗುಣಾರ್ಣವನು ಎಲ್ಲ ಸುಗುಣಗಳಿಂದಲೂ ಮಹಾಮಹಿಮೆಯಿಂದಲೂ ಕೂಡಿ ಭೋಗ ಪಡುತ್ತಾ ಆ ಆ ಕಾಲಕ್ಕೂ ಆ ಆ ಸಂದರ್ಭಕ್ಕೂ ತಕ್ಕಂತೆ ನಡೆಯುತ್ತ ತನ್ನ ಪೆಂಪೂ ಪ್ರತಿಭೆಯೂ ಪರಾಕ್ರಮವೂ ಪ್ರಖ್ಯಾತಿಯೂ ಮೂರು ಲೋಕಗಳಲ್ಲಿಯೂ ಹರಡುವಂತೆ ಭೂಮಿಯನ್ನು ಪಾಲಿಸುತ್ತಿದ್ದನಂತೆ! ಇದು ಪಂಪ ಮಹಾ ಕವಿಯ ಶಾಂತಿಪರ್ವದ ಸಮಾಪ್ತಿ. ಜೈನ ಪರಂಪರೆಯೂ ಅಲ್ಲದ ವ್ಯಾಸ ಭಾರತ ಕ್ರಮವೂಅಲ್ಲದ ತನ್ನ ಆಶ್ರಯದಾತನಾದ ಅರಿಕೇಸರಿಯ ದಿಗ್ವಿಜಯ, ಶತ್ರುನಾಶ, ತನ್ನ ರಾಣಿ ಸಮೇತ ಸಿಂಹಾಸನಾರೋಹಣ, ರಾಜ್ಯಪರಿಪಾಲನೆಗಳನ್ನೆ ಮನದಂದು ಈ ಮೂರನೆಯ ರೀತಿಯ ಮುಕ್ತಾಯವನ್ನು ಸಾಧಿಸಿದ್ದಾನೆ.

ಹೀಗೆ ಭಾರತ ಕಥೆಯೊಡನೆ ಸ್ವಕೀಯ ಸಂಗತಿಗಳನ್ನು ಸೇರಿಸಿ ಹೇಳಿರುವುದು ಪಂಪನ ವ್ಯತಿಕ್ರಮ ವೈಶಿಷ್ಟ್ಯ. ಇದರೊಂದಿಗೆ ತಾನು ಹಿಂದೆ ಬನವಾಸಿ ಪ್ರಾಂತದ ದಟ್ಟವಾದ ವನಗಳಲ್ಲಿ ಆಲೆದಾಡಿ ಆನಂದಿಸಿದ ರಸನಿಮಿಷಗಳ ಸವಿಸ್ಮೃತಿಗಳನ್ನೂ ಕಾವ್ಯವಿಸ್ತರದಲ್ಲಿ ತಂದು ಸೇರಿಸುತ್ತಾನೆ. ನಿಜವಾದ ಕವಿ ಸಂವೇದನಾಶೀಲತೆ ಇದು. ಈ ಲಲಿತ ಸುಖದ ಅನುಭವವನ್ನು "ಅವನ ಮನಸ್ಸು ತಡೆದರೂ ನಿಲ್ಲದೇ— ಅಂಕುಶರಿಂದ ಚುಚ್ಚಿದರೂ ಲಕ್ಷ್ಯ ಮಾಡದ ಆನೆಯಂತೆ— ಬನವಾಸಿ ದೇಶವನ್ನು ನೆನೆದುಕೊಳ್ಳುತ್ತದೆ." ಎಂದು ತಿ.ನಂ ಶ್ರೀಕಂಠಯ್ಯನವರು ನುಡಿದಿದ್ದಾರೆ. (ಪಂಪ ಒನೆಯ ಮುದ್ರಣ ಪು. ೫೫)

ಪಂಪನು ಸ್ವತಂತ್ರ ಮನೋವೃತ್ತಿಯ ಕವಿ, "ಪೆರರೀವುದೇಂ, ಪೆರರ್ ಮಾಡುವುದೇಂ. ಪೆಳರಿಂದಪ್ಪುದೇಂ" ಎಂದು ನುಡಿಯುವ ಸ್ವಾಭಿಮಾನದ ಕೆಚ್ಚು ಅವನದು. ಆದರೂ ಅರಿಕೇಸರಿಯಲ್ಲಿ ಪುರಾಣಪುರುಷರ ಉದಾತ್ತ ಗುಣಗಳನ್ನು ಕಂಡು, ಅವನನ್ನು ವಿಕ್ರಮಾರ್ಜುನನಿಗೆ ಹೋಲಿಸಿ ಭಾರತಕಾವ್ಯ ಬರೆದನೇಕೆ ? ಮುಖ್ಯವಾಗಿ ಪಂಪನು ಅರಿಕೇಸರಿಯಲ್ಲಿ ಕಂಡುದು ಶುದ್ಧ ಸ್ನೇಹವನ್ನು. ಅದು ಸ್ವಾಮಿ-ಸೇವಕ ಭಾವವನ್ನು ಮೀರಿದ್ದು.

ಕವಿಯಾಗಿದ್ದಂತೆ ಕಲಿಯೂ ಆಗಿದ್ದ ಪಂಪನು ತನ್ನ ಒಡೆಯನ ಶೂರಸಾಹಸ ಗಳನ್ನು ಕಾಳಿಗದಕಣಗಳಲ್ಲಿ ಕಂಡವನಾಗಿದ್ದ. ರಾಜನ, ಕಲಿಯಾದ ಈ ಕವಿಯಲ್ಲಿ ವಿಶೇಷ ಸ್ನೇಹ ಗೌರವಗಳುಳ್ಳವನಾಗಿ ಆವನಿಗೆ ಲೆಕ್ಕವಿಲ್ಲದಷ್ಟು ವಸ್ತು ಒಡವೆ ಗಳನ್ನೂ ಧರ್ಮಪುರವೆಂಬ ಅಗ್ರಹಾರವನ್ನೂ ಕಾಣಿಕೆಯಾಗಿ ಕೊಟ್ಟಿದ್ದನು. ಹೀಗಾಗಿ ಕೃತಜ್ಞತೆ, ಸ್ನೇಹಭಾವಗಳಿಂದಾಗಿ ಪಂಪನು 'ಅರಿಕೇಸರಿಯನ್ನು' ಮಹಾಭಾರತದ ನಾಯಕನನ್ನು ಮಾಡಿ ಯದುವಂಶ ಕನ್ಯೆಯೂ ರಾಜನ ಪತ್ನಿಯೂ ಆದ ಲೋಕಾಂಬಿಕೆಯಂತಿದ್ದ ಸುಭದ್ರೆಯೊಂದಿಗೆ ಆತನನ್ನು ಪಟ್ಟ ಗಟ್ಟುತ್ತಾನೆ. ಕವಿಯ ಕೃತಜ್ಞತೆ ಕರ್ಣನ ಸ್ವಾಮಿನಿಷ್ಠೆಯಾಗಿ ಅಭಿವ್ಯಕ್ತ ಗೊಂಡಿದ್ದರೆ, ಕವಿಯ ನಾಯಕಪ್ರೇಮ 'ಗುಣಾರ್ಣವ'ನನ್ನು 'ಕೊಂಡಾ ತುವಲ್ಲಿ ಪ್ರಕಟಗೊಂಡಿದೆ. 'ಪಂಪನು ಜೈನನಾಗಿದ್ದರೂ ವ್ಯಾಸ ಕಥೆಯನ್ನು ಶಿಥಲಂಬಿಸಿದ್ದು ಅವನ ಉದಾರ ದೃಷ್ಟಿಯನ್ನು ತೋರಿಸುತ್ತದೆ. ಅವನು ಜಿಜವಾದ ಕವಿಯೆಂಬುದನ್ನು ಸಾರುತ್ತದೆ' ಎಂಬ ತಿ. ನಂ. ಶ್ರೀಕಂಠಯ್ಯ ರವರ ಮಾತು ಒಪ್ಪುವಂತಿದೆ. (ಪಂಪ. ಪು ೧೨)

ವ್ಯಾಸ ಭಾರತದ ಕಥಾವಸ್ತುಸ್ವಾರಸ್ಯಕ್ಕೆ ಮನಸ್ಸೋತಿದ್ದ ಪಂಪನು ವ್ಯಾಸ ಭಾರತವನ್ನೆ ಅನುಸರಿಸಿದ ಎನ್ನುವುದರ ಜೊತೆಗೆ ಅರಿಕೇಸರಿಯು ವೈದಿಕ ಮತದವನಾದ್ದರಿಂದಲೂ ಆತನಪತ್ನಿ ಲೋಕಾಂಬಿಕೆ ಯೊದವ ನೆನೆತನದವಳಾದ್ದರಿಂದಲೂ ಪಂಪನ ಜೈನ ಶ್ರದ್ಧೆ ವ್ಯಾಸ ಭಾರತವನ್ನನುಸರಿ ಸುವಲ್ಲಿ ಅಡ್ಡಿಯಾಗಿನಿಂತಿಲ್ಲ. 'ವಿಕ್ರಮಾರ್ಜುನ ವಿಜಯದಲ್ಲಿ ಕಣ್ಣಿಟ್ಟು ಹೊಡುಕಿ ನೋಡಿದರೆ ಅಲ್ಲೊಂದು ಇಲ್ಲೊಂದು ಜೈನ ವಾಸನೆಯುಳ್ಳ ಮಾತೂ ಪೂರ್ಪಾಡೂ ಸಿಕ್ಕಬಹುದು' ಎಂದು ತಿ. ನಂ. ಶ್ರೀ. ಅವರು ತಮ್ಮ 'ಪಂಪ' ವಿಮರ್ಶೆಯಲ್ಲಿ (ಪು. ೩೭) ನುಡಿದಿರುವ ಮಾತೂ ಸಲ್ಲುವ ಅಭಿಪ್ರಾಯ ವಾಗಿದೆ. ಅಂತೆಯೆ ಪಂಪನು ಶ್ರೀಕೃಷ್ಣನ ಮಹಿಮೆಯನ್ನು ತುಂಬು ಕಂಠದಿಂದ ಸ್ತುತಿಸಿಲ್ಲ. ಅವನ ಜೈನ ದೃಷ್ಟಿಯೇ ಇದಕ್ಕೆ ಕಾರಣ.

ವ್ಯಾಸರ ಭಾರತವನ್ನು ಸಂಗ್ರಹವಾಗಿ ಹೇಳುವಲ್ಲಿ ಪಂಪನು ಹಲವಾರು ಉಪಾಖ್ಯಾನಗಳನ್ನೂ ನೀತಿ ಬೋಧೆತತ್ವಗಳನ್ನೂ ಅವುಗಳ ಪ್ರಸಂಗಗಳನ್ನು ಬಿಟ್ಟು ಕೊಡಬೇಕಾಯಿತು. ಜೈನನಾದ ಅವನ ದೃಷ್ಟಿಯಲ್ಲಿ ಭಾರತವು ಲೌಕಿಕ

ಕಥೆ ಯಾಗುವುದಕ್ಕೆ ಈ ವರ್ಜನೆಗಳು ಅನುಕೂಲವಾದವು, ಪಂಪನ ವಿಕ್ರಮಾರ್ಜುನ ವಿಜಯವು ವ್ಯಾಸರ ಅಣುಕೃತಿಯಲ್ಲ, ಅನುಕೃತಿಯೂ ಅಲ್ಲ ಪ್ರತಿಭಾತ್ಮಕ ಪುನಃ ಸೃಷ್ಟಿ. ಈ ಹೊಸ ನಿರ್ಮಾಣದಲ್ಲಿ ಪಾತ್ರಗಳನ್ನು ತಿದ್ದಿ ಸನ್ನಿವೇಶಗಳನ್ನು ನಿಯಗೊಳಿಸಿ ಕೆಲವು ಪ್ರಸಂಗಗಳನ್ನೂ ಕೈಬಿಟ್ಟಿದ್ದಾನೆ.

ಪಂಪನ ಪಾತ್ರಗಳಲ್ಲಿ ಜೀವಂತತೆ, ವೈಯಕ್ತಿಕತೆಗಳನ್ನು ನಾವು ಸ್ಫುಟವಾಗಿ ಕಾಣುತ್ತವೆ. ಒಂದೇ ಪದ್ಯದಲ್ಲಿ ಒಂದೊಂದೂ ವಿಶಿಷ್ಟ ಪಾತ್ರದ ವೈಶಿಷ್ಟ್ಯವನ್ನು ಹೀಗೆ ಹೇಳುತ್ತಾನೆ: "ಚಲದೊಳ್ದುರ್ಯೋಧನಂ, ನಿನ್ನಿಯೊಳಿನ ತನಯಂ, ಗಂಡಿನೊಳ್ ಭೀಮಸೇನಂ, ಬಲದೊಳ್ ಮದ್ರೇಶನ ತ್ಕುನ್ನತಿಯೊಳಮರ ಸಿಂಧೂದ್ಭವಂ, ಚಾಪವಿದ್ಯಾಬಲದೊಳ್ ಕುಂಭೋದ್ಭವಂ, ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್ನಿರ್ಮಲ ಚಿತ್ತಂ ಧರ್ಮಪುತ್ರಂ ಮಿಗಲಿವರ್ಗಳಿನೀ ಭಾರತಂ ಲೋಕಪೂಜ್ಯಂ ॥"

ಮೇಲೆ ಉದಾಹರಿಸಲಾದ ಎಂಟು ಜನ ಖ್ಯಾತರಿಂದಾಗಿ ಭಾರತವು ಲೋಕ ಪೂಜ್ಯ ಎಂದು ಹೇಳಿದ ಪಂಪನು ತನ್ನ ಕಥಾವಿಸ್ತರ್ಪಣೆಯಲ್ಲಿ ಇಬ್ಬರನ್ನು ವಿಶಾತ್ರ ಅತಿಶಯವಾಗಿ ಶ್ಲಾಘಿಸುತ್ತಾನೆ ಒಬ್ಬ ಕಥಾನಾಯಕನಾದ ಅರ್ಜುನ, ಇನ್ನೊಬ್ಬ ಕರ್ಣ, ಅರ್ಜುನನ ಹೆಚ್ಚುಗಾರಿಕೆಗಳಲ್ಲಿ ಆತ. ಇಂದ್ರ ಪುತ್ರ, ಇಂದ್ರನ ಅರ್ಧ ಸಿಂಹಾಸನವನ್ನಲಂಕರಿಸಿದ ಅಗ್ಗಳಿಕೆಯವ, ಅಗ್ನಿ ವಿಜೇತ, ಇಂದ್ರವಿಜೇತ, ಹರನೊಡನೆ ಸೆಣಸಿ ಪಾಶುಪತಾಸ್ತ್ರ ಪಡೆದ ಹೆಗ್ಗಳಿಕೆಯವ, ಶ್ರೀಕೃಷ್ಣನಂತಹನಸಾರಥ್ಯ ಪಡೆದವ, ಕರ್ಣನನ್ನು ಸಂಹರಿಸಿರುವ್ರಿಗೂ ಅಚ್ಚರಿಯನ್ನುಂಟುಮಾಡಿದವ. ಇಂತಹ ಹಿರಿಮೆ, ಹೆಮ್ಮೆಗಳ ಅರಸನೆನಿಸಿದ ಅರ್ಜುನನೆ ಭಾರತ ಯುದ್ಧಾನಂತರ ಸಿಂಹಾಸನಕ್ಕೆ ಅರ್ಹತೆಯುಳ್ಳವನೆಂದು ಧರ್ಮಪುತ್ರನು ಹೇಳುತ್ತಾನೆ: ತನಗಾದರೊ ಹಿರಿವಯಸ್ಸಿನ ಪೆಂಪೇ ಪೆಂಪು. ಆದರ ಹೊರತು ಇನ್ನೇನೂ ತನಗಿಲ್ಲವೆಂದೂ ಅರ್ಜುನನಿಗೊ 'ಮೀರಿದರಂ ತವೆ ಕೊಂದ ಪೆಂಪು, ಕಟ್ಟಾಯದ ಪೆಂಪು, ಶಕ್ರನೊಡನೇರಿದ ಪೆಂಪು'. ಆದುದರಿಂದ 'ನೀಂ ತಲೆವೀಸದೆ, ಉರ್ವರಾಶ್ರೀಯನ್ ಇದಾಗದೆನ್ನದೆ; ಒಳಕೊಳ್ ಪರಮೋತ್ಸವದಿಂ' ಎಂದು ಒಪ್ಪಿಸುತ್ತಾನೆ ಇದು ಗುಣಾರ್ಣವನ ಗುಣಗಾನ.

ಇನ್ನು ಕರ್ಣನ ಪಾತ್ರ ಚಿತ್ರಣದಲ್ಲಾದರೂ ಕವಿ ತನ್ನನ್ನೆ ಮೈಮರೆತು ವರ್ಣಿಸುತ್ತಾನೆ. ಕಥಾನಾಯಕನಾದ, ತನ್ನ ಆಶ್ರಯದಾತನನ್ನೂ ಮರೆತು ಬಣ್ಣಿಸುತ್ತಾನೆ :

ನೆನೆಯದಿರಣ್ಣ ಭಾರತದೊಳಿಂ ಪೆರರಾರುಮೆನೊಂದೆ ಚಿತ್ತದಿಂ

ನೆನೆವೊಡೆ ಕರ್ಣನಂ ನೆನೆಯು; ಕರ್ಣನೊಳಾರ್ ದೊರೆ ಕರ್ಣನೇರು ಕ-

ರ್ಣನ ಕಡು ನನ್ನಿ ಕರ್ಣನಳವಂಶಕದ ಕರ್ಣನ ಚಾಗಮೆಂದುಂ

ಕರ್ಣನ ಪಡೆಮಾತಿನೊಳ್ ಪುದಿದ್ದು ಕರ್ಣರಸಾಯನ ಮಲ್ತ ಭಾರತಂ ॥.

ಪಂಪನ ಮನಸ್ಸನ್ನು ಕರ್ಣನು ಸೆಳೆದಷ್ಟು ದುರ್ಯೋಧನನು ಸೆಳೆದಿಲ್ಲ—ಎಂಬ ಮಾತು ನಿಜ. 'ಪಂಪನ ಹೃದಯದ ಆಂತರಾಳದಲ್ಲಿ ಕರ್ಣನ ದುರ್ದೈವವನ್ನು ಕುರಿತು ವಿಶೇಷ ಮರುಕವಿದೆ. ಅವನ ಮಹಾ ಸತ್ವವನ್ನು ಕುರಿತು ವಿಶೇಷ ಗೌರವವಿದೆ: ('ಪಂಪ' ತಿ.ನಂ.ಶ್ರೀ ಪುಟ ೪೩) 'ಕರ್ಣಂಗೊಡ್ಡಿತು ದಲ್ ಭಾರತಂ' ಎಂದು ಕೃಷ್ಣನ ಬಾಯಿಂದ ಹೇಳಿಸಿದ್ದಾನೆ ಕವಿ. ಕರ್ಣ ವಧೆ ಭಾರತ ಯುದ್ಧದ ಮೂಲ, ಕೀಲ, ಕೊನೆಯ ಗುರಿ, ಕರ್ಣನ ಜನ್ಮ ರಹಸ್ಯ ದುರ್ಯೋಧನನಿಗಾಗಲಿ, ಪಾಂಡವರಿಗಾಗಲಿ ಮೊದಲೆ ತಿಳಿದಿದ್ದರೆ ಭಾರತ ಕಥೆ ಬೇರೆಯ ದಾರಿಯನ್ನೆ ಹಿಡಿಯಬಹುದಾಗಿತ್ತು.

ಕರ್ಣನು ಕೌರವನ ಬಗ್ಗೆ ತಾಳಿದ್ದ ಸ್ವಾಮಿನಿಷ್ಠೆ ಮಿಗಿಲಾದುದು. ಭೀಷ್ಮ, ದ್ರೋಣ, ವಿದುರ ಮೊದಲಾದವರು ಪಾಂಡವರ ಬಗ್ಗೆ ತೋರುತ್ತಿದ್ದ ಒಲವು, ಕೃಷ್ಣನ ಬಗ್ಗೆ ತಾಳಿದ್ದ ಭಕ್ತಿ ಭಾವಗಳು ಕರ್ಣನಿಗೆ ಇವರು ಸ್ವಾಮಿ ದ್ರೋಹ ಮಾಡುತ್ತಿದ್ದಾರೆಂದು ಅವರನ್ನು ದ್ವೇಷಿಸುವಂತಾಗಿತ್ತು. ಹೀಗಾಗಿ ಕೌರವನು ತನ್ನ ಪಕ್ಷದ ಗೆಲುವಿಗಾಗಿ ಯಾರನ್ನು ನಂಬಿದ್ದನೊ ಅವರೆಲ್ಲ ಕರ್ಣ ದ್ವೇಷಿಗಳು. ಎಷ್ಟೊ ಸಂದರ್ಭಗಳಲ್ಲಿ ಇವರಿವರ ಹುರುಡು ಅಂತಃಕಲಹಕ್ಕೆ ತಿರುಗುತ್ತಿತ್ತು. ಅಶ್ವತ್ಥಾಮನಿಗೂ ಕರ್ಣನಿಗೂ ಕಿಡಿ ಮಸಗಿದಾಗ ಕೃಪನು—

ಅಸದಳಮಾಗಿಯುಂ ಈ ನ
ಮ್ಮ ಸೈನ್ಯಮಿರಂತೊರ್ವರೊಳ್ ಸೆಣಸಿ ಖಿಳ
ವ್ಯಸನ ದೊಳೆ ಕೆಟ್ಟುದಲ್ಲದೊ
ಡೆ. ಸುಯೋಧನ ನಿನಗೆ ಮಲೆವ ಮಾರ್ಮಲಮೊಳವೆ ?

ಎಂದು ವ್ಯಸನದಿಂದ ಉದ್ಗಾರ ತೆಗೆಯುತ್ತಾನೆ. ಕೌರವ ಪಕ್ಷದ ಅತಿರಥ ಮಹಾರಥರೆಲ್ಲ ಸೂತಪುತ್ರನೆಂದು ಕರ್ಣನಲ್ಲಿ ತಾಳಿದ್ದ ತಾತ್ಸಾರ, ಆದರೂ ಆತ ಅಪ್ರತಿಮಶೂರನೆಂದು ದುರ್ಯೋಧನನಿಂದ ಲಲ್ಲೆಮಾಡಲ್ಪಟ್ಟವನೆಂದು ಆತನಲ್ಲಿ ತಾಳಿದ್ದ ಅಸೂಯೆಗಳಿಂದಾಗಿ ಕೌರವ ಪಕ್ಷದಲ್ಲಯೆ ಅಂತಃ ಕಲಹದ ವಿಷವೃಕ್ಷ ಬೆಳೆದು ಅವರ ಮುಂದಿನ ನಾಶಕ್ಕೆ ಕಾರಣವಾಯಿತು. ಇದೆಲ್ಲ ಮೂಲಭಾರತದ ಕಥೆಯೆ ಆಗಿದ್ದರೂ ಕರ್ಣನ ಪಾತ್ರದಲ್ಲಿ ಕೇಂದ್ರೀಕರಿಸಿದ್ದ ಪಂಪನಿಂದ ಕೌರವ ಪಕ್ಷದ ದುರಂತ ಚಿತ್ರಣ ಮಾರ್ಮಿಕವಾಗಿ ಬಂದಿದೆ. ಕೌರವನ ವೀರರೆಲ್ಲ ಒಂದಿಲ್ಲೊಂದು ಹೃದಯದೌರ್ಬಲ್ಯದಿಂದ ಬಳಲುತ್ತಿದ್ದುದೆ ಕೌರವ ಪ್ರಳಯಕ್ಕೆ ಪ್ರಸ್ತಾವನೆಯೆಂಬ ಅಂಶವನ್ನು ಪಂಪನ ನಿರೀಕ್ಷಣ ಶಕ್ತಿ ಪ್ರಭಾವಿಯಾಗಿ ಚಿತ್ರಿಸಿದೆ.

ಒಟ್ಟಿನಲ್ಲಿ ಗುಣಾರ್ಣವನಾದ ವಿಕ್ರಮಾರ್ಜುನನು ಕವಿತಾಗುಣಾರ್ಣವನಾದ ಪಂಪನ ಒಂದು ಕಣ್ಣಾದರೆ ದೈವವಂಚಿತ ದುರಂತ ಪಾತ್ರವಾದ ಕರ್ಣ ಕವಿಯ ಇನ್ನೊಂದು ಕಣ್ಣು.

ಮಹಾಕವಿ ಕುಮಾರವ್ಯಾಸನ ಗದುಗಿನ ಭಾರತದ ಒಂದು ರೀತಿಯೆ ಬೇರೆ. ಪಂಪನ ಕಾಲವು ವೀರರಸದ ಒಂದು ಯುಗವಾದರೆ ಕುಮಾರವ್ಯಾಸನದು ಭಕ್ತಿಯ ಪರಮಾವಧಿಯ ಕಾಲ. ಇವನು ಬಾಳಿದ ಕಾಲ ಇದೇ ಯೆಂದು ಖಚಿತವಾಗಿ ಹೇಳಲಾಗದಿದ್ದರೂ ಸ್ಥೂಲವಾಗಿ ೧೩-೧೪ನೇಯ ಶತಮಾನವೆಂದು ತಿಳಿಯ ಬಹುದಾಗಿದೆ. ಯಾವುದೆ ರಾಜನ ಆಸ್ಥಾನದ ಆಶ್ರಯವಿಲ್ಲದೆ 'ಗದುಗಿನ ವೀರ ನಾರಾಯಣ ಚರಣಾರವಿಂದ ನಿರಂತರ ಧ್ಯಾನ, ಮಧುಪಾನ, ಪುಷ್ಪವಚಿ: ಪಟ್ಟದೆ' ನಾಗಿ ಭಕ್ತಿಯ ಬಳ್ಳಿವಾಡದ ನೆಲೆಲಿನಲ್ಲಿ ಬೆಳೆದ ಜನತಾ ಕವಿ ಈತ.

ವೀನಾರಾಯಣನ ವರ ಪ್ರಸಾದದ್ರಿಂದ ಹೊರ ಹೊಮ್ಮಿದ ಕುಮಾರ ವ್ಯಾಸನ ದಶಪರ್ವಭಾರತಕ್ಕೆ ವೀರ ನಾರಾಯಣನೆ ಕವಿ. ಲಿಪಿಗಾರ ಕುಮಾರವ್ಯಾಸ! ಈ ನಿಸ್ಸೀಮ ಭಕ್ತಿನಿಗೆ ಈ ಗದುಗಿನ ಭಾರತವೆಂದರೆ ಕೃಷ್ಣ ಕಥೆ!

ತಿಳಿಯ ಹೇಳುವೆ ಕೃಷ್ಣ ಕಥೆಯನು
ಇಳೆಯ ಜಾಣರು ಮೆಚ್ಚುವಂತಿರೆ
ನೆಲೆಗೆ ಪೆಂಚಮ ಶ್ರುತಿಯ ನೊರೆವೆನು ಕೃಷ್ಣ ಮೆಚ್ಚಲಿಕೆ॥

ಕೃಷ್ಣ ಕಥೆಯೆಂದ ಮೇಲೆ ಈ ಮಹಾಭಾರತವೆಂಬ ಮಹಾನಾಟಕಕ್ಕೆ ನಾಯಕನೂ ಸೂತ್ರಧಾರನೂ ಶ್ರೀಕೃಷ್ಣ. ಉಳಿದ ಪಾತ್ರಗಳು ಆತನ ಯಂತ್ರದ ಪಾವೆಗಳು ಮಾತ್ರ. ಇಲ್ಲಿ ನಡೆಯುವುದೆಲ್ಲವೂ ಶ್ರೀ ಕೃಷ್ಣನ ಸಂಕಲ್ಪದ ಮೇರೆಗೆ. ಭಗವಂತನು ಮಾನವ ಅವತಾರ ತಾಳಿ ಆಡುವ ಮಾನವ ನಾಟಕವಾಗಿದೆ ಕುಮಾರವ್ಯಾಸ ಭಾರತ. ಪೆಂಪಕವಿಗೆ ಇದು ಬರಿ ಲೌಕಿಕಕಾವ್ಯವಾದರೆ ಕುಮಾರ ವ್ಯಾಸನಿಗೆ ಅಲೌಕಿಕವಾದ ಕಾವ್ಯ. ಇಲ್ಲಿ ದೇವದೇವತೆಗಳೂ ಪುರಾಣ ಪುರುಷರೂ ಮಾನವ ಪಾತ್ರಗಳೊಡನೆ ಬೆರೆತು ಜೀವನೆ ನಾಟಕ ಮಾಡುತ್ತಾರೆ. ಕುಮಾರ ವ್ಯಾಸನ ಈ ಮಹಾಭಾರತ ಕಾವ್ಯ ಇತಿಹಾಸವೂ ಹೌದು, ಪುರಾಣವೂ ಹೌದು. ಕಾವ್ಯವಂತೂ ಸರಿಯೆ. ಕುಮಾರವ್ಯಾಸನ ಪಾತ್ರಗಳು ಕಥಾವಿವ್ಯಾಸಗಳು ದ್ಯಾವಾಪೃಥಿವಿಗಳನ್ನು ವ್ಯಾಪಿಸಿವೆ. ಇಷ್ಟಾಗಿಯೂ ಈತನಿಗೆ ಈ ಕಾವ್ಯದ ಮೌಲ್ಯ 'ತೀರ್ಥೋದಕ' ವಿದ್ದಂತೆ. ತೀರ್ಥಕ್ಕಿರುವ ಮೌಲ್ಯ ಭಾವುಕತೆಗೇ ಗೊತ್ತು.

ಇದ ವಿಚಾರಿಸೆ ಬರಿಯ ತೊಳಸಿಯ
ವುದಕ ದಂತಿರೆಯಿಲ್ಲಿ ನೋಳ್ಪುದು
ಪದುಮನಾಭನ ಮಹಿಮೆ, ಧರ್ಮ ವಿಚಾರ ಮಾತ್ರವನು॥

ದಶಪರ್ವಗಳ ಮಹಾಕಾವ್ಯದುದ್ದಕ್ಕೂ ಕವಿ, ಸಂದರ್ಭದೊರೆತಾಗಲೆಲ್ಲ ಪದುಮ ನಾಭನ ಮಹಿಮೆಯನ್ನು ಕೊಂಡಾಡುತ್ತಾನೆ. ಎಷ್ಟು ಕೊಂಡಾಡಿದರೂ ಈ ಭಕ್ತಕವಿಗೆ ತೃಪ್ತಿಯೆ ಇಲ್ಲ ಕವಿ, ವಿದುರನಾಗಿ, ದ್ರೌಪದಿಯಾಗಿ,

ಭೀಷ್ಮನಾಗಿ, ದ್ರೋಣನಾಗಿ, ಪಾರ್ಥನಾಗಿ, ಧರ್ಮನಾಗಿ, ಧೃತರಾಷ್ಟ್ರನಾಗಿ ಇಷ್ಟೇ ಏಕೆ ಕರ್ಣ-ಕೌರವರಾಗಿಯೂ ಕೃಷ್ಣನ ಮಹಿಮೆಯನ್ನು ಕೊಂಡಾಡುತ್ತಾನೆ. 'ಕೃಷ್ಣನ ಕೃಪೆಯಿದ್ದಲ್ಲದೆ ನಹಿಲದಲಿ ಕೈವಲ್ಯವಿಲ್ಲ' ಎಂದು ದುರ್ಯೋಧನನು ತನ್ನ ಮುಕ್ತಿಮಾರ್ಗದ ದಿಕ್ಕು ಯಾವುದು ಬಲ್ಲವನಾಗಿದ್ದಾನೆ. ಕರ್ಣನು ತನ್ನ ಕೊನೆಯ ಕಾಲಕ್ಕೆ ಮರಣದ ಹೊತ್ತಿನಲಿ, ಕೃಷ್ಣನ ಕಾಂಬುಸುಕೃತ ಫಲ' ಎಂದು ಕಂಡುಕೊಳ್ಳುತ್ತಾನೆ.

ಹತ್ತು ಪರ್ವಗಳನ್ನು ಮಾತ್ರ ರಚಿಸಿಯೂ ಕುಮಾರವ್ಯಾಸನು ಅದಕ್ಕೊಂದು ಸೂಕ್ತ ಮುಕ್ತಾಯವನ್ನು ಕಲ್ಪಿಸಿದ್ದಾನೆ. ಶ್ರೀಕೃಷ್ಣನು ತನ್ನ ಪಂಚಪ್ರಾಣಗಳಂತಿದ್ದ ಪಾಂಡವರನ್ನು ರಕ್ಷಿಸಿ ಕೊನೆಯಲ್ಲಿ ಧರ್ಮನಿಗೆ ಪಟ್ಟ ಗಟ್ಟುತ್ತಾನೆ. ನೂರು ಜನ ಕೌರವರ ಸಂಹಾರವನ್ನು ಸಾಧಿಸಿ ತನ್ನ ಅವತಾರದ ಉದ್ದೇಶವನ್ನು ಸಾಧಿಸುತ್ತಾನೆ.

ದೇವ ಸಂತತಿ ನಲಿಯೆ ಪಾಂಡವ
ಜೀವ ಹರಿಯೆಂಬೀ ಪ್ರತಿಜ್ಞೆಯ
ಭಾವ ಸಂದುದು ಧರ್ಮಜನ ಪಟ್ಟಾಭಿಷೇಕದಲಿ ॥

ಧರ್ಮರಾಯನ ಪಟ್ಟಾಭಿಷೇಕಕ್ಕೆ ಕುಮಾರವ್ಯಾಸನ ಕಾವ್ಯಕ್ಕೆ ಮಂಗಲದ ಮುಕ್ತಾಯ. ಆದರೊಂದಿಗೆ ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಸಾರಿದ ಸಾಧುಪರಿತ್ರಾಣ, ದುಷ್ಕೃತರ ವಿನಾಶ ಎಂಬ ಯುಗದ ಗುರಿಯೂ ಈಡೇರುತ್ತದೆ.

ಕದನದಲಿ ಕೈಯಾರೆ ದೈತ್ಯರ
ಸದೆದು, ಭೂಭಾರವನು ಪರಹ
ಸ್ತದಲಿ ಕಟ್ಟಿಸಿ, ಕೊಟ್ಟಭಾಷೆಯನ್ನುತ್ತರಾಯೆನ್ನಿಸಿ
ನದಿಯನಂದನನನು ಪರಾನಂ
ದದಲಿ ಸೇರಿಸಿ ಪರಮ ಪರಿತೋ
ಷದಲಿ ಪಯ್ಯಣವ ಮಾಡಿದನು ಮುರವೈರಿ ನಿಜಪುರಿಗೆ ॥

ಶ್ರೀ ಕೃಷ್ಣನು ಪಾಂಡವರ ಬೆನ್ನಿಗೆ ನಿಂತು ಈ ಭಾರತ ನಾಟಕವನ್ನು ಸುಖಾಂತವಾಗಿ ಮುಗಿಸಿ, ಎಲ್ಲರನ್ನು ಬೀಳ್ಕೊಂಡು ದ್ವಾರಕೆಗೆ ತೆರಳುವಲ್ಲಿ ಕುಮಾರ ವ್ಯಾಸನ ಕರ್ಣಾಟ ಭಾರತ ಕಥಾ ಮಂಜರಿಗೆ ಒಂದು ರಸವತ್ತಾದ ಮುಕ್ತಾಯ.

ನಾರಣಪ್ಪನಿಗೆ ಇದೂ ಒಂದು ಕೃಷ್ಣ ಲೀಲೆಯೆ, ಕುಮಾರವ್ಯಾಸ ಮತ್ತು ಪಂಪ ಈ ಉಭಯತರಿಗೂ ದಕ್ಷಿಣ ಭಾರತದಲ್ಲಿ ಪ್ರಚಲಿತವಾಗಿದ್ದ ವ್ಯಾಸಭಾರತ ಆವೃತ್ತಿಯೊಂದು ಮೂಲಮಾತೃಕೆ. ಒಬ್ಬೊಬ್ಬ ಕವಿಯೂ ತನ್ನ ಗುರಿ, ಉದ್ದೇಶ, ಆದರ್ಶಗಳಿಗನುಸಾರವಾಗಿ ಮೂಲ ಕಥಾವಾಹಿನಿಯನ್ನು ಅನುಸರಿಸುತ್ತ, ಕೆಲವೆಡೆಗೆ ಸಂಕ್ಷೇಪಗೊಳಿಸಿ, ಕೆಲವೆಡೆಗಳಲ್ಲಿ ವಿಸ್ತರಿಸಿ; ಇನ್ನು ಕೆಲವು ಪ್ರಸಂಗಗಳನ್ನು ವರ್ಜಿಸಿ, ಮತ್ತೆ ಕೆಲವನ್ನು ಪರಿಷ್ಕರಿಸಿ, ಮೂಲ ಪಾತ್ರ ಸೃಷ್ಟಿಗಳನ್ನು ತಂತಮ್ಮ ದೃಷ್ಟಿಗನುಗುಣವಾಗಿ ಹೆಚ್ಚು ಕಡಿಮೆ ಮಾಡಿಕೊಂಡು ಅಂತೂ ವ್ಯಾಸರ ಮಹಾಭಾರತದ ಪುನಃ ಸೃಷ್ಟಿಯನ್ನು ಮಾಡಿದ್ದಾರೆ. ಕುಮಾರವ್ಯಾಸನ ದೃಷ್ಟಿ, ಸೃಷ್ಟಿಗಳು ಪಂಪನಿಗಿಂತ ತೀರ ಭಿನ್ನ. ಕೃಷ್ಣ ಪಾರಮ್ಯವನ್ನು ಕುರಿತ ಅದ್ಭುತ ಪವಾಡ ಪ್ರಸಂಗಗಳು ಪಂಪನಿಗೆ ಅಗ್ರಾಹ್ಯ. ಅಂತೆಯೆ ಪಂಪನು ದ್ರೌಪದಿಯ ಅಕ್ಷಯ ವಸ್ತ್ರದಾನ, ದೂರ್ವಾಸಾತಿಥ್ಯ, ವಿಶ್ವರೂಪದರ್ಶನ, ಗೀತೋಪದೇಶ ಇಂತಹ ಅನೇಕ ಪ್ರಸಂಗಗಳನ್ನು ಕೈಬಿಟ್ಟಿದ್ದಾನೆ. ಕುಮಾರವ್ಯಾಸನಿಗೊ ಕೃಷ್ಣನೇ ಮುಖ್ಯ. ಶ್ರೀಕೃಷ್ಣ ಪಾರಮ್ಯವೆ ಅವನ ಕಥಾದರ್ಶ. ದ್ರೌಪದಿಗೆ ಅಕ್ಷಯ ವಸ್ತ್ರದಾನ, ದೂರ್ವಾಸಾತಿಥ್ಯ, ಮೊದಲಾದಂಥ ಸನ್ನಿವೇಶಗಳು ಬಂದಾಗ ನಾರಣಪ್ಪನ ಪ್ರತಿಭೆ ಪುಟಿದೇಳುತ್ತದೆ. ಶ್ರೀಕೃಷ್ಣನ ಪಾರಮ್ಯವನ್ನು ಪ್ರಶಂಸಿಸುವ ಅವಕಾಶವೊದಗಿ, 'ಕೃಷ್ಣನ ಕರುಣೆ ಕಿರಿದಲ್ಲ'ವೆಂಬುದನ್ನು ದೃಷ್ಟಾಂತ ಪೂರ್ವಕವಾಗಿ ವರ್ಣಿಸುವ ವಸ್ತು ಪ್ರಾಪ್ತವಾಗಿದೆ.

ಕುಮಾರವ್ಯಾಸ ಭಕ್ತ ಕವಿಯೆಂದಮೇಲೆ ಭಕ್ತಿರಸ ನಿರೂಪಣೆಯ ಪ್ರಸಂಗಗಳನ್ನೆ ಎದುರು ನೋಡುತ್ತಿರುತ್ತಾನೆ. ಭಕ್ತ ಕುಟುಂಬಿಯಾದ ಶ್ರೀಕೃಷ್ಣನ ಅಪಾರ ಕೃಪಾವಿಲಾಸವನ್ನು ಬಣ್ಣಿಸುವೆಂದರೆ ಭಕ್ತಿಯ ಪಾರಮ್ಯವನ್ನೆ ಬಣ್ಣಿಸಿದಂತೆ ಭಕ್ತಿಯ ಸೌಂದರ್ಯವನ್ನು ಭಗವಂತನ ಬಾಯಿಯಲೇ ಕವಿ ಹೇಳಿಸುತ್ತಾನೆ. "ಭಂಟ ರಾಂ ಭಕ್ತರ್ಗೆ ನನಿವರು। ನಂಟರೆಮಗೋಲದಂತೆ

ಹೊಗಳಿದೊ. ಡೆಂಟುಮಡಿ ಮೆಚ್ಚುವೆವು ಮೆಚ್ಚಿವ ತರ್ಕಸಾಧಕರ'- ಎಂದು. ಶ್ರೀಕೃಷ್ಣನ ದೈವಿಕಮಹಿಮೆಯನ್ನು ಭೀಷ್ಮನು ಬಲ್ಲ. 'ಈತನಂತರ್ಯಾಮಿ ಜೀವಪ್ರಾತವಲಿ ಜನಜನಿತವಿದು, ಜಗನೀತನಾಜ್ಞೆಯೊಳೊಲೆವುದು'- ಎಂದು ಒಮ್ಮೆ ಬಣ್ಣಿಸಿದರೆ 'ಜಂಗಮಸ್ಥಾವರಕೆ ಚೈತನ್ಯಾಂಗರಕ್ಷನು' ಘನಕೆ ಘನ. ಅಣುವಿಂಗೆತಾನಣುವೆನಿಪ ಪರತರವಸ್ತು ನೋಡೀತ' ಎಂದು ಮತ್ತೊಮ್ಮೆ ಬಣ್ಣಿಸುತ್ತಾನೆ. ಶ್ರೀಕೃಷ್ಣನ ಮಹಿಮೆ ವೇದಗಳಿಗೂ ನಿಲುಕದಂತಹದು, ಅಂತಹದು ಭಕ್ತಿಯೆಂಬ ಚುಂಬಕಕ್ಕೆ ಆಕರ್ಷಿತನಾಗಿ ಧಾವಿಸಿ ಬರುತ್ತಾನೆ. ಜರಾಸಂಧ, ಜಯದ್ರಥ, ಕರ್ಣರನ್ನು ಸಂಹರಿಸಲು ಶ್ರೀ ಕೃಷ್ಣನೇ ಮುಂದಾಗಿ ಭೀಮಾರ್ಜುನರಿಂದ ಕೊಲ್ಲಿಸುತ್ತಾನೆ. 'ಕೊಲುವನ್ಯನ್ಯರನನ್ಯರಿಂದಪೆ ಕೊಲಿಸುವನು ಕಮಲಾಕ್ಷನಲ್ಲದೆ ಉಳಿದ ಜೀವವ್ರಾತಕೀ ಸ್ವಾತಂತ್ರ್ಯವಿಲ್ಲ'. ಯಾರನ್ನು ಕೊಲ್ಲಿಸಬೇಕು, ಯಾರನ್ನು ಕಾಪಾಡಬೇಕು ಎಂಬುದು ಶ್ರೀಕೃಷ್ಣನಿಗೊಬ್ಬನಿಗೇ ಗೊತ್ತು. ಸಂಧಿದೌತ್ಯವನ್ನು ಮಹಿಸಿದ್ದರೂ ಆತ ಯುದ್ಧವನ್ನೇ ಸಾರಿ ಬರುವ ರಹಸ್ಯವನ್ನು ದ್ರೌಪದಿಗೆ ಮಾತ್ರ ಉಸಿರಿದ್ದರೂ ದುರ್ಯೋಧನನು ಆ ನಾಟಕವನ್ನು ಬಲ್ಲವನಾಗಿದ್ದ. 'ಎರಡು ಬಲವನು ಮಸೆದು ಕೊಲಿಸುವ ವರವು ಯಾದವನದು. ನಿಧಾನಿಸಲು ಅರಿ ನಮಗೆ ಮುರವೈರಿಯಲ್ಲದೆ ಪಾಂಡುನಂದನರೆ ?' ಎಂದು ನುಡಿಯುತ್ತಾನೆ.

ಮುಖ್ಯವಾಗಿ ಕುಮಾರವ್ಯಾಸನ ಭಾರತವು ಶ್ರೀಕೃಷ್ಣನೆ ಕೈಯಸುದರ್ಶನ ಚಕ್ರದಂತೆ ಅವನು ತಿರುಗಿಸಿದತ್ತ ತಿರುಗುತ್ತದೆ. 'ಕೃಷ್ಣನಿಗೆದುರು ನಿಂದವರೇಸು ದಿನ ಬದುಕುವರು ? 'ಭಕ್ತರ ಕೈವಾರಿಯಾದ ಕೃಷ್ಣನಿಗೆ ಭಕ್ತರ ವೈರಿಗಳು ವೈರಿಗಳಾಗುತ್ತಾರೆ. 'ಉಂಟು ಪಾಂಡವರೈವರಲಿ ಬಲುನಂಟು ಮನ ಮರೆಯೇಕೆ ? ಅವರಿಗೆ ಕಂಟಕರು ನಮಗಾದ ಕಂಟಕರು' ಎಂದು ಸ್ಪಷ್ಟವಾಗಿ ಹೇಳುತ್ತಾನೆ ಶ್ರೀಕೃಷ್ಣ ಮುಖ್ಯವಾಗಿ 'ಒಲಿದವರ ನುಜ್ಜೀವಿಸುವ ಬಗೆ ಬಲುಹು ಮುರಮಥನಂಗೆ. ಮುನಿದೊಡೆ ತಲೆಯ ಬರಹವ ತೊಡೆವನಲ್ಲದೆ ಬಳಿಕ ಸೈರಿಸನು.'

ಇಂತಹ ಮಹಾಮಹಿಮನಾದ ಮುರಾರಿಯು ವಿದುರನ ಮನೆಗೆ ಬಂದಾಗ ಒಕ್ಕುಡಿತೆ ಹಾಲು ಕುಡಿದು ತನ್ನ ಹಸಿವ ಹಿಂಗಿಸಿ ಕೊಂಡನಂತೆ-ಕ್ಷೀರ

ಸಾಗರ ಶಾಯಿ ! ದ್ರೌಪದಿಯ ವನವಾಸದಲ್ಲಿ ಅಕ್ಷಯ ಪಾತ್ರೆಗಂಟದ ಅಗಳನ್ನೆ ನುಂಗಿ ಏಬ್ ಎಂದನಂತೆ ಚತುರ್ದಶಲೋಕಗಳನ್ನೆ ನುಂಗಿದ ಚಕ್ರಧಾರಿ ! ಮುಖ್ಯವಾಗಿ ಕೃಷ್ಣನ ಕೃಪೆಯೆಂಬುದು ಯಾರ ಮೇಲಿದೆಯೋ ದೈವ ಅವರಿಗೆ ಒಲಿಯುತ್ತದೆ. 'ಏನಸಾಧ್ಯವು ಕೃಷ್ಣನೊಲಿದವರಿಗೆ ?' ಅಪಾಯದ ಜಲಧಿಗಳು ಬತ್ತುವವು ಯದುಕುಲ ತಿಲಕ ಗದುಗಿನ ವೀರ ನಾರಾಯಣನ ಕರುಣದಲಿ !'

ವೀರ ಭಕ್ತನಾದ ಭೀಷ್ಮನಿಗೆ ಇದರ ಅರಿವು ಇಡಿಯಾಗಿದೆ. ಅಂತೆಯೆ ಶ್ರೀ ಕೃಷ್ಣನಿಂದ ಚಕ್ರವನ್ನು ಹಿಡಿಸಿ ಆತನ ಆ ಯುದ್ಧ ಸಂಕಲ್ಪವನ್ನು ಭಂಗ ಪಡಿಸುತ್ತ– 'ನಿಮಗಾವು ಹೆದರೆವು, , ನಾಮಧಾರಿಗಳತುಲಬಲರು' ಎಂದು ಶ್ರೀ ಕೃಷ್ಣನಿಗೇ ಸವಾಲು ಹಾಕುತ್ತಾನೆ. 'ಭಗವಂತನಿಗಿಂತ ಭಕ್ತನೇ ಶ್ರೇಷ್ಠ ಎಂಬ ಮಾತನ್ನು ಸಿದ್ಧ ಮಾಡಿ ತೋರಿಸುತ್ತಾನೆ ಭೀಷ್ಮ.

ಶ್ರೀ ಕೃಷ್ಣನು ಮಾತ್ರ ತನ್ನ ಮಹಿಮೆಯನ್ನು ಮರೆಮಾಚಿ ಸಾಮಾನ್ಯನಂತೆ ನಟಿಸುತ್ತಾನೆ. ಕುಂತಿಗೆರಗುತ್ತಾನೆ. ಧರ್ಮಜನು ಹಿರಿಯನೆಂದು ಸಮಸ್ಕರಿಸುತ್ತಾನೆ. 'ದೇವನೆಂದೇ ನೀವು ಬಗೆವಿರಿ ದೇವತತನವೆಮ್ಮೊಳು ಲವ ವಿಲ್ಲ' ಎಂದು ಮಾನವ ವೇಷದಲ್ಲಿ ದೇವತ್ವವನ್ನು ಮರೆಯಿಸಿದರೂ ಭಕ್ತರಿಗೆ ಪರಮಾತ್ಮ ಪ್ರಜ್ಞೆ ಇದ್ದೇ ಇದೆ. ಅಂತೆಯೆ ಧರ್ಮಜನು– 'ಕಾಲಲೊದೆದ, ನೋವಿ ತಲೆಯೊಳು ಹೊತ್ತು ನಡೆಸುವೊಡಾವು ಬಲ್ಲೆವು ಜೀಯೆ' ಎಂದು ನುಡಿಯುತ್ತಾನೆ. ಮಾನವೀಯ ಪಾತ್ರಗಳೊಡನೆ ದೈವೀ ಪಾತ್ರವನ್ನು ತಂದು ಸವ ಜೋಡಣೆಯ ನಾಟಕವೊಂದನ್ನು ಹೂಡಿ ಭಕ್ತಿಯ ಪಾರಮ್ಯವನ್ನು ಕೊಂಡಾಡುವುದೆ ಭಕ್ತಕವಿ ಕುಮಾರವ್ಯಾಸನಿಗೊಂದು ಸೃಜನಾತ್ಮಕಸಂತೋಷ.

ಕುಮಾರವ್ಯಾಸನ ಕಾವ್ಯವು ಕೃಷ್ಣಕಥೆಯಾಗಿ ಪದುಮನಾಭನ ಮಹಿಮೆಯನ್ನು ಕೊಂಡಾಡುವುದರಿಂದ 'ಕಾವ್ಯಕೆ ಗುರು.' ಈ ಗುರುಕಾವ್ಯದ ವೈಲಕ್ಷಣ್ಯಗಳನ್ನು ಕವಿಯೆ ಹೇಳುತ್ತಾನೆ.

ಅರಸು ಗಳಿಸಿದು ವೀರ, ದ್ವಿಜರಿಗೆ
ಪರಮ ವೇದದ ಸಾರ, ಯೋಗೀಶ್ವ
ರರ ತತ್ತ್ವವಿಚಾರ, ಮಂತ್ರಿ ಜನಕೆ ಬುದ್ಧಿಗುಣ
ವಿರಹಿಗಳ ಶೃಂಗಾರ, ವಿದ್ಯಾ
ಪರಿಣತರಲಂಕಾರ, ಕಾವ್ಯಕೆ
ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ ॥

ಇದು ವೀರಕಾವ್ಯವೆಂಬುದಕ್ಕೆ ಯುದ್ಧಪಂಚಕವೆ ಸಾಕ್ಷಿ. 'ಗಂಡರೊ ನೀವ್ ಷಂಢರೊ' ಎಂದು ಪತಿಗಳನ್ನು ಹೀಯಾಳಿಸುವ ದ್ರೌಪದಿಯ ಪಾತ್ರ ವೊಂದೆ ಸಾಕು ಈ ವೀರ ಉದಾಹರಣೆಗೆ. ವೇದಜ್ಞರಾದ ದ್ವಿಜರಿಗೆ ಇಲ್ಲಿ ಪರಮ ವೇದದ ಸಾರವು ದೊರಕುತ್ತದೆ- ವಿದುರನೀತಿ, ಸನತ್ ಸುಜಾತೀಯ, ಭಗವದ್ಗೀತೆ, ಭೀಷ್ಮ ನಾರದಾದಿಗಳ ವೇದ ಬೋಧೆ ಮೊದಲಾದ ಪ್ರಸಂಗಗಳಲ್ಲಿ. ಅದೇ ರೀತಿ ಯೋಗ ತತ್ವ ವಿಚಾರ ಮಾಹಿನಿಯೂ ಇಲ್ಲಿ ಹಲವು ಪ್ರಣಾಲಿಗಳ ಮೂಲಕ ಹರಿಯುತ್ತದೆ. ರಾಜನೀತಿ ಧರ್ಮನೀತಿ ಪುರುಷಾರ್ಥವಿವೇಚನೆ ಬರುವಲ್ಲೆಲ್ಲ ಮಂತ್ರೀ ಜನಕೆ ಬುದ್ಧಿಗುಣವಿದೆ. ವಿರಹಿಗಳಿಗೆ ಶೃಂಗಾರ ವಲ್ಲದೆ. ವಿದ್ಯಾಪರಿಣತರಿಗೆ ರಸಾಲಂಕಾರ ಜಿಜ್ಞಾಸೆಯೂ ಇಲ್ಲಿದೆ. ಅಂತೆಯೆ ಇದು 'ಕಾವ್ಯಕೆ ಗುರು' ಈ ಗದುಗಿನ ವೀರ ನಾರಾಯಣನ ಕಿಂಕರನ ಕಾವ್ಯ.

ಕುಮಾರವ್ಯಾಸನು ದಶಪರ್ವಗಳಿಗೆ ನಿಲ್ಲಿಸಿದ ಭಾರತ ಕಥೆಯ ಉಳಿದೆಂಟು ಪರ್ವಗಳನ್ನು ವಿಜಯನಗರದ ಕೃಷ್ಣದೇವ ರಾಯನ (೧೫೧೯-೧೫೨೯) ಆಸ್ಥಾನ ಕವಿಯಾದ ತಿಮ್ಮಣ್ಣನು ತನ್ನ 'ಕೃಷ್ಣರಾಯ ಭಾರತ ಕಥಾಮಂಜರಿ' ಯಲ್ಲಿ ಪೂರೈಸಿದ್ದಾನೆ ಉಳಿದ ಎಂಟು ಪರ್ವಗಳೆಂದರೆ (ತಿಮ್ಮಣ್ಣನದಲ್ಲದೆ, ಈಗ ಶ್ರೀನಿವಾಸನೆಂಬ ೧೭೦೦ ರಲ್ಲಿದ್ದ ರಬಹುದಾದ ಕವಿಯಿಂದರಚಿತವಾದದ್ದು ಎಂದು ತಿಳಿದು ಬಂದಿರುವ)ಸ್ತ್ರೀ ಪರ್ವ, ಶಾಂತಿಪರ್ವ, ಅನುಶಾಸನಿಕ ಪರ್ವ, ಅಶ್ವಮೇಧ ಪರ್ವ, ಆಶ್ರಮವಾಸ ಪರ್ವ, ಮೌಸಲ ಪರ್ವ, ಮಹಾಪ್ರಸ್ಥಾನ ಪರ್ವ, ಹಾಗೂ ಸ್ವರ್ಗಾರೋಹಣ ಪರ್ವ ಎಂಬ ಕ್ರಮಪ್ರಾಪ್ತ ಪರ್ವಗಳು.

ತಿಮ್ಮಣ್ಣ ಕವಿಯ ಕಾವ್ಯ ಶೈಲಿಯು ಸಪ್ಪೆತನವನ್ನು ಅದರಲ್ಲೂ ಕುಮಾರವ್ಯಾಸನ ಕೆಚ್ಚಿನ ಶೈಲಿಯ ಮುಂದೆ ತೀರ ಕಳಪೆಯೆನಿಸುವ ನಿಸ್ಸಾರತೆಯನ್ನು ನೋಡಿದರೆ ತಿಮ್ಮಣ್ಣನಿಗೆ 'ಕರ್ನಾಟಕ ಕವಿ ಕುಲ ಸಾರ್ವಭೌಮ' ಎಂಬ ಬಿರುದು ಸಾರ್ಥಕವಾಗಿಲ್ಲವೆಂದೇ ಹೇಳಬೇಕಾಗುತ್ತದೆ. 'ಸುರನದಿಯು ಯಮುನಾತರಂಗಿಣಿ ಬೆರಸಿ ಹರಿವಂದದಲಿ' ತನ್ನ ಪೂರಕ ಕಾವ್ಯವನ್ನು ಪೂರ್ತಿಗೊಳಿಸಿದ್ದರೆ ಗಂಗೆಯ ಬೊಳ್ಳೊರೆ, ಯಮುನೆಯ ಕಪ್ಪು ತೊರೆಯನ್ನು ಕೂಡಿದಂತಾಗಿದೆ ಎಂದೇ ಎನಿಸುತ್ತದೆ. 'ಕವಿಗೆ ಕಥೆ ಹೇಳುವ ಚಾತುರ್ಯವೆ ಇಲ್ಲವೊ ಎಂಬಂತೆ ಬರಿಯ ವರದಿಗಾರನಂತೆ ಕಾವ್ಯವನ್ನು ನಿರ್ವಹಿಸಿದ್ದಾನೆ' ಎಂದು 'ಕೃಷ್ಣರಾಯ ಭಾರತ'ದ ಪ್ರಸ್ತಾವನೆಯಲ್ಲಿ ನುಡಿದಿರುವುದು ಸರಿಯಾದ ಅಭಿಪ್ರಾಯ. (ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟನೆ – ೧೯೭೯. ಪೀಠಿಕೆ ಪುಟ xvii).

ತಿಮ್ಮಣ್ಣನ ಏಳು ಪರ್ವಗಳು 'ಪ್ರತಿಪರ್ವ ರಸೋದಯ'ವೆಂಬ ಮಾತು ತಿಮ್ಮಣ್ಣ ಕವಿಯು ಮಟ್ಟಿಗೆ ಅನ್ವಯಿಸಲಾರದು. 'ಕ್ವಚಿತ್ ರಸೋದಯ' ವೆಂದು ಮಾತ್ರ ಹೇಳಬಹುದು. ಸ್ತ್ರೀ ಪರ್ವವನ್ನು ತಿಮ್ಮಣ್ಣನು (ಶೋಕಾರಂಭವೇಕೆಂದು ಬಗೆದು) ಬರೆಯದೆ ಬಿಟ್ಟಿದ್ದಾನೊ ಬರೆದೂ ಉಪಲಬ್ಧವಾಗದೆಯೆ ಹೋಗಿದೆಯೊ ತಿಳಿಯದು. ಆದರೆ ಕವಿಯು ಪೀಠಿಕಾ ಸಂಧ್ಯೋಶಾಂತಿ ಪರ್ವದೊಂದಿಗೆ ಬಂದಿರುವುದರಿಂದ ಸ್ತ್ರೀ ಪರ್ವವನ್ನು ಈತ ರಚಿಸಿಲ್ಲವೆಂದು ತಿಳಿಯಬಹುದು. ಆಸ್ಥಾನ ಕವಿಯಾಗಿ ರಾಜಾಜ್ಞೆಯ ಮೇರೆಗೆ ತನ್ನ ಉತ್ತರ ಭಾರತ ಕಥೆಯನ್ನು ರಚಿಸಿರುವನಲ್ಲದೆ ಸ್ವಪ್ರೇರಣೆಯಿಂದಲ್ಲ. ಕರ್ನಾಟಕಾಧಿಪತಿಯ ಕೀರ್ತಿ ವರ್ಧನೆ(?)ಗಾಗಿ ಮಾತ್ರ ತನ್ನ 'ಕೃಷ್ಣರಾಯ ಭಾರತ'ವನ್ನು, 'ಭಾಸುರವೆಂದೆನಿಸಿ, ಭಾರತದುಳಿದ ಪರ್ವಗಳ' (ಅಷ್ಟ ಪರ್ವಗಳೊ, ಎಷ್ಟು ಪರ್ವಗಳೆಂಬುದನ್ನು ಸ್ಪಷ್ಟಪಡಿಸಿಲ್ಲ.) ಕುಮಾರವ್ಯಾಸನ ದಶ ಪರ್ವಗಳಿಗೆ ಸರಿದೊರೆಯಾಗುವಂತೆ 'ಸಕಲ ಜಗ ಮೆಚ್ಚುವಂತೆ ವಿಲಾಸದಲಿ ಪೇಳೆನುತಲುಪದೇಶಿಸಿದ ನರಸೇಂದ್ರಾತ್ಮಜ ಕೃಷ್ಣರಾಯ ನೃಪ'. ಅಂತ್ತೂ ತಿಮ್ಮಣ್ಣನಿಗೆ ಕೃಷ್ಣದೇವರಾಯ ಮುಖ್ಯನಾದ, ಕುಮಾರವ್ಯಾಸ ಅಮುಖ್ಯನಾದ. ಏಕೆಂದರೆ ಕುಮಾರವ್ಯಾಸನಿಗೆ ತಿಮ್ಮಣ್ಣನಿಂದ ನ್ಯಾಯಸಂದಾಯ

ವಾಗಲಿಲ್ಲ. ಹಿಂದಿನ ಯಾವ ಕವಿಗಳನ್ನೂ ತಿಮ್ಮಣ್ಣ ಸ್ಮರಿಸಿಲ್ಲ. ಈತನ ಮುಂದಣ ಕವಿಗಳೂ ಈತನನ್ನು ಸ್ಮರಿಸಿಲ್ಲ.

ಸ್ತ್ರೀಪರ್ವದಲ್ಲಿ ಸುತರಳಿದ ಧೃತರಾಷ್ಟ್ರನ ದುಃಖ, ಗಾಂಧಾರಿ ಹಾಗೂ ಅಂತಃಪುರದ ರಾಣಿಯರು ಯುದ್ಧಭೂಮಿಯಲ್ಲಿ ಮೃತರಾದವರಿಗೆ ಸುರಿಸುವ ಕಂಬನಿ, ವೇದವ್ಯಾಸ ಮುನಿಗಳ ಉಪದೇಶ, ತಿಲಾಂಜಲಿ ಉತ್ತರಕ್ರಿಯೆ ಇವೇ ಮೊದಲಾದ ವಿಷಯಗಳು ಬರುತ್ತವೆ. ಶಾಂತಿ-ಅನುಶಾಸನಿಕ ಪರ್ವ ಗಳು ಧರ್ಮನೀತಿ, ತತ್ತ್ವೋಪದೇಶಗಳಿಗಾಗಿ ಮೀಸಲಾಗಿವೆ. ಒಂದೊಂದು ನೀತಿ ತತ್ವಕ್ಕೆ ಒಂದೊಂದು ಉಪಖ್ಯಾನ. ಅಶ್ವಮೇಧಪರ್ವದ ಕಥಾವಸ್ತು ಕನ್ನಡಿಗರ ಮೆಚ್ಚಿನ ಕವಿ ಲಕ್ಷ್ಮೀಶನಿಂದ ಭಕ್ತಿಮುಖ್ಯ ನವರಸಗಳಿಂದ, ಕಲ್ಪನಾವಿಲಾಸದ ನಾದಮಯ ಶೈಲಿಯ ರಸ ಸೃಷ್ಟಿಯಾಗಿ ಮೂಲ ಜೈಮಿನಿ ಕಾವ್ಯವನ್ನು ಮೆರೆಯಿಸುವಂತೆ ಚಿತ್ರಿತವಾಗಿರುವಾಗ ತಿಮ್ಮಣ್ಣ ಕವಿಯ ಈ ಭಾಗವು ಕೇವಲ ನೀರಸ ಅನುವಾದ ಮಾತ್ರ. ಮುಂದಿನ ಆಶ್ರಮವಾಸ ಪರ್ವ ದಲ್ಲಿ ವಿದುರಾವಸಾನವು ಮಾತ್ರ ಹೃದಯವನ್ನು ಕಲಕುವಂತೆ ತಿಮ್ಮಣ್ಣನಿಂದ ಚಿತ್ರಿತವಾಗಿದೆ. ಧೃತರಾಷ್ಟ್ರ, ಗಾಂಧಾರಿ, ಕುಂತಿ ಇವರ ನಿರ್ಯಾಣ ಪ್ರಸಂಗವೂ ಕರುಣಾ ರಸವನ್ನು ಉಕ್ಕಿಸುವಂತಿದೆ. ಮೌಸಲ ಪರ್ವದಲ್ಲಿ ಕೃಷ್ಣನ ಅವಸಾನ, ಬಲರಾಮನ ದೇಹತ್ಯಾಗ, ಉಭಯತರ ಕಳೇಬರಗಳ ಸಂಸ್ಕಾರ, ದ್ವಾರಕೆಯ ಜಲಸಮಾಧಿ ಇವೆಲ್ಲ ಸನ್ನಿವೇಶಗಳು ಅಂತಃಕರಣವನ್ನು ಕಲಕುವಂತೆ ಮೂಡಿ ಬಂದಿವೆ. ಮುಖ್ಯವಾಗಿ ಮೂಲದ ಈ ಸನ್ನಿವೇಶಗಳ ಹೃದಯಸ್ಪರ್ಶಿ ಯಾದಂತಹವು.

ಉಪಾಖ್ಯಾನಗಳಲ್ಲಿ ಉದಂಕನಕಥೆ, ಸಕ್ತುಪ್ರಸ್ಥನ ಕಥೆ, ವದಾನ್ಯ ಬ್ರಾಹ್ಮಣ ಕನ್ನೆಯನ್ನು ವರಿಸಲು ಬಂದ ಅಷ್ಟಾವಕ್ರನ ಪ್ರಸಂಗ. ಇವೆಲ್ಲ ಸರಳ, ಸಹಜ ಸುಂದರವಾಗಿ ನಿರೂಪಿಸಲ್ಪಟ್ಟಿವೆ. ಅಲ್ಲಲ್ಲಿಯ ಪ್ರಕೃತಿವರ್ಣನೆ ಅವರಲ್ಲೂ ಅಶ್ವಮೇಧಪರ್ವದಲ್ಲಿ ಬರುವ ವಸಂತವರ್ಣನೆ ರಮ್ಯವಾಗಿದೆ. ಕವಿಯ ವರ್ಣನಾ ಕೌಶಲ್ಯಕ್ಕೆ ಇದೊಂದು ಸಲ್ಲುವ ನಿದರ್ಶನ.

ಮಹಾಪ್ರಸ್ಥಾನದಲ್ಲಿ ದ್ರೌಪದಿಯಿಂದ ಭೀಮನವರೆಗೆ ಎಲ್ಲರೂ ಒಂದೊಂದು ಅವಗುಣದಿಂದಾಗಿ ಅಂತ್ಯವನ್ನು ಹೊಂದಿ ಕೊನೆಗೆ ಧರ್ಮ

ನೊಬ್ಬನೆ ಸದೇಹಿಯಾಗಿ ಸ್ವರ್ಗಕ್ಕೆ ಹೊರಡುವ ಅವಕಾಶ. ಆದರೆ ತನ್ನ ಬೆನ್ನು ಬಿದ್ದ ಸಾರಮೇಯವಿಲ್ಲದೆ ತನಗೆ ಸ್ವರ್ಗಸುಖವೂ ಬೇಡವೆಂದು ಕೂಡಲು ಆಂತಿಮವಾಗಿ ಆ ನಾಯಿ ಯಮಧರ್ಮನೇ ಆಗಿದ್ದು. ಮಗನನ್ನು ಸತ್ವ ಪರೀಕ್ಷೆಗೆ ಗುರಿಮಾಡಿರುತ್ತಾನೆ. ಮುಂದೆ ಧರ್ಮರಾಯನ ಪುಣ್ಯದಿಂದಲೇ ಸರ್ವರೂ ಸ್ವರ್ಗಾರೋಹಣ ಮಾಡುತ್ತಾರೆ. ಧರ್ಮರಾಯನಿಗೆ ದೈವತ್ವ ಪ್ರಾಪ್ತವಾಗುತ್ತದೆ. ಹೀಗೆ – 'ವೈಶಂಪಾಯನನು ಎಂಗೆ । ಪುನವೊಲಿದಾ ಜನಮೇಜಯ ಕ್ಷಿತಿಪನಿಗೆ ಭಾರತಕಥೆಯನಾದ್ಯಂತವನು ವಿಸ್ತರಿಸಿ । ಮುನಿ-ಜನಾಗ್ರಣಿಯಹ ಪರಾಶರ । ತನು ಭವನ ಕೃಪೆ ತನ್ನೊಳನುದಿನ । ವೆನಿಸಿ ರಂಜಿಸುತಿರಲು ಸುಪ್ರೀತಿಯಲಿ ಪೇಳಿದನು ॥' ಎಂದು ತಿಮ್ಮಣ್ಣನ ಕೈಯಿಂದ ಕೃಷ್ಣರಾಯ ಭಾರತಕ್ಕೆ ಮಂಗಲವಾಗುತ್ತದೆ.

ಪಂಪ ಭಾರತದಿಂದ ಸ್ಫೂರ್ತನಾದ ರನ್ನಕವಿ, ಮಹಾಭಾರತದ ದುಶ್ಶಾ-ಸನ ವಧೆಗೆ ಸಂಬಂಧಿಸಿದ, ದ್ರೌಪದೀ ಕ್ಲೇಶಕ್ಕೆ ಕಾರಣವಾದ ಆಕೆಯ ಕೇಶ ವಾಶ ಪ್ರಪಂಚದ ವಸ್ತುವನ್ನಾರಿಸಿಕೊಂಡು ಸಂಭಾಷಣೆ. ಸನ್ನಿವೇಶಗಳುಳ್ಳ ಸುಂದರ ರಸಾತ್ಮಕ ಕಥೆಯ ಚಂಪೂರೂಪದಲ್ಲಿ ಚಿತ್ರಿಸಿದ್ದಾನೆ.

ಗದಾಯುದ್ಧವು ರನ್ನನ 'ಕೃತಿರತ್ನ' ಎಂದು ಡಾ॥ ರಂ. ಶ್ರೀ. ಮುಗಳಿ ಅವರು ವರ್ಣಿಸಿದ್ದಾರೆ. ಪಂಪಭಾರತದ ಧಿಸಿನೆಯು ಆಶ್ವಾಸದ ಭಾರತ ಯುದ್ಧದ ಅಂತ್ಯ ದೃಶ್ಯ ರನ್ನನ ಪ್ರತಿಭೆಯನ್ನು ಪ್ರಜ್ವಲಗೊಳಿಸಿದೆ. ದ್ರೌಪದಿಯ ಕೇಶಾಕರ್ಷಣದ ಸೇಡಿನ ಕಥೆಯಷ್ಟನ್ನೆ ರನ್ನನು ಆಯ್ದುಕೊಂಡಿದ್ದರೂ–

ಒಳಪೊಕ್ಕು ನೋಡೆ ಭಾರತ
ದೇವಗಣ ಕಥೆಯೆಲ್ಲಮೀಗದಾಯುದ್ಧದೊಳಂ–
–ತೊಳಕೊಂಡಿತ್ತೆನೆ ಸಿಂಹಾ–
ವಳೋಕನ ಕ್ರಮದಿನರಿಪಿದಂ ಕವಿರತ್ನಂ ॥'

ಎಂದು ಕವಿ ತಾನೇ ಸಮಾಧಾನಪಟ್ಟುಕೊಂಡು ಹೇಳುತ್ತಾನೆ. ಆದರೆ ರನ್ನನ ಕಥಾನಾಯಕ ಸಾಹಸಭೀಮ– ಅರ್ಥಾತ್ ಆಶ್ರಯದಾತನಾದ ರಾಜ ಸತ್ಯಾಶ್ರಯ.

ರನ್ನನಂತೆ ಲಕ್ಷ್ಮೀಶನು ಮಹಾಭಾರತದ ಒಂದು ಅಂಗವಾದ ಅಶ್ವಮೇಧ ಕಥೆಯನ್ನಿಟ್ಟು ಆಯ್ದುಕೊಂಡು ೩೪ ಸಂಧಿಗಳ ವಾರ್ಧಿಕ ಷಟ್ಪದಿ ಕಾವ್ಯವನ್ನಾಗಿ ನಿರ್ಮಿಸಿದ್ದಾನೆ. ಸಂಸ್ಕೃತದಲ್ಲಿ ೬೮ಅಧ್ಯಾಯಗಳಲ್ಲಿರುವ ವಿಸ್ತೃವಾದ ಜೈಮಿನಿ ಭಾರತ ಕಥೆಯನ್ನು ಲಕ್ಷ್ಮೀಶನು ಸುಂದರವಾಗಿ ಅದರರ್ಧ ಗಾತ್ರಕ್ಕೆ ಸಂಗ್ರಹಿಸಿ ಹೇಳಿದ್ದಾನೆ. ಸರಳವಾಗಿ, ಮಂಜುಳವಾಗಿ, ಪದಲಾಲತ್ಯ ಪೂರ್ಣವಾಗಿ, ಅರ್ಥಾಲಂಕಾರ, ಶಬ್ದಾಲಂಕಾರಗಳ ಬೆಡಗಿನಿಂದ ಮೂಲ ಕಾವ್ಯವನ್ನು ಸ್ವತಂತ್ರವಾಗಿ ಅನುವಾದಿಸಿದ್ದಾನೆ. ಕವಿಯ ಸಂಗ್ರಹ ಶಕ್ತಿಯೊಡನೆ ಅವನ ರಸಿಕತೆ, ವಿವೇಕಗಳೂ ಬೆರೆತು ಲಕ್ಷ್ಮೀಶನ ಕಾವ್ಯವು ಭಕ್ತಿರಸದ ಪರಿಧಿಯಲ್ಲಿ ಮೂಲದಿಂದ ಪರಿವರ್ತಿಸಲ್ಪಟ್ಟಿದೆ. ಕಥಾ ನಿರೂಪಣೆಯೆ ಕವಿಯ ಮುಖ್ಯ ಗುರಿ. ನೀತಿ ಪ್ರತಿಪಾದನೆ, ಧರ್ಮೋಪದೇಶ, ಪುಣ್ಯ ಕ್ಷೇತ್ರಗಳ ಮಹಿಮಾ ವರ್ಣನೆ ಮೊದಲಾದವು ಕವಿಗೆ ಸಾಧಿಸಬೇಕಾದ ಧ್ಯೇಯಗಳು. ತನ್ನ ಪ್ರತಿಭಾ ಶಕ್ತಿಯಿಂದ, ಕಲ್ಪನಾವೈಖರಿಯಿಂದ ಲಕ್ಷ್ಮೀಶನು ತನ್ನ ಕವಿತಾಶಕ್ತಿ, ವರ್ಣನಾ ಚಾತುರ್ಯ. ಕಾವ್ಯಶೈಲಿಗಳ ಪ್ರೌಢಿಮೆಯಿಂದ ಮೂಲದ ವಿಷಯವನ್ನು ಬೇಕಾದಲ್ಲಿ ಹಿಗ್ಗಿಸಿ, ಬೇಕಾದಲ್ಲಿ ಸಂಗ್ರಹಿಸಿ ಒಂದು ಮಹಾ ಕಾವ್ಯವನ್ನು ರಚಿಸಿದ್ದಾನೆ. 'ಅಶ್ವಮೇಧಿಕ ಪರ್ವದ ಅಮಲ ಸತ್ಕಥೆ ಯೌವ್ವನಾಶ್ವಾದಿ ನೃಪರ ಚರಿತಂ ಕೇಳ್ದವಾನವರ್ಗೆ' ಐಶ್ವರ್ಯ, ಆರೋಗ್ಯ, ಆಯುಷ್ಯವೃದ್ಧಿ ಮೊದಲಾದ ಸರ್ವಭೋಗಂಗಳಾದಪುವು ಎಂದು ಕವಿ ಮಂಗಲ ಪದ್ಯಗಳಲ್ಲಿ ಹೇಳಿದ್ದಾನೆ. ಲಕ್ಷ್ಮೀಶನು ರಸಿಕನಾಗಿದ್ದಂತೆ ಭಕ್ತ ಕವಿಯೂ ಹೌದು, ತತ್ವ ಜ್ಞಾನಿಯೂ ಹೌದು. ಯೌವನಾಶ್ವನ ಕಥೆ, ನೀಲಧ್ವಜನ ಕಥೆ, ಜ್ವಾಲೆಯ ಕಥೆ, ಸುಧನ್ವಾಖ್ಯಾನ, ಪ್ರಮೀಳಾ ಕಲ್ಯಾಣ, ಚಂದ್ರಹಾಸನ ಕಥೆ, ಸೀತಾ ಪರಿತ್ಯಾಗದ ಕಥೆ, ಬಬ್ರುವಾಹನ ಕಾಳಗ ಮೊದಲಾದವು ಕವಿಯ ಪ್ರತಿಭೆ, ಕಥನ ಕೌಶಲ್ಯಕ್ಕೆ ಸಾಕ್ಷಿ. ಹೀಗೆ ಈ ಕನ್ನಡ ಭಾರತಗಳ ವಿಹಂಗವಮಾವ ಲೋಕನವಿದು.

ಕುಮಾರವ್ಯಾಸನ ಶೈಲಿ

ಶೈಲಿಯು ಕವಿಯ ವ್ಯಕ್ತಿತ್ವದ ಪ್ರತಿಬಿಂಬ. ಕವಿಯ ಶೀಲವನ್ನು ಪ್ರಕಟಿಸುವುದೆ ಶೈಲಿ ಎನ್ನಬಹುದು. 'Style is the man' ಎಂಬಂತೆ ಈ ಮಾತು ಕುಮಾರವ್ಯಾಸನ ಮಟ್ಟಿಗೆ ಅಚ್ಚಳಿಯದೆ ಅನ್ವಯಿಸುತ್ತದೆ. ಗದುಗಿನ ಭಾರತದ ಕಾವ್ಯಶಿಲ್ಪ, ಕಾವ್ಯಸ್ವರೂಪ, ಭಾಮಿನಿ ಛಂದೋವಿಲಾಸ, ಕುತೂಹಲಿಕೆಯ ಕಥನ ವೈಭವ, ಭಾವಾಭಿವ್ಯಕ್ತಿಯ ಕೌಶಲ, ರಸನಿರೂಪಣೆ, ಬಹುವಿಧ ವರ್ಣನಾ ಸಾಮರ್ಥ್ಯ ಇವುಗಳಲ್ಲೆಲ್ಲ ಕುಮಾರವ್ಯಾಸನ ಪ್ರತಿಭೆ ಎಂಬಾಡಿ ಅವನ ಶೈಲಿಯ ವೈಶಿಷ್ಟ್ಯವನ್ನು ಎತ್ತಿ ತೋರುತ್ತದೆ. ಕವಿಯ ಶೈಲಿಯ ಮುಖ್ಯ ವೈಶಿಷ್ಟ್ಯವನ್ನು ಕಾಣಬೇಕು. ಅವನ ಭಾಷೆಯಲ್ಲಿ, ಅವನ ಪದಪ್ರಯೋಗಗಳಲ್ಲಿ, ಅವನ ವ್ಯಾಕರಣದಲ್ಲಿ, ಅವನ ರಚನಾ ಚಾತುರ್ಯದಲ್ಲಿ, ಅವನ ಶಬ್ದನಿರ್ಮಾಣಶಕ್ತಿಯಲ್ಲಿ. ಒಂದು ಪದವನ್ನು, ಪದಪುಂಜವನ್ನು ಪ್ರಯೋಗಿಸುವಲ್ಲಿ-ಕವಿಯ ಕಲ್ಪನಾ ವಿಲಾಸವು ವೈಭವದಿಂದ ಮೆರೆಯುತ್ತದೆ. ಕವಿ ಕುಮಾರವ್ಯಾಸನು ಕನ್ನಡ ಸರಸ್ವತಿಯನ್ನು ಮನಬಂದಂತೆ ಕುಣಿಸಿದ್ದಾನೆ. ದಿನಬಳಕೆಯ ಜೀವಂತ ಭಾಷೆಯು ಪ್ರಾದೇಶಿಕ ಭಾಂಡಾರದಿಂದ ದೇಶೀಯ ಪದಪದಾವಳಿಗಳನ್ನು ಎತ್ತಿಕೊಂಡು, ಬೇಕಾದಾಗ ತನ್ನ ಸ್ವಂತ ಪದರಚನೆಗಳನ್ನು ತನ್ನ ಕಲ್ಪನೆಯು ಟಂಕಸಾಲೆಯಲ್ಲಿ ಮುದ್ರಿಸಿ ಚಲಾವಣೆಯಲ್ಲಿ ತಂದಿದ್ದಾನೆ. ಪ್ರಚಲಿತವಿರುವ ಪ್ರಾದೇಶಿಕ ಜಾನಪದ ಜಾಣ್ಣುಡಿ ನಾಣ್ಣುಡಿಗಳಿಗೂ ಹೊಸ ಜೀವ ಕೊಟ್ಟಿದ್ದಾನೆ. ಒಂದು ಶಬ್ದವು ತನ್ನ ಛಂದಕ್ಕೆ ಸರಿಹೋಗದಿದ್ದರೆ ವ್ಯಾಕರಣ-ಗೀಕರಣಗಳ ಕಟ್ಟಳೆಯನ್ನು ಕಟ್ಟಿಳೆದು ತನ್ನದೆ ಆದ ನವೀನ ಶಬ್ದವನ್ನೊ, ಶಬ್ದಾವಳಿಯನ್ನೊ ತಯಾರಿಸುತ್ತಾನೆ. ಈ ರೀತಿಯಿಂದ ಕುಮಾರವ್ಯಾಸನು ಕನ್ನಡ ಶಬ್ದಸಂಪತ್ತಿಯನ್ನು ಹೆಚ್ಚಿಸಿದ್ದಾನೆ. ವೈವಿಧ್ಯವಲ್ಲರಿಯನ್ನು ಬೆಳೆಸಿದ್ದಾನೆ. ಭಾಷೆಯ ಸೌಂದರ್ಯ-ಸಾಮರ್ಥ್ಯಗಳನ್ನು ಬಲಿಸಿದ್ದಾನೆ ಕುಮಾರವ್ಯಾಸನಿಂದ ಕನ್ನಡ ಭಾಷೆ ಹದಗೆಟ್ಟಿತು ಎಂದು ಪಂಡಿತರಾರಾದರೂ ಆಕ್ಷೇಪವೆತ್ತಿದರೆ ಇಂತಹ ನೂರಾರು ಕವಿಗಳು ಹುಟ್ಟಿ ನಮ್ಮ ನಾರಣಪ್ಪನ ಹಾಗೆ ಕನ್ನಡ ಭಾಷಾ ಸರಸ್ವತಿಯನು

ಅಂದಗೆಡಿಸಬಾರದೆ- ಎಂದು ದಿ. ಬಿ. ಎಂ. ಶ್ರೀ ಯವರು ಎತ್ತಿದ ಧ್ವನಿಯೊಡನೆ ನಾವೂ ಧ್ವನಿಗೂಡಿಸಬೇಕು ಎನಿಸುತ್ತದೆ.

ಕುಮಾರವ್ಯಾಸನ ನುಡಿಗಟ್ಟು, ಪಡೆನುಡಿಗಳ ಶೈಲಿ ಕೆಲವಡೆ ಇಂದಿನ ಇಂಗ್ಲೀಷ್ idioms ಗಳಿಗೆ ಸರಿಸಮಾನವೆನಿಸಿರುವದು ಸೋಜಿಗವೆನಿಸಬಹುದಾಗಿದೆ. 'ವ್ಯರ್ಥ ಕಾಲವ ಕೊಲ್ಲದಿರಿ'ಎಂಬ ಪದರಚನೆಯು ಇಂಗ್ಲೀಷಿನ 'to kill time' ಎಂಬುದರ ಅನುವಾದರೂಪದಂತಿದೆ; 'ಬತ್ತಿದಬುಧಿಯ ಮೀನಿನಂತಿರೆ' ಎಂಬ ಪ್ರಯೋಗವು 'A fish out of water' ಎಂಬ ಇಂಗ್ಲೀಷ್ ಪ್ರಯೋಗದ ಪ್ರತಿಬಿಂಬವಾಗಿದೆ; 'ಕಿವುಡುಗೇಳು' ಎಂಬ ಜೋಡು ನುಡಿ 'fall on deaf ears' ಎಂಬ ಪಡೆನುಡಿಯ ಪಡಿನುಡಿಯಾಗಿದೆ; 'ಕದನ ಕಾಮುಕರು' ಎಂಬ ನುಡಿ 'war mongers' ಎಂಬ ಪ್ರಯೋಗದ ನೆನಪು ತರುತ್ತದೆ.

ಕುಮಾರವ್ಯಾಸನ ಭಾಷೆ ಎಷ್ಟು ಜೀವಂತವೆಂದರೆ ಇಂದಿಗೂ ಆ ಬಳಕೆಯ ನುಡಿಗಳು ನಮ್ಮ ಮನೆಮಾತುಗಳಾಗಿವೆ. 'ಅವನಿಗಿವನಿಯ ಮಾತು' ಧರ್ಮಗಿರ್ಮವನು'; 'ಹಲುಗಿರಿದು', 'ಹಿಂಡೆಯ ಕೊಳು', 'ಹೊಡೆದನೈ ಹನ್ನೆರಡು ತಿಂಡುಗದಕ್ಕಿಯೋಗರವ' 'ಸರಸಗಟು' ಇವೇ ಮೊದಲಾದ ಉದಾಹರಣೆಗಳನ್ನು ನೋಡಬಹುದು. ಯುದ್ಧದಲ್ಲಿ ಉಭಯ ಸೈನಿಕರ ಮೂದಲಿಕೆಯ ಮಾತುಗಳಲ್ಲಂತೂ ಕಗ್ಗ ಬೈಗುಳಗಳನ್ನು ಹಳ್ಳಿಯ ಬಾಯಿ ಮಾತಿನ ಕೋಶಾಗಾರದಿಂದ ಎತ್ತಿ ತಂದು ಇಡುತ್ತಾನೆ ನಮ್ಮ ನಾರಣಪ್ಪ. 'ನಾಯಿಗಳ ವೀಸಬಡ್ಡಿಯಲಸುವ ಕೊಂಬೆನು' ಎಂದರೆ ತಮ್ಮ ಪಕ್ಷದಲ್ಲಿ ನೂರು ಜನರು ಸತ್ತಿದ್ದರೆ ವೈರಿ ಪಕ್ಷದಲ್ಲಿ ನೂರಾ ಇಪ್ಪತ್ತು ಕುನ್ನಿಗಳ ಅಸುವ ತೆಗೆಯುತ್ತೇನೆ, ಎಂದು ಭೀಮನು ಪ್ರತಿಜ್ಞೆ ಮಾಡುತ್ತಾನೆ. 'ಎಂದರೆ ಶೇಕಡಾ ೨೦ ಬಡ್ಡಿ ಸೇರಿಸಿ ಸೇಡು ತೀರಿಸಿಕೊಳ್ಳುತ್ತೇನೆ ಎಂಬುದು ಅವನ ವೀರ ಪ್ರತ್ಯುತ್ತರ. ಅದೇ ರೀತಿ 'ನಿನಗೆ ಸಂಬಳವೆಷ್ಟು ಸಮರದಲಿ?' ಎಂದು ವೈರಿ ಸೈನಿಕನನ್ನು ಕೆಣಕುವ ರೀತಿ, 'ಮಾತಾಡಿಸು ಮಹಾ ಧನುವ' ಎಂದು ನಿಷ್ಕ್ರಿಯ ಯನಾದ ವೈರಿಯೋಧನನ್ನು ಪ್ರಚೋದಿಸುವ ಪರಿ ತೀರ ಬಳಕೆಯ ಚುಚ್ಚು ಮಾತುಗಳದು. 'ಹೆರಿಸಿರೆ ನಾರಿಯನು ನಿಮ್ಮಯ ಬಾಣ ಗರ್ಭಿಣಿಯೆ'

ಎಂದು ಪಾರ್ಥನು ಭೀಷ್ಮರಿಗೆ ಕೆಣಕಿ ನುಡಿಯುವದು ಒಂದಿಷ್ಟು ಒರಟಾದ, ತೀರ ಹಗುರಾದ ಮಾತು ಎನಿಸುತ್ತದೆ. ಎಂದರೆ ಪಿತಾಮಹರೂ, ಗುರು ಸ್ಥಾನದಲ್ಲಿರುವವರೂ, ಬ್ರಹ್ಮಚಾರಿಗಳೂ ಆದ ಭೀಷ್ಮರಿಗೆ ಮೊಮ್ಮಗನಾದ ಅರ್ಜುನನು ಬಾಣ ಗರ್ಭಿಣಿಯಾದ ನಿಮ್ಮ ನಾರಿಯನ್ನು—ಎಂದರೆ ಬಿಲ್ಲಿನ ಹೆಗ್ಗವನ್ನು ಹೆರಿಸಿರಿ ಎಂದು ಶ್ಲೇಷವಾಗಿ ನುಡಿಯುತ್ತಾನೆ. ಅದೇ ರೀತಿ 'ಇನ್ನೆಲ್ಲಿ ಹೊಗುವೈ ಕಂದಾ, ಕುಂತೀಜಠರವಲ್ಲವಲೆ' ಎಂದು ಧರ್ಮರಾಯನನ್ನು ಅವಹೇಳನೆ ಮಾಡಿ ನುಡಿಯುವ ರೀತಿಯೂ ಗ್ರಾಮ್ಯವೇ ಎನಿಸುತ್ತದೆ. 'ಇಂದು ನೀವ್ ಕೊಲಲಾರದಿದ್ದರೆ ಕೆರವು ನಿಮ್ಮಯ ಬಾಯಲಿ' ಎಂಬ ಮಾತು ಗ್ರಾಮ್ಯದ ಸೀಮೆಯನ್ನು ಮೀರುವಂತಿದೆ.

ಕುಮಾರವ್ಯಾಸನ ಜ್ಞಾನಪದ ಪಡೆನುಡಿಯ ಕೆಚ್ಚನ್ನು ತಿಳಿಯಬೇಕಾದರೆ ನಾವು ಗದುಗಿನ ಸುತ್ತು ಮುತ್ತಲಿನ ಹಳ್ಳಿಗಳಲ್ಲಿ ಇಂದಿಗೂ ಜನರಾಡುವ ಮಾತು ಕೇಳಿ ಅರ್ಥ ಹಚ್ಚಬೇಕು. ಡಿಕ್ಷನರಿಯ ಪುಟಗಳನ್ನು ತಿರುವಿ ಅಲ್ಲ. 'ಬಸುಟಿ ಕಳಿವುದು .... ನಿಶೆಯೊಳ್ಯಾಡದ ನರನ' ಎಂಬಲ್ಲಿ ನಿಶೆಯೊಳಾಡದ ನರನು ಎಂದರೆ ಯಾರು ? ಇದರ ಅರ್ಥ ಡಿಕ್ಷನರಿಯಲ್ಲಿ ದೊರಕಲಾರದು. ಇಂದಿಗೂ ನಮ್ಮ ಕಡೆಯ ಹಳ್ಳಿಗಳಲ್ಲಿ 'ಹೆಸರ'ಗೊಳ್ಳದವ' ಎಂದು ಕ್ಷೌರಿಕನಿಗೆ ಹೇಳುವುದುಂಟು. ಹಾಗೆಯೆ ನಿಶೆಯೊಳಾಡದವನು ಎಂದರೆ ಯಾರ ಹೆಸರನ್ನು ರಾತ್ರಿ ಉಚ್ಚರಿಸುವದು ಅಪವಿತ್ರವೊ ಅಂಥವನು—ಎಂದರೆ ಕ್ಷೌರಿಕನು ಎಂದು ಕುಮಾರವ್ಯಾಸನ ಕಾಲದಿಂದಲೂ ಹಳ್ಳಿಗಳಲ್ಲಿ ಪ್ರಚಲಿತವಿರುವ ಪರಿವಾಠ. ಕುಮಾರವ್ಯಾಸನ ಶೈಲಿಯಲ್ಲಿ ನಾವು ಮುಖ್ಯ ನೋಡಬೇಕಾದದ್ದು ಆತನ ಭಾಷೆ, ಅದರ ರೀತಿ.

ಕುಮಾರವ್ಯಾಸನ ಸಂಗ್ರಾಹಕ ಶೈಲಿ ಅವನ ಸಮರ್ಥ ಶೈಲಿಯ ಇನ್ನೊಂದು ಹೆಚ್ಚುಗಾರಿಕೆ. ಆತನ ಒಂದೊಂದು ಮಾತಿನಲ್ಲಿ ಒಂದೊಂದು ಕಥೆ, ಒಂದೊಂದು ಪಾತ್ರ ಎದ್ದು ಮೂಡುತ್ತವೆ. "ಕೊಂದು ಹಗೆಯಲ್ಲೀತ ಸಲಹಿದ ನೆಂದು ಮೋಹಿತನಲ್ಲ' ಎಂದು ಭೀಷ್ಮಾಚಾರ್ಯರು ಹೇಳುವ ಮಾತಿನಲ್ಲಿ ಶ್ರೀ ಕೃಷ್ಣನ ಯೋಗೇಶ್ವರತ್ವವು ಸ್ಫುಟವಾಗಿ ಎದ್ದು ಕಾಣುತ್ತದೆ. ಇದೇ ರೀತಿ ಅರಣ್ಯ ಪರ್ವದ ತುಂಬ ಮೂಲದಲ್ಲಿ ವ್ಯಾಸರು ಬಹು ವಿಸ್ತಾರವಾಗಿ ನಿರೂಪಿಸಿದ ಆಖ್ಯಾನ ಉಪಾಖ್ಯಾನಗಳನ್ನು ಕುಮಾರವ್ಯಾಸನು ಒಂದೊಂದು ಪದ್ಯ

ದಲ್ಲಿ, ಒಂದೊಂದು ಸಾಲಿನಲ್ಲಿ, ಒಂದೊಂದು ಪದದಲ್ಲಿಯೂ ಸಂಗ್ರಹಿಸಿ ತನ್ನ ಕೃಷ್ಣಕಥೆಯನ್ನು ಮುಂದುವರೆಸುತ್ತಾನೆ. ಸಾವಿತ್ರಿ- ಸತ್ಯವಾನ ಕಥೆ, ನಳದಮಯಂತಿಯ ಕಥೆ, ಹರಿಶ್ಚಂದ್ರನ ಕಥೆ, ದುಂದುಮಾರನ ಕಥೆ ಮೊದಲಾದುವನ್ನು ಇಲ್ಲಿ ಸೂಚಿಸಬಹುದು. ನಹುಷನ ಕಥೆಯನ್ನು, ನಿವಾತಕವಚರ ಕಥೆಯನ್ನು, ಊರ್ವಶಿಯ 'ಶಾಪದ' ವೃತ್ತಾಂತವನ್ನು ಅರಣ್ಯಪರ್ವದ ಹದಿನಾಲ್ಕನೆಯ ಸಂಧಿಯ ಎರಡು ಪದ್ಯಗಳಲ್ಲಿ (11 ಮತ್ತು 12) ಸಂಗ್ರಹಿಸಿದ್ದಾನೆ. ಧರ್ಮರಾಯನು ಕಾಮ್ಯಕವನಕ್ಕೆ ನಡೆತಂದ ಶ್ರೀ ಕೃಷ್ಣನ ಮುಂದೆ ತಮ್ಮ ಆಗುಹೋಗುಗಳನ್ನೆಲ್ಲ ನಿರೂಪಿಸುವ ಕ್ರಮ ಇದು.

ಇಂತು ತಲೆಯೊತ್ತುತ ಮಹಾವಿಪಿ
ನಾಂತರವ ತೊಳಲಿದೆವು ಬಳಿಕ ವ
ನಾಂತದೊಳಗೊಂದಾದುದೊಳಿಗ ನಹುಷ ನೃಪತಿಯಲಿ ।
ಭ್ರಾಂತಿಯೈ ಸಲೆ ಭೀಮನುರಣಾ
ಕ್ರಾಂತನಾದನು ಧರ್ಮಕಥೆಯಲಿ
ಸಂತವಾಯಿತು ವಿಶಾಪನಾದನು ನಹುಷನಾಕ್ಷಣಕೆ ॥

ಅಡವಿಯಲ್ಲಿ ಭೀಮನು ಫಣಿಯ ಭೋಗದಿಂದ ಬಿಗಿವಡಿಯಲ್ಪಟ್ಟಾಗ ಧರ್ಮರಾಯನು ಧರ್ಮ ಕಥಾ ಪ್ರಸಂಗದ ಮೂಲಕ ತಮ್ಮನನ್ನು ಫಣಿಯ ಬಂಧನದಿಂದ ಬಿಡಿಸುತ್ತಾನೆ, ಮತ್ತು ಫಣಿಯ ಶಾಪವಿಮುಕ್ತನಾಗಿ ಮೊದಲಿನ ನಹುಷನ ರೂಪವನ್ನು ತಾಳುತ್ತದೆ. ಇಷ್ಟೆಲ್ಲ ಕಥೆಯನ್ನು ಮೇಲಿನ ಮೂರೇ ಸಾಲಿನಲ್ಲಿ ಸಂಗ್ರಹಿಸಿದ್ದಾನೆ.

ಮುಖ್ಯವಾಗಿ ನಾರಣಪ್ಪನ ಭಾಷೆ, ನುಡಿಗಟ್ಟು ಜಾನಪದ ದೇಸಿಗೆ ಸಂಬಂಧಿಸಿದುದು. ಭೀಮನನ್ನು ಬಂಧಿಸಿದ ಆ ಫಣಿಯನ್ನು ಧರ್ಮರಾಯನು 'ಎಲೈ ನಾಡಾಡಿಗಳ ನಾಟಕದ ಫಣಿಯಲ್ಲವೆ ನೀನಾರು' ? ಎಂದ. ಕುಮಾರವ್ಯಾಸನೂ ತನ್ನ ಕಾಲದ ಬಯಲಾಟಗಳನ್ನು ನೋಡಿರಬೇಕು. ಅಲ್ಲಿಯ ಕೃತಕ ಫಣಿಯನ್ನೂ ಕಂಡಿರಬೇಕು. ಭೀಮನನ್ನು ಬಂಧಿಸುವ ಹುಡುಗಾಟಿಕೆ ಈ ನಾಡಾಡಿಯ ನಾಟಕದ ಫಣಿಗಲ್ಲದೆ ಇನ್ನಾರಿಗೆ ? 'ನಿಗುಚು' (ಹೊಡೆದು

ಕೆಡಹು), 'ಭುಜದ ತಿಮಿರ' (ತೋಳ ತೀಟೆ ಮೈಸೊಕ್ಕು, ಮೈಯೊಳಗಿನ ತಿಮಿರು), 'ಬಾಣಗಳ ಮೆತ್ತು (ಅರಲುಗಪ್ಪದವರು ಜಿಗುಟಾದ ಮಣ್ಣಿನ ಕೆಸರಿನಿಂದ ಗೋಡೆಯನ್ನು ಮೆತ್ತುವಂತೆ ಬಾಣಗಳಿಂದ ಮೆತ್ತುವುದು), 'ಕಲಗರ್ಚು' (ಇಂದಿಗೂ ಕಲಗಚ್ಚು ಎಂಬುದು ಅಡುಗೆ ಮನೆ, ದನದಮನೆ ಗಳಲ್ಲಿ ಉಪಯೋಗಿಸುವ ದಿನಬಳಕೆಯ ಶಬ್ದ) 'ಬಡಿಹೋರಿ' (ಕಡ್ಡಿ ಬಡಿದ ಹೋರಿ), 'ಭಾಷ್ಕಳಗೆಡೆ' (ಬರೀ ಮಾತಾಡು). ಏಪೆ (ಸರತಿ), ಬೊಡ್ಡಿಯ ಕೊಬ್ಬು, 'ಗೈಯಾಳಗನು' 'ಸರಸಗಟು', 'ಚಂಟ್ಟು ಮುರಿತ', ಹಣಿಯ ಮಟ್ಟಿಯ, 'ಬಳಿಯ ಧೋತ್ರದ,' 'ಒಳಲುಗಚ್ಚಿಯ' (ಇಂಥ ವೈದಿಕರನ್ನು ನಾವು ಇಂದಿಗೂ ಕಾಣಬಹುದು), 'ಹುಗ್ಗಿಗ್' (ಕೂಳಬಕ್ಕ ಏಂಬ ಅರ್ಥದಲ್ಲಿ, ಗೋದಿಯ ಹುಗ್ಗಿಯನ್ನು ಹೊಡೆಯುವವ ಎಂದೇ ಇದ್ದಿರಬೇಕು.)- ಈ ಮೊದಲಾದ ಅನೇಕಾನೇಕ ಪ್ರಯೋಗಗಳು ಗ್ರಾಮ್ಯ ರೀತಿಯ ರೂಪಗಳಾಗಿಯೂ ಮೆರೆ ದಿವೆ. 'ನೊಗವು', 'ನೇಗಿಲು', 'ಕುಂಟೆ', 'ಕೊರಿಗೆ' ಎಂಬ ಪ್ರಯೋಗ ಗಳು ಕವಿಗೆ ಕೃಷಿ ವ್ಯವಸಾಯದ ಅನುಭವವೂ ಇದ್ದಿರಬೇಕೆಂದು ಸೂಚಿಸು ತ್ತವೆ. 'ಕುಂಟಣಿ' (ಕುಂಟಲಗಿತ್ತಿ), 'ನಾಯಿತನ' (ಕಾಮುಕನ ಪಶುತನ), 'ಓರೆಹೋರೆ' (ಹೆಚ್ಚು ಕಡಿಮೆ), 'ನಾಡ ಬಟ್ಟಿಗ', 'ದೀಕ್ಷಿತರ ಚಂಡಿಕೆಗಳು' 'ಬೋಳೆಯತನ' (ಭೋಳೇತನ, ಮುಗ್ಧತನ), 'ಬೀಕಲು' (ನಿರುಪಯೋಗಿ), 'ಕಸರಿಕೆ' (ಕಸಾರಿಕೆ), 'ಕೊಳುಕೊಡೆ', 'ಪಾಳಿ' (ಸರದಿ), 'ಒಪ್ಪೆಗರು' (ಸತ್ವಹೀನರು) ಈ ಮೊದಲಾದ ಶಬ್ದಗಳು ಇಂದಿಗೂ ಆನಾಗರಿಕರ ಬಾಯಲ್ಲಿ ಕೇಳಬರುವುದುಂಟು. (ನಾಗರಿಕರ ಬಾಯಲ್ಲೂ ಕೇಲವು ಕೇಳಿಬರಬಹುದು.)

ಕುಮಾರವ್ಯಾಸನ ಶಬ್ದಗಳಿಗೆ ಅರ್ಥ ಹಚ್ಚುವಾಗ ಕೋಳಿವಾಡ-ಗದುಗಿನ ಸುತ್ತ. ಮುತ್ತಲಿನ ಭಾಗದಲ್ಲಿ ಇಂದಿಗೂ ಪ್ರಚಲಿತವಾಗಿರುವ ಜನರ ದಿನಬಳಕೆಯ ಆಡುನುಡಿಗಳನ್ನು ಪರಿಶೀಲಿಸಿ ನೋಡುವುದು ಹೆಚ್ಚು ಸಹಾ ಯಕ ವಾದೀತು ಎಂಬ ಮಾತನ್ನು ಎತ್ತಿ ತೋರಿಸಲಾಯಿತಷ್ಟೆ. ಆದರೆ ಒಂದು ಮಾತು, ಅವನ ಕಾವ್ಯದಲ್ಲಿ ಕಂಡುಬರುವ 'ವಡಾಜರ' (ಬೆಕ್ಕು), 'ಜೀವಣ' (ಊಟ), 'ಪೈಕ' (ಪೈಕೀ) 'ಲಾವಕ' (ಹಚ್ಚುವವ, ಚಾಡಿಕೋರ) ಎಂಬಂತಹ ಮರಾಠಿ ಎನ್ನುವ ದಾಕ್ಷಿಣಾತ್ಯ ಪ್ರಾಕೃತ ಶಬ್ದಗಳು ಈಗ

ಗದುಗಿನ ಭಾಗದಲ್ಲಿ ಅಷ್ಟೊಂದು ಪ್ರಮಾಣದಲ್ಲಿ ಕಂಡು ಬರುವದಿಲ್ಲ. ಡಾ. ರಂ. ಶ್ರೀ ಮುಗಳಿಯವರ, ತಮ್ಮ 'ಕನ್ನಡ ಸಾಹಿತ್ಯ ಚರಿತ್ರೆ'ಯಲ್ಲಿ ಹೇಳಿರು ವಂತೆ ಕುಮಾರವ್ಯಾಸನ ಮರಾಠಿ ಪ್ರಾಕೃತ ಪ್ರಯೋಗಗಳು ಗದುಗಿನ ಸೀಮೆಯ ಭಾಷಾ ವೈಶಿಷ್ಟ್ಯವೆಂದೆ ಹೇಳಲು ಬರುವಂತಿಲ್ಲ. ಕುಮಾರವ್ಯಾಸನು ಮರಾಠೀ ಗ್ರಂಥಗಳನ್ನೋದಿಯೊ ಮರಾಠಿ ಮಾತನಾಡುವ ರಾವುತರ, ಮಾವುತರ, ಅಧಿಕಾರಿಗಳ ಬಳಕೆಯ ಭಾಷೆಯನ್ನು ಕಲಿತುಕೊಂಡೊ ತನ್ನ ಕಾವ್ಯಭಾಷಾ ಸಂಪತ್ತಿಯನ್ನು ಹೆಚ್ಚಿಸಿಕೊಂಡಿರಬೇಕು. ಏಷ್ಟೊ ತದ್ಧಿತ ಕೃದಂತ ಪ್ರತ್ಯಯಗಳನ್ನು ಭಾವನನಾಮಗಳ ರಚನೆಯನ್ನು ಮರಾಠಿ ಪ್ರಾಕೃತ ರೀತ್ಯಾ ಮಾಡಿಕೊಂಡಿರುವುದು ಆತನ ಕಾವ್ಯಶೈಲಿಯ ವೈಶಿಷ್ಟ್ಯವಾಗಿದೆ. ವೀರ ಪಣ, ವಿಸ್ತಾರಪಣ, ಜಾಣಪಣ ಮೊದಲಾದ ಶಬ್ದ ಪ್ರಯೋಗಗಳಲ್ಲಿ 'ಪಣ' ಎಂಬ ಇಂದಿನ ಮರಾಠಿ ಪ್ರತ್ಯಯವನ್ನೆ ಬಳಸಿದ್ದಾನೆ. ಅದೇ ರೀತಿ ಮೇಳವಣೆ, ಭಾರಣೆ, ಒಡ್ಡವಣೆ, ಭಂಗವಣೆ, ಅಂಗವಣೆ, ಗಡಾವಣೆ ಮೊದಲಾದ ಶಬ್ದರೂಪಗಳಲ್ಲಿ 'ಣೆ'ಏಂಬ ಪ್ರತ್ಯಯ ಮರಾಠಿಯದೆ ಆಗಿದೆ., ಇದರೊಂದಿಗೆ –'ಚೌರಾಸಿಲಕ್ಷ','ಬಾಹತ್ತರ ನಿಯೋಗ', 'ಚೌಕಡಿ', 'ಬೈಸಿಕೆ', 'ಖೇಳಮೇಳ' 'ಪಾಯವಟ್ಟ', 'ಹಳುಹಳು', 'ಖರೆಯ', 'ಚಾವಟಿ', (ಚಾವಟತನ, ಕಿಡಿಗೇಡಿತನ), 'ತಳಪದ', 'ಹೊಂಬಾಹೆ', 'ಉತ್ತರಾಯಿ', 'ದುಗುನ–ತಿಗುನ'. ಹೀಗೆ ವಿವಿಧ ಪ್ರಕಾರದ ಶಬ್ದರಚನೆಗಳನ್ನು ನೋಡಬಹುದಾಗಿದೆ.

ಕನ್ನಡ ದೇಸಿಯೊಡನೆ ಕನ್ನಡದಲ್ಲಿ ಬೆರೆತು ಬಂದ ಅನ್ಯದೇಶಿಯ ಶಬ್ದ ಗಳನ್ನು ಬಳಸುವಲ್ಲಿ ಕುಮಾರವ್ಯಾಸನಿಗೆ ಒಲವಿದೆ. ಭಾಷಾಶೈಲಿ, ಪ್ರಾದೇಶಿ-ಕತೆ, ವ್ಯಾಕರಣ, ಛಂದಸ್ಸುಗಳು ಕುಮಾರವ್ಯಾಸನವೇ ಎನ್ನುವಷ್ಟು ವೈಯಕ್ತಿಕ ರೂಪಗಳಾಗಿವೆ. 'ಕೇಳ್ದು' ಎಂಬ ರೂಪವನ್ನು 'ಕೇಳಿದು' ಎಂದೂ 'ತೊಳಲ್ದು' ಎಂಬ ರೂಪವನ್ನು 'ತೊಳಲಿದು' ಎಂದೂ ಬದಲಾಯಿಸಿ ಕೊಳ್ಳುವ ಸ್ವಾತಂತ್ರ್ಯ ಛಂದಸ್ಸಿನ ಅನುಕೂಲತೆಗಾಗಿ ಗದುಗಿನ 'ವೀರನಾರಾ-ಯಣ'ನನ್ನ 'ವೀರನಾರಯಣ'ನನ್ನಾಗಿ ಮಾಡುವ ಸ್ವಾತಂತ್ರ್ಯಗಳು ಗಮನಿಸು ವಂತಿವೆ

ವಿಭಕ್ತಿಕಾರಕಗಳು, ತದ್ಧಿತ ಕೃದಂತಗಳು, ಸಂಧಿ ಸಮಾಸಗಳು, ಅಖ್ಯಾತ ಪ್ರಯೋಗಗಳು ಕುಮಾರವ್ಯಾಸನವೇ ಆಗಿವೆ 'ನಮ್ಮನ್ನು' ಎಂಬ

ದ್ವಿತೀಯಾ ವಿಭಕ್ತಿಯ ಅರ್ಥದಲ್ಲಿ 'ನಮ್ಮವನು' ಎಂದು ಪ್ರಯೋಗಿಸುತ್ತಾನೆ. 'ಕೆಲವು ದಿನವೈತಂದು', ಏಂಬ ಪ್ರಯೋಗವನ್ನು 'ಕೆಲವು ದಿನಗಳಲಿ ಐತಂದು', ಇಲ್ಲವೆ 'ಕೆಲವು ದಿನಗಳಿಗೆ ಐತಂದು', ಎಂದು ಸಪ್ತಮಿಯನ್ನೊ ಚತುರ್ಥಿಯನ್ನೊ ಮಾಡಬೇಕಾಗುತ್ತದೆ. 'ಬಸಿರಲಿ ಬಂದ', ಎಂಬ ಸಪ್ತಮಿ ಪ್ರಯೋಗವನ್ನು ಬಸಿರಿನಿಂದ ಬಂದ, ಎಂದು ಪಂಚಮಿ ವಿಭಕ್ತಿ ಮಾಡಬೇಕಾಗುತ್ತದೆ. 'ರಿಪುಗಳ ತಿಂದು ತೇಗುವದು', ಎಂಬುದು 'ರಿಪುಗಳನ್ನು ತಿಂದು ತೇಗುವದು' ಎಂಬ ದ್ವಿತೀಯಾ ವಿಭಕ್ತಿಯ ಅರ್ಥದಲ್ಲಿದೆ. ಕೆಲವೊಂದು ಪ್ರಯೋಗಗಳು ಮಾತ್ರ ಕೇಶಿರಾಜನು ಹೇಳಿರುವ ವಿಭಕ್ತಿ ಪಲ್ಲಟದ ಕಟ್ಟುಪಾಡಿಗೆ ಒಳಗಾಗಿವೆ. ಕುಮಾರವ್ಯಾಸನ ಅನ್ಯ ದೇಶಿಯ ಶಬ್ದಗಳ ಬಳಕೆಯನ್ನೂ ವ್ಯಾಕರಣ ವೈಲಕ್ಷಣ್ಯಗಳನ್ನು ಮಹಾರಾಷ್ಟ್ರದ ಜ್ಞಾನೇಶ್ವರನ ಶೈಲಿಗೆ ಹೊಲಿಸಬಹುದು.

ಕುಮಾರವ್ಯಾಸನ ಸಮಾಸಗಳ ವೈಶಿಷ್ಟ್ಯವೇ ಒಂದು ವೈಶಿಷ್ಟ್ಯ. ಅದರಲ್ಲಿಯೂ ಅವನು ಪ್ರಯೋಗಿಸುವ ಬಹುವ್ರೀಹಿ ಕರ್ಮಧಾರಯಗಳಂತೂ ವೈಚಿತ್ರ್ಯಪೂರ್ಣವಾಗಿವೆ.

ನೆತ್ತಿ ಮುಸುಕಿನ ಕೈಯಗಲ್ಲದ
ಕುತ್ತದಲೆ ನೆಟ್ಟಾಲಿಗಳ ಚಲ
ಚಿತ್ತರಿದ್ದುದು ಸಕಲ ನಾಯಕವಾಡಿ ದುಗುಡಲೀ

ಇದರಲ್ಲಿ 'ನಾಯಕವಾಡಿ' ಎಂಬ ನಾಮಪದಕ್ಕೆ 'ನೆತ್ತಿ ಮುಸುಕಿನ' 'ಕೈಯಗಲ್ಲದ' ಇತ್ಯಾದಿ ವಿಶೇಷಣಗಳು ಮಾಲೆಗಟ್ಟಿ ಕರ್ಮಧಾರಯ ಪ್ರಯೋಗವಾಗಿದೆ. ಇದೇ ರೀತಿ 'ಊಹೆದೆಗಹಿನ, ಮೂಗುವೆರಳಿನ, ಸಾಯಕದ ಕಿವಿವರೆಯ, ಸರಳಕೆನ್ನೆಯ ಮೊದಲಾದ ಪ್ರಯೋಗಗಳನ್ನೂ ನೋಡಬಹುದು. 'ರಾಯರೆದೆದಲ್ಲಣಿಗರು' ಎಂದರೆ ರಾಜರ ಎದೆಗಳನ್ನು ತಲ್ಲಣಿಸುವಂತಹರು ಎಂಬ ಉಪಪದ ತತ್ಪುರುಷ ರೀತಿಯಾಗಲಿ, 'ಸಕಲಶಾಸ್ತ್ರ ವಿಚಾರದುದ್ಭವೆ', 'ವರನಯನವೊಂದಿಲ್ಲದಾ ಸನ್ನುತ ಪರಮಶಿವ' ಎಂಬ ಸಮಾಸ ಪ್ರಯೋಗಗಳಾಗಲಿ ಅವು ಕುಮಾರವ್ಯಾಸನವೇ. ಅರಿಸಮಾಸಗಳು ಈತನಲ್ಲಿ ಹೇರಳ, ಅವು ಗುಣವೊ ದೋಷವೊ ಆ ಮಾತು ಬೇರೆ. 'ಕುದುರೆಯನ್ನು

ಏರುವ ಪುನಶ್ಚು ಮಾಡಬೇಡ' ಎಂದು ಹೇಳುವಾಗ 'ಏರುಚಿತ್ರವ ಮಾಡದಿರು' ಎಂಬ ಅರಿಸಮಾಸ ಪ್ರಯೋಗವನ್ನು ಮಾಡುತ್ತಾನೆ. ಅದೇ ರೀತಿ 'ನಿಸ್ಸಾಳ ಬಡಿಕ' 'ಬಿಲ್ಲಂತರ', 'ತಾವರೆತನಯ', 'ಬಾಯ್ದಾರಿ' ಮೊದಲಾದ ರೂಪ ಗಳನ್ನೂ ನೋಡಬಹುದು. 'ಹಾಲಸಾಗರಠಾವೆ' ಎಂಬ ಬಹುವ್ರೀಹಿ ಪ್ರಯೋಗ ದಲ್ಲಿ 'ಹಾಲಸಾಗರ' ಎಂಬ ಅರಿಸಮಾಸವೂ ಕೂಡಿದೆ. 'ಪನ್ನಗನ ಸಿರಿಮಂಚ ದಾತನು,' 'ಮುರಗೇಡಿ,' 'ಕೊಡಲಿಯ ಕಂಧರಿಗ,' 'ಕೆದರುಗೇಶದ ಕಾಂತೆ' 'ಹೆಣನುಂಗಿಗಳು', 'ಕಣ್ಣುರಿಗಾರಿ' ಇತ್ಯಾದಿ ಸಮಸ್ತ ರೂಪಗಳನ್ನೂ ಪರಿಶೀ ಲಿಸಬಹುದಾಗಿದೆ ' ಪರಶುರಾಮ' ಎಂಬ ಅಂಕಿತಕ್ಕೆ 'ಕೊಡಲಿಯ ಕಂಧರಿಗ' ಎಂಬ ಬಹುವ್ರೀಹಿ ರೂಪಾಂತರವನ್ನು ಮಾಡಿರುವುದು ಕವಿಯ ಶೈಲಿಯ ವೈಶಿಷ್ಟ್ಯ. 'ಮುರಹರ' ಎಂಬ ರೂಪಕ್ಕೆ 'ಮುರಗೇಡಿ' ಎಂಬ 'ಕಮಲೋ ದ್ಭವ'ನಿಗೆ 'ತಾವರೆತನಯ'ನೆಂದೂ, 'ರಾವಣ'ನಿಗೆ 'ಕೊರಳು ಹಲವಾದಸುರ' ನೆಂದೂ, 'ಭೀಮನಿಗೆ' 'ಗಾಳಿಗುದಿಸಿದ ವೀರ'ನೆಂದೂ ಹೊಸ ಹೆಸರನಿಟ್ಟಿರುವ ಕುಮಾರವ್ಯಾಸನ ಕಲ್ಪನೆ ಕೌತುಕವನ್ನುಂಟುಮಾಡುತ್ತದೆ.

ಆದರೆ ಒಮ್ಮೊಮ್ಮೆ ಈತನ ಅಚ್ಚುಗನ್ನಡತನ ಎತ್ತೊ ಮಾಯವಾಗಿ, ಉದ್ದುದ್ದದ ಸಂಸ್ಕೃತ ಸಮಾಸಗಳು ಕಾಣಿಸಿಕೊಳ್ಳುತ್ತವೆ. 'ವರಭಾಗವತ ಪುಸ್ತಕ ರತ್ನ,' 'ಉದ್ದಾಮ ಮುನಿಜನರಚಿತ ಮಂತ್ರಸ್ತೋಮ ಪುಷ್ಕಲ ಪೂತ ಪುಣ್ಯ ಜಲಾಭಿಷೇಚನದ' 'ಘನಸಮರವೇ ಸರ್ವಾರ್ಥ,' 'ಕೋಪಶ್ರಮಕೆ ರಿಪುರುಧಿರಾಂಬುಪಾನವೆ ವಿಪುಲ ಫಲ' 'ದುಗ್ಧಾಬ್ಧಿ ತೀರ್ಥಾವಳಿ', 'ಯಮ-ಸೂನುವೈಭವ ದಗ್ಧಮನ್ಯೋನುಭಾವ', 'ವಿವಾಹೋತ್ಸವ ವಿಲ್ಲೋಕನ ಕೌತುಕಿ' ಮೊದಲಾದ ಪ್ರಯೋಗಗಳ ಜೊತೆಗೆ ಸಂಸ್ಕೃತಮಯವಾದ ಈ ಪದ್ಯವನ್ನೂ ನೋಡಬಹುದು :

ಪಾತಕನು ಪತಿತನು ಕೃತಘ್ನನು
ಘಾತಕನು ಮರ್ಮನು ದುರಾಧ್ಯನ್
ಭೀತಕನು ದೂಷಕನು ದುರ್ಜನನ ಪ್ರಯೋಜಕನು ।
ನೀತಿಹೀನನು ಜಾತಿ ಧರ್ಮ ಸ
ಮೇತ ದ್ವೈವದ್ರೋಹಿಯೆಂಬುದು
ಭೂತಳದೊಳ್ ನರಕ ಚಿತ್ರೈಸನ್ದೆಂದವಾ ಮುನಿಪ ॥

ಇನ್ನುಳಿದ ಕೆಲವು ಪ್ರಯೋಗ ವೈಚಿತ್ರ್ಯಗಳನ್ನು ಮಾದರಿಗಾಗಿ ಉದಾಹರಿಸಬಹುದು ; 'ಬಲುಜಾಣ್ಕೆ' ಎಂಬುದಕ್ಕೆ 'ಬಿಲುಜಾಣಿಕೆ', 'ಮೃಗದೊಳೊಯ್ದೆನು' ಎಂಬ ರೂಪವು 'ಮೃಗರೂಪದಲ್ಲಿ ಒಯ್ಯುವೆನು' ಎಂಬರ್ಥದಲ್ಲಿ. 'ಅನುಜ' ಶಬ್ದಕ್ಕೆ 'ಬಳಿಯ ಜನಿಸಿದನು' ಎಂಬ ಅನುವಾದ. ಛಂದೋನುಕೂಲತೆಗಾಗಿ 'ನಾರಯಣ' ಎಂಬ ರೂಪವನ್ನು ತಯಾರಿಸಿದಂತೆ 'ಅಂತರಾಯದಲಿ' ಎಂಬ ಪ್ರಯೋಗಕ್ಕೆ 'ಅಂತರದ ರಾಯದಲಿ' ಎಂದು, 'ತಾ ಹಾಕಿ ಕೊಂಡ' ಎಂಬರ್ಥದಲ್ಲಿ 'ಹಾಕಿ ತಾ ಕೊಂಡ' ಎಂದೂ ರೂಪಿಸಿದ್ದಾನೆ. ಪಂಪನು 'ಮತ್ತಿನ' ಎಂಬ ಶಬ್ದವನ್ನು ಬಳಸುವಂತೆ 'ಬಳಿಕಿನ' ಎಂಬ ಶಬ್ದವನ್ನು ಪ್ರಯೋಗಿಸುತ್ತಾನೆ, ಕುಮಾರವ್ಯಾಸ. ಒಮ್ಮೊಮ್ಮೆ ವಿಶೇಷಣವನ್ನು ನಾಮಪದವಾಗಿಯೂ, ಭಾವನಾಮವನ್ನು ರೂಢನಾಮವನ್ನಾಗಿಯೂ, ರೂಢನಾಮವನ್ನು ವಿಶೇಷಣವಾಗಿಯೂ ಬಳಸುತ್ತಾನೆ. 'ನೇಸಾಹಿತ್ಯನಲ್ಲೆಂದ' 'ಸರಸಸಾಹಿತ್ಯರು' ಎಂಬಲ್ಲಿ ಸಾಹಿತ್ಯಜ್ಞ ಎಂಬರ್ಥದಲ್ಲಿ ಸಾಹಿತ್ಯ ಶಬ್ದವನ್ನು ಉಪಯೋಗಿಸಿದ್ದಾನೆ. ಉದ್ದ, ತರುಣ, ಕಠಿಣ, ನಿರುತ್ತ, ಮೊದಲಾದ ವಿಶೇಷಣಗಳನ್ನು ನಾಮಪದಗಳನ್ನಾಗಿ ಉಪಯೋಗಿಸಿದ್ದಾನೆ. 'ಅವರು' ಎಂಬರ್ಥದಲ್ಲಿ 'ಆತಗಳು' ಎಂದು, ಆತನೊಬ್ಬ ಈತನೊಬ್ಬ ಎನ್ನುವುದಕ್ಕೆ ಬದಲಾಗಿ 'ಆತೋರ್ವಾತ, ಈತೋರ್ವಾತ' ಎಂದು ಬ್ರಾಹ್ಮಣರು ಎನ್ನಲು 'ಬ್ರಾಹ್ಮರು' ತೀವಿದುದು ಎನ್ನುವುದಕ್ಕೆ 'ತಿವಿದುದು', ಡಾವರಿಸು ಎನ್ನಲು 'ಡವರಿಸ', ವಸ್ತುವಿಗೆ ಎನ್ನಲು 'ವಸ್ತುಗೆ', ವೃಥಾ ಎಂಬ ಅವ್ಯಯವನ್ನು ವಿಶೇಷಣವನ್ನಾಗಿ ಮಾಡಿ 'ವೃಥೆ'. ಎಂದೂ ಎನ್ನುತ್ತಾನೆ. ತಮನಸೀಳ ಬೇಕಾಯ್ತು ಎಂಬರ್ಥದಲ್ಲಿ 'ತಮನಸೀಳಲಿಕಾಯ್ತು' ಎಂದು ಪ್ರಯೋಗಿಸುತ್ತಾನೆ. ಪುರುಷ ಎಂಬುದು 'ಪೂರುಷ' ಎಂದಾಗಿ ಹೋರಾಟವು 'ಹೋರಟಿ' ಯಾಗಿ, ನಿಷ್ಕಾರವು 'ನಿಷ್ಕೂರ'ವಾಗಿ, ವಿದ್ಯಾ ಶಬ್ದವು 'ವಿದ್ಯ' ಎಂದಾಗಿ ವೈಶಂಪಾಯನ ಶಬ್ದವು 'ವೈಶಂಪಾಯವಾಗಿ' ಮಾರ್ಪಾಟಾಗುತ್ತವೆ.

ತತ್ಸಮ ತದ್ಭವಗಳಲ್ಲಿ ಒಂದೆರಡು ವಿಶಿಷ್ಟ ಪ್ರಯೋಗಗಳನ್ನು ಗಮನಿಸಬಹುದು. 'ಧರ್ಮಪಥ' ಎಂಬುದು 'ದಮ್ಮಪತ'ವಾಗಿ 'ವಿಸ್ತೃತ'ವು 'ಬಿಚ್ಚಟಿ'ಯಾಗಿ 'ಯವನಿಕ'ವು 'ಜೋನೆಗ'ವಾಗಿ 'ಪ್ರತಿಪಕ್ಷ'ವು 'ಪಡಿಪಚ್ಚ' ವಾಗಿ ರೂಪಾಂತರ ಹೊಂದುತ್ತವೆ.

ಸಂಧಿಯಲ್ಲಿಯೂ ಕೆಲವೊಂದು ವೈಚಿತ್ರ್ಯಗಳನ್ನು ಕಾಣಬಹುದು. 'ರಾಮನೆ+ ಊರ್ಜಿತ ರಾಮ' ಎಂಬುದನ್ನು 'ರಾಮನೂರ್ಜಿತರಾಮ' ಎಂಬ ಅಪರೂಪದ ಸಂಧಿಯಾಗಿ 'ದೇವರು+ಅದಿತಿಯಲಿ' ಎಂಬುದನ್ನು 'ದೇವರುಯದಿತಿಯಲಿ' ಎಂದೂ ವಿಚಿತ್ರವಾಗಿ ಸಂಧಿಸಿದ್ದಾನೆ. 'ಸಹಿತೊಂದಿವಸ' ಎಂಬ ಪ್ರಯೋಗವನ್ನು 'ಸಹಿತ+ಒಂದು+ದಿವಸ' ಎಂದೂ ಬಿಡಿಸಬೇಕಾಗುತ್ತದೆ. 'ಬಾಹು+ ಅಪ್ಪಳಿಸಿ' ಎಂಬುದನ್ನು 'ಬಾಹಪ್ಪಳಿಸಿ' ಎಂದು ಸಿದ್ಧಿಸುತ್ತಾನೆ. 'ಕುಡಿಮೀನ+ ಪೋಲ್+ಇಹ' ಎಂಬುದನ್ನು 'ಕುಡಿಮೀನಪೋಲ್ವಿಹ' ಎನ್ನುತ್ತಾನೆ. 'ಆಣಿ+ ಎಂದ' ಎಂಬ ಪದಗಳ ಸಂಧಿಯನ್ನು 'ಆಣಿಂದ' ಎಂದು ಮಾಡುತ್ತಾನೆ. ಈ ರೂಪಗಳಲ್ಲಿ ಅನೇಕ ರೂಪಗಳು ಓಲೆಗರಿ ಪ್ರತಿಮಾಡಿದವನ ಸ್ವಂತಿಕೆಗಳೆಂಬುದನ್ನೂ ಅಲ್ಲಗಳೆಯುವಂತಿಲ್ಲ. ಆದರೆ ನಮ್ಮ ಕವಿ ಆಸ್ಥಾನ ವೈಯಾಕರಣಿಯಾಗಲಿ ಭಾಷ್ಯಕಾರನಾಗಲಿ ಆಗಿರಲಿಲ್ಲ. ನಾಡಬಳಕೆಯ ಭಾಷಾಕಾರನಾಗಿದ್ದ ಆತ.

ಕೆಲವು ತದ್ಧಿತ ಕೃದಂತ ರೂಪಗಳನ್ನು ಇಲ್ಲಿ ಗಮನಿಸಬಹುದು. 'ಕುತೂಹಳಿಕೆ', 'ಉತ್ತಮಿಕೆ', 'ಸ್ವಾತಂತ್ರಿಕೆ', 'ಬವರಿಗ', 'ತವಕಿಗ', 'ಒಳ್ಳೆಗರು' ಎಂಬ ತದ್ಧಿತ ರೂಪಗಳೆ ಮಾದರಿ ಒಂದು ಬಗೆಯದ್ದಾದರೆ 'ಇಸು' ಪ್ರತ್ಯಯ ಹೆಚ್ಚಿ ಕ್ರಿಯಾಪದವನ್ನು ಸಾಧಿಸುವ ರೀತಿಯಲ್ಲಿ 'ಹನುಮಿಸು' ಎಂಬ ವಿಶೇಷ ರೂಪವನ್ನು ಇನ್ನೊಂದು ಮಾದರಿಯಾಗಿ ನೋಡಬಹುದು. 'ಹನುಮ'ದಿಂದ 'ಹನುಮಿಸು' ಎಂದರೆ ಜಿಗಿ (ಇಲ್ಲವೆ ಶಬ್ದಮಾಡು) ಎಂಬ ವಿಶೇಷ ರೂಪವನ್ನು ತಯಾರಿಸುವದು ಕುಮಾರವ್ಯಾಸನಿಗೊಬ್ಬನಿಗೆ ಸಾಧ್ಯ ಎನ್ನುವಂತಿದೆ. ಹನುಮಂತನಂತೆ ಜಿಗಿಯುವದಕ್ಕೆ 'ಹನುಮಿಸು' ಎಂಬ ರೂಪವನ್ನು ಸಿದ್ಧಿಸಿರುವುದು ಇಂದಿನ ಪ್ರತಿಮಾ ರೂಪಕಕ್ಕೆ ಒಂದು ಸುಂದರ ಉದಾಹರಣೆಯಾಗಿದೆ. ಹನುಮಿಸುವಲ್ಲಿ ಸಮುದ್ರಲಂಘನ ಮಾಡಿದ ಹನುಮಂತನ ಚಿತ್ರ ಸ್ಫುಟವಾಗಿ ಕಣ್ಮುಂದೆ ನಿಲ್ಲುತ್ತದೆ. ಇದರಂತೆ 'ಹೋಳಿಸು' (ಹೋಳುಮಾಡು ಎಂಬರ್ಥದಲ್ಲಿ), 'ಬಂಡಿಸು', 'ಅಳವಿಸು' ಮೊದಲಾದ ಕೃದಂತಗಳನ್ನು ನೋಡಬಹುದು 'ಹೂಡು' ಎಂಬ ಕ್ರಿಯಾಪದದಿಂದ 'ಹೂಟೆ' ಎಂಬ ನಾಮಪದ, 'ಕುದಿ' ಎಂಬ ಕ್ರಿಯಾಪದದಿಂದ 'ಕುಳಿ' ಪ್ರತ್ಯಯ ಹಚ್ಚಿ 'ಕುದಿಕುಳಿಗಳು' (ಕುದಿಯುವವರು) ಎಂಬ ನಾಮಪದ,

'ಕುಣಿ' ಎಂಬ ಕ್ರಿಯಾಪದದಿಂದ 'ಕುಣಿಹ' (ಕುಣಿತ ಎಂಬರ್ಥದಲ್ಲಿ), 'ಕಡಿಗೆಡಹು' ಎಂಬ ಕ್ರಿಯಾಪದವನ್ನೆ ನಾಮಪದವನ್ನಾಗಿ ಉಪಯೋಗಿಸಿ 'ಕಡಿಗೆಡಹಿನಲಿ' ಎಂಬ ಸಪ್ತಮಿ ರೂಪ, 'ಕಣ್ದೆರೆ' ಎಂಬ ಕ್ರಿಯಾಪದದಿಂದ 'ಕಣ್ದೆರೆವೆ', ಅದೇ ರೀತಿಯಾಗಿ 'ಕಲುಹೆ' 'ಹಳಹಳಿಕೆ' ಎಂಬ ನಾಮಪದ ಗಳನ್ನೂ ನೋಡಬಹುದು. 'ತರಿ' ಎಂಬ ಕ್ರಿಯಾಪದದಿಂದ 'ತರಿಹಿ' (ತರಿಯುವವ, ಕತ್ತರಿಸುವವ ಎಂಬ ನಾಮರೂಪ; 'ಎದೆದಲ್ಲಣಿಸು' ಎಂಬ ಕ್ರಿಯಾಪದದಿಂದ 'ಎದೆದಲ್ಲಣರು' ಎಂಬ ನಾಮರೂಪ; 'ಮಹಾಹಿತುಂಡಿಕರು' ಎಂದರೆ 'ಹೆಬ್ಬಾವನ್ನು ತುಂಡು ಮಾಡಿದವರು' ಎಂಬ ನಾಮರೂಪವು ಮೋಜಿನದಾಗಿದೆ. ಅದೇ ರೀತಿ 'ತಿನ್ನು' ಎಂಬ ಕ್ರಿಯಾಪದದ ನಾಮರೂಪ 'ತೀನಿ' ಎಂದೂ ಕವಿ ರೂಪಿಸಿಕೊಂಡಿದ್ದಾನೆ. ಇಂತಹ ಶಬ್ದರೂಪಾಂತರಗಳು ಕುಮಾರವ್ಯಾಸನಿಗೇ ವಿಶಿಷ್ಟವಾಗಿವೆ.

ಸುಲಭವಾಗಿ ಅರ್ಥವಾಗದಂತಹ ಈ ಕೆಲವೊಂದು ವಿಚಿತ್ರ ಪದಗಳನ್ನು ನೋಡಬಹುದು. 'ವದಸ್ಥನರು' (ಇಟ್ಟಕಾಲನ್ನು ತೆಗೆಯದಂತಹರು ?), 'ಟಿಬ್ಬರಿಸು' (ಹರಡು), 'ತಪ್ಪರ' (ಟ್ರೊಂಕದ ಪಟ್ಟಿ ?), 'ಠವಣೆ' (ಸ್ಥಾಪನೆ ?), 'ಚೊಕ್ಕೆಯ' (ಜಟ್ಟಿಯ ಕೌಶಲ ?) 'ರೊಪ್ಪು' (ಬಿಲ್ಲಿನ ತುದಿ –ಕೊಪ್ಪು ?), 'ಡಿಳ್ಳಿಸೆ' (ಚಿಂತೆ ?) 'ಚಾಹಿ' (ಚಾಪುರ ಬೀಸುವವ ?), 'ಗಂಗಸೆ' (?) 'ಖರ್ವಡ' (ನದಿಯ ಬಳಿಯ ಗ್ರಾಮ ?— ಪುರ, ನಗರ, ಖರ್ವಡ, ಮಡಂಬ, ಪೇಟ, ಗ್ರಾಮ ಹೀಗೆ ದೊಡ್ಡ ಪಟ್ಟಣದಿಂದ ಹಳ್ಳಿಯ ವರೆಗಿನ ಊರುಗಳು), 'ಛಡಾಳಿಸು' (ಮಿಂಚಿನಂತೆ ಏರಿಬರು ?) 'ದಾರಡಿ' (ದರೋಡೆ ?— ಹುಸಿ, ಕಳವು, ದಳದುಳ, ಬಂದಿ, ಡಾವರ ಇತ್ಯಾದಿ). 'ಖಡ್ಡಿಗರು' (ಬೇಡರು ?), 'ಧೊಕಾರಿಸು' (ಸೊಕ್ಕಿಗೇಳು ?), 'ದೆಕ್ಕಾಳಿತನ' (ಆರ್ಭಟಿ ?)

ಕುಮಾರವ್ಯಾಸನು ಕೌರವ ಪಾಂಡವರ ಆಟಪಾಟಿಗಳ ವರ್ಣನೆಯಲ್ಲಿ ಬಳಸುವ ಹಲವಾರು ಆಟಗಳ ಹೆಸರುಗಳು ಸಮಕಾಲೀನ ಆಟಪಾಟಗಳ ಚಿತ್ರಣವೇ ಆಗಿದೆ. ಈ ಕೆಳಗಿನ ಪದ್ಯವನ್ನು ನೋಡಬಹುದು :

'ಆಳಿನೇರಿಕೆ ಹಿಡಿಗವಡೆ ಗುರಿ
ಯೆಹಾಳು ಚಂಡಿನ ಹೊಣಕೆ ಚಿಣಕೋ
ಲಾಳು ಗುತ್ತಿನ ದಂಡೆಯಿನೆ ನಾನಾ ವಿನೋದದಲಿ।
ಗುಡುಗು ಗುತ್ತಿನ ಚೆಂಡು, ಗುಮ್ಮನೆ
ಬಡಿವ ಕತ್ತಲೆ ಗುದ್ದು, ಗೆಂಬದ
ಗತಣೆ, ಕಣ್ಮುಚ್ಚಸಗವರಿ ಹರಿಹಲಗೆ ನಿಡುಗವಣೆ ।
ಕೆಡೆಹು ಕುಟ್ಟಿಗನಾದಿಯೊದೆವ
ಗಡ ವಿನೋದದಲಾಡಿದರು ಪಂ
ಗಡದಲೈವರು ನೂರ್ವರಿತ್ತಂಡವೊಂದಾಗಿ ॥

ಇದೇ ರೀತಿಯಾಗಿ 'ದ್ರೌಪದೀ ಸ್ವಯಂವರದ ಕಾಲಕ್ಕೆ ಬ್ರಾಹ್ಮಣರು ನೆನೆಸಿ ಕೊಳ್ಳುವ ವಿವಿಧ ತಿನಿಸುಗಳ ವರ್ಣನೆ ಕುಮಾರವ್ಯಾಸನಿಗೇ ವಿಶಿಷ್ಟವಾಗಿದೆ : 'ಶೋಧಿಸಿದ ತೊನ್ನಿಬೆಲ್ಲವಿಕ್ಕಿದ ಹೊರಿಗೆ, ಪರಡಿಯ ಶಾವಿಗೆ, ಪರಿಪರಿಯ ಪಾಯಸ, ಪುಲ್ಲಿಗೆ, ತತ್ಸವಿಯ ಮಂಡಿಗೆ, ನವಘೃತಸೂಪದಂಶಕ' ಮೊದಲಾದವು. ಇವುಗಳಲ್ಲಿ ಹಲವಾರು ತಿನಿಸುಗಳೆ ಇಂದಿಗೂ ಪ್ರಚಲಿತದಲ್ಲಿವೆ.

ಕುಮಾರವ್ಯಾಸನು ಹಲವಾರು ಪರಂಪರಾಗತವಾದ ನಾಣ್ಣುಡಿ ಜಾಣ್ನುಡಿಗಳನ್ನು ಬಳಸುವದರೊಂದಿಗೆ ತನ್ನವೆ ಆದ ಅನೇಕ ಜಾಣ್ನುಡಿ, ಪಡೆನುಡಿಗಳನ್ನು ರಚಿಸುತ್ತಾನೆ. 'ನವೆದರು ನಾನಾಛಂದದಾಪತ್ತಿನಲಿ' ಎಂಬಲ್ಲಿ 'ನಾನಾಛಂದದ' ಎಂಬ ಪ್ರಯೋಗವು ನಮ್ಮಲ್ಲಿ ಇನ್ನೂ ರೂಢಿಯಲ್ಲಿದೆ. 'ಕೌರವನ ಬುದ್ಧಿ ವಿಟಾಳಿಸಿತೆ' ಎಂಬ ಮಾತಿನಲ್ಲಿ 'ವಿಟಾಳಿಸು' ಎಂಬ ರೂಪ ಪ್ರಾಕೃತ– ಮರಾಠಿಯ ಪ್ರಯೋಗವಾಗಿದೆ. ವಿಟಾಳಿಸುವದು ಎಂದರೆ ಸ್ತ್ರೀ ಬಹಿಷ್ಕೃಯಾಗುವದು ಎಂದರ್ಥ. 'ಕೌರವನ ಬುದ್ಧಿ ವಿಟಾಳಿಸಿತೆ' ಎಂಬ ನುಡಿಯ ಕಿಡಿಯಲ್ಲಿರುವ ವಿಡಂಬನಾ ಸಾಮರ್ಥ್ಯವನ್ನು ಅದರ ಪ್ರತಿಮಾ ಸ್ವರೂಪವನ್ನು ಊಹಿಸಿಯೆ ತಿಳಿದುಕೊಳ್ಳಬೇಕು. 'ಕರಣಿಕನ ಹಗೆಗೂಂಡವಂಗೆ ಐಶ್ವರ್ಯ ಹಾನಿ' ಎಂಬ ನಾಣ್ಣುಡಿ ಬಹುತರವಾಗಿ ನಾರಣಪ್ಪಗೌಡನ

ಅನುಭವದ ಮೂಸೆಯಿಂದಲೆ ಹೊರಬಂದುದಾಗಿರಬೇಕು. ಇದೇ ರೀತಿಯಾಗಿ "ನಾಲುವರ ನಡುವಣ ಹಾವು ಸಾಯದು" ಎಂಬ ಗಾದೆಗೆ ವಿವಿಧ ಅರ್ಥ ಗಳನ್ನು ಹಚ್ಚುವದು ಸಾಧ್ಯವಿದೆ. ಇದೊಂದು ಅನುಭವದ ಆಳದಿಂದ ಎದ್ದು ಬಂದ ನುಡಿಮುತ್ತು. ಇದರಂತೆಯೆ "ನೀರು ಹೊರಗಿಕ್ಕುವದು ಮೂರೇ ಬಾರಿ". ನೀರಿನಲ್ಲಿ ಮುಳಗಿದವನನ್ನು ಅದು ಮೂರು ಸಲ ಮೇಲಕ್ಕೆ ಎತ್ತು ತ್ತದೆ. ನಾಲ್ಕನೆಯ ಸಲಕ್ಕೆ ತಳ ಕಾಣಿಸುತ್ತದೆ —ಎಂಬ ನಿಸರ್ಗ ನೀತಿಯ ಪಾಠ ಅಡಕವಾಗಿದೆ. ಇದರಂತೆ ಇನ್ನೂ ಹಲವಾರು ಲೋಕಗಾದೆಗಳು ಕುಮಾರವ್ಯಾಸನ ಕಾವ್ಯದಲ್ಲಿ ಎರಚಾಡಿ ಹೋಗಿವೆ. 'ತಗರೆರಡಖಿತಿಗೊಳಿಸಿ ಬಲುಗಾಳಿಗವ ನೋಡುವರು', 'ಹುಟ್ಟಿದವರಿಗೆ ಸಾವು ಹಣೆಯಲಿ ಕಟ್ಟಿಹುದು', "ಕೌರವ ಬಾಳಲರಿಯದೆ ಕೆಟ್ಟನು" (ಎಂತಹ ಮಾರ್ಮಿಕವಾದ ಲೋಕೋಪ-ದೇಶದ ನುಡಿ!), 'ಇರುಳು ಹಗಲಿನ ಬೀಡ', 'ಹಲರು ನಡೆದುದೆ ಮಾರ್ಗ', 'ಆರಿಗಾವುದೊ ದೇಶ, ಆ ಸಂಸ್ಕಾರವವರಿಗೆ ಬಿಡದು', 'ಆಳುತನಕಾಭರಣವೆ ಮಾತಾಳಿತನ ?', 'ಬತ್ತಿದ ಕೆರೆಗೆ ಬಲೆಯೇಕೆ ?', 'ಪಿತ್ಪಾರ್ಧಿಕನು ಲೋಕ ತಿರು ಗುವುದೆಂಬ ತೆರನಂತೆ', 'ಕುರುಡಗೆ ಕನ್ನಡಿಯೇಕೆ, ಬಧಿರಗೆ ಶುದ್ಧ ಸಾಳಗವೇಕೆ?'; "ನೆರಳು ಜಲದಲಿ ನಡುಗಲಿನಮಂಡಲಕೆ ಕಂಪನವೆ ?", "ಮಕ್ಕಳು ತಾಯಿಗಾಗದೆ ಕೆಟ್ಟರೆಂಬುದ ಕಾಣಲಾಯ್ತು", "ತಮದಲಿ ಬೆಳಕ ಬಂಧಿಸಿ ದಂತಾಯ್ತು", "ಹೋದ ಮಾರಿಯ ಕರೆದು ಮನೆಯೊಳಗಾದರಿಸಿದವರುಂಟೆ?" (ಹೊರಗೆ ಹೋಗುವ ದೈವವನ್ನು ಮನೆಯೊಳಗೆ ಕರೆದಂತೆ ಎಂಬ ನಾಣ್ಣುಡಿ ಇನ್ನೂ ರೂಢಿಯಲ್ಲಿದೆ.), "ಒವರವಾದೊಡೆ ಹರನವದನಕೆ ಬೆವರ ತಹೆನು" (ಮುಖದ ಮೇಲೆ ನೀರಿಳಿಸುವೆನು ಎಂಬ ನಾಣ್ಣುಡಿ ರೂಢವಾಗಿದೆ).

'ಉಚಿತ ಶೈಲಿ, ಹೃದಯಂಗಮವಾದ ಭಾಷೆ, ಮನೋಹರ್ಷಕರಗ ಳಾದ ರಸಭಾವಗಳು, ಭಾವಿಕವಾದ ಪದಸಂಘಟನೆ ಮುಂತಾದ ಕಾವ್ಯ ಸಾಮಗ್ರಿಗಳಿಗೆ ಈ ಕಾವ್ಯವೆ (ಗದುಗಿನ ಭಾರತ) ಕೋಶಾಗಾರವೆಂದು ಹೇಳು ವುದು ಅತಿಶಯೋಕ್ತಿ ಅಲ್ಲ' ಎಂದು ಶ್ರೀ ಕುಕ್ಕೇ ಸುಬ್ರಹ್ಮಣ್ಯಶಾಸ್ತ್ರಿಗಳು 'ಕುಮಾರವ್ಯಾಸ ಪ್ರಶಸ್ತಿ' ಯಲ್ಲಿ (ಪುಟ-೩೦೯) ಸಯುಕ್ತಿಕವಾಗಿ ನುಡಿದಿ ದ್ದಾರೆ.

ಭಾಷಾಶೈಲಿಯ ವಿಷಯವಾಗಿ ಪರಿಶೀಲಿಸಲಾಯಿತು. ರಸಭಾವಗಳ ದೃಷ್ಟಿಯಿಂದ ವಿಚಾರಿಸಿದರೆ ಇಲ್ಲಿ ಮುಖ್ಯವಾಗಿರುವುದು ಭಕ್ತಿರಸ. ಅದಕ್ಕೆ ಅಧೀನವಾಗಿ ವೀರ, ಹಾಸ್ಯ ಕರುಣೆಗಳು ಒಳಸೂಸಿವೆ. ಭೀಷ್ಮರ ವೀರ ನಿಲುವಿನ ಹಿಂದೆ ಭಕ್ತಿಯ ನಿಲುವು, ಭೀಷ್ಮರು ವೀರಭಕ್ತಿಯ ಮೂರ್ತಿ ಯಾಗಿದ್ದಾರೆ. ಅಭಿಮನ್ಯುವಿನ ವೀರದ ಹಿಂದೆ ಕರುಣೆ ಉಕ್ಕಿದೆ. ಭೀಮನ ವೀರದ ಹಿಂದೆ ಹಾಸ್ಯಚಿಮ್ಮಿದ. ಈ ಕಾವ್ಯದಲ್ಲಿ ಶೃಂಗಾರವು ಪವಿತ್ರ 'ವಿರಹಿಗಳ ಶೃಂಗಾರ'ವೆನಿಸಿದೆ.

ತಾನು ಶೂಕರರೂಪನೆಂದು ಭಾವಿಸಿ ಭಾಗವತಧರ್ಮವನ್ನು ತನ್ನ ಕಾವ್ಯದಲ್ಲಿ ವಿವರಿಸಲೆಂದು ಉದ್ದೇಶಿಸಿದ ಕವಿ ಕುಮಾರವ್ಯಾಸನಿಗೆ ಶ್ರೀ ಕೃಷ್ಣನೆ ಕಥಾನಾಯಕನಾಗಿದ್ದಾನೆ, ಈ ಮಹಾಭಾರತದ ಮಹಾನಾಟಕದ ಸೂತ್ರ ಧಾರನೆ ಆತ. ಉಳಿದ ಪಾತ್ರಗಳು ಆತನ ಯಂತ್ರಾರೂಢ ಪಾಪೆಗಳು. ಪಾಪೆಗಳಿಗೆ ಶರಣಾಗತಿಯೊಂದೇ ಸಾಧನ. ಇದು ಕುವಿಾರವ್ಯಾಸನ ಭಾಗವತ ಧರ್ಮದ ನಿಲುವು. ತದ್ಭಕ್ತಿರಸಕ್ಕೆ ತಕ್ಕಶೈಲಿ.

ಪಾರ್ಥನಿಂದ ಕರ್ಣನವರೆಗೆ, ದುರ್ಯೋಧನನವರೆಗೆ ಎಲ್ಲರೂ ಶ್ರೀ ಕೃಷ್ಣನ ಭಕ್ತರೇ. ಪಾರ್ಥನು ಪರಮಭಕ್ತನಾಗಿ ಶ್ರೀಕೃಷ್ಣನಿಂದ ಶ್ರೇಯನ್ನೂ, ವಿಜಯಶ್ರೀಯನ್ನೂ, ಮೋಕ್ಷಶ್ರೀಯನ್ನೂ ಪಡೆದರೆ ಕೌರವನು ಕೃಷ್ಣನ ವೈರಿಯಾಗಿ ಕಾದಾಡುತ್ತಾನೆ. ಏಕೆಂದರೆ ವೈರದಿಂದ ವಹಿಲಕೈವಲ್ಯ ವನ್ನು ಆತನಿಗೆ ಸಂಪಾದಿಸಬೇಕಾಗಿದೆ. ಆತ ಹೇಳುತ್ತಾನೆ.

ಮಣಿದು ಬದುಕುವನಲ್ಲ ಹಗೆಯಲಿ
ಸೆಣಸಿ ಬಿಡುವವನಲ್ಲ ದಿಟ ಧಾ
ರುಣಿಯ ಸಿರಿಗಳುಪುವವನಲ್ಲಳುಕಿಲ್ಲ ಕಾಯದಲಿ ।
ರಣಮಹೋತ್ಸವವೆಮ್ಮ ಮತ ಕೈ
ದಣಿಯೆ ಹೊಯ್ದಾಡುವೆನು ಕೃಷ್ಣನ
ಕೃಣಕಿದಲ್ಲದೆ ವಹಿಲದಲಿ ಕೈವಲ್ಯವಿಲ್ಲೆಂದ ॥

ಕರ್ಣನು ಮಾತ್ರ ಸ್ವಾಮಿಭಕ್ತಿ, ಸ್ವಾಮಿಕಾರ್ಯಗಳಿಂದಲೆ ಕೈವಲ್ಯವನ್ನು ಪಡೆಯುತ್ತಾನೆ. ವಿದುರ, ದ್ರೌಪದಿ ಇವರಂತೂ ಭಕ್ತಿಯ ಒಂದೊಂದು ಮಾದರಿ. 'ಕರುಣೆ ನೀ ಕಾರುಣ್ಯ ಪಾತ್ರದ ತರಳೆ ತಾ ದೀನಾರ್ತೆ ದುಃಖೋತ್ಕರಣ-ನೀ' ಎಂದು ಆರ್ತ ಭಕ್ತಿಯಿಂದ ಆಕೆ ಆಲ್ಪರಿದರೆ ವಿದುರನು ನಾರಾಯಣನ ಪದದರ್ಶನದಿಂದ ಹರ್ಷಾದರಣ್ಯದಲ್ಲಿ ಹೊಲಬುದಪ್ಪುತ್ತಾನೆ. ದ್ರೌಪದಿ ಪರಮಭಕ್ತೆಯಾದಂತೆ ವೀರ ಮಹಿಳೆಯೂ ಆಗಿದ್ದಾಳೆ. 'ಮಹಾಭಾರತದಲ್ಲಿ ಯಾವುದಾದರೂ ಒಂದು ಗಂಡು ಪಾತ್ರವಿದ್ದರೆ ಅದು ದ್ರೌಪದಿ' ಎಂಬ ಮಾತನ್ನು ಎ. ಆರ್. ಕೃಷ್ಣಶಾಸ್ತ್ರಿಗಳು ಒಂದೆಡೆ ಸ್ವಾರಸ್ಯವಾಗಿ ನೆನೆದಿದ್ದಾರೆ. ಶ್ರೀಕೃಷ್ಣನು ಭಂಟ. 'ಒಲಿದಂತೆ ಹೊಗಳಿದೊಡೆ ಎಂಟು ಮಡಿ ಮೆಚ್ಚವೆವ್ವ' ಎನ್ನುತ್ತಾನೆ. ಭಕ್ತರಿಗೆ ಒಲಿಯುವ ಕೃಷ್ಣನು ಕಾಮಿನಿಯಾದ ದ್ರೌಪದಿಗೆ ಕರಗುತ್ತಾನೆ. ಶ್ರೀಕೃಷ್ಣನಿಂದ ಭೀಷ್ಮನು ಚಕ್ರವನ್ನು ಹಿಡಿಸುತ್ತಾನಷ್ಟೆ. ತಾನು ಚಕ್ರವನ್ನು ಹಿಡಿಯುವುದಿಲ್ಲ ಎಂದು ವಚನ ತೊಟ್ಟಿದ್ದರೂ ಭಗವಂತನು ಭೀಷ್ಮನಿಗೆ ಕನಲಿ ಕ್ಷಣಹೊತ್ತು ತನ್ನ ಯೋಗೇಶ್ವರತ್ವವನ್ನೂ ಮರೆಯುತ್ತಾನೆ. 'ಕೆಂಡವಾಗಲಿ ಲೋಕ' ಎಂದು ಕೈಯಲ್ಲಿ ಚಕ್ರ ಹಿಡಿದು ಧುಮ್ಮಿಕ್ಕಿದಾಗ ಭೀಷ್ಮನು ಹರಿಚರಣದಲ್ಲಿ ಶರವ ಚಾಚಿ ತಾನೂ ಕೃಷ್ಣನ ಡಿಂಗರಿಗ, ದೇವರಿಗಿಂತ ಡಿಂಗರಿಗರೇ ಮಿಗಿಲು ಎಂಬುದನ್ನು ನೆನಪು ಮಾಡಿಕೊಡುತ್ತಾನೆ. ಚಾಪವನ್ನೂ, ಶರವನ್ನೂ ಅವನಿಗೆ ಬಿಸುಟು ಮೈಯಿಕ್ಕಿದ ಭೀಷ್ಮನನ್ನು ನೋಡಿ ಹರಿಯು ನಚ್ಚಿದಾಳಿನ ಬನ್ನಹಕೆ ಮೆಚ್ಚಿ ನಾಚಿ ಚಕ್ರವ ಮುಚ್ಚಿದನಂತೆ. ಏಕೆಂದರೆ ಭಕ್ತನ ಕೂದಲು ಹರಿಯ್ರದಂತೆ ನೋಡಿಕೊಳ್ಳುವ ಹೊಣೆಯೂ ಭಗವಂತನದೇ ಆಗಿದೆ. ಭಕ್ತಿಯ ಪರಿಪರಿಯ ನಿರೂಪಣೆಯಲ್ಲಿ ಕುಮಾರವ್ಯಾಸನದು ಎತ್ತಿದ ಕೈ. ಈ ಭಕ್ತಕವಿಗೆ ಮಹಾಭಾರತವು ಕೃಷ್ಣ ಕಥೆ. 'ಇಲ್ಲಿನೋಳ್ಪುದು ಪದುಮನಾಭನ ಮಹಿಮೆಯನು' ಎನ್ನುತ್ತಾನೆ. ಕೀಚಕನ ಹಗರಣದಲ್ಲಿ ಶೃಂಗಾರ ರಸದ ಸನ್ನಿವೇಶವನ್ನು ನಿರ್ಮಿಸಿ ಕೀಚಕನ ನಾಯಿತನವನ್ನೂ, ದ್ರೌಪದಿಯ ಪಾತಿವ್ರತ್ಯ ಮಹಿಮೆಯನ್ನೂ, ಭೀಮನ ವೀರಾವೇಶವನ್ನೂ ರೋಮಾಂಚಕಾರಿಯಾಗಿ ಚಿತ್ರಿಸಿದ್ದಾನೆ.

'ದೇವರಿಂದ ನೀವು ಬಗೆವರಿ ದೇವತನವೆಮ್ಮೊಳು ಲವವಿಲ್ಲ' ಎಂಬುದು ಶ್ರೀಕೃಷ್ಣನ ಲೀಲಾಮಾನುಷ ಅವತಾರದ ನಾಟಕದ ನುಡಿ. ದೇವತ್ವದ ರಹಸ್ಯವನ್ನು ಮರೆಮಾಚಲೆತ್ನಿಸಿದರೂ ಆತನ ಮಹಿಮೆಯನ್ನು ಬಲ್ಲ ಭಕ್ತರಿಗೆ "ನೀವು ದೇವ ಮಾತ್ರವೆ ? ದೇವರ ದೇವರು" ಎಂಬ ಪ್ರತಿಕ್ರಿಯೆಯನ್ನು ಮೂಡಿಸುವಾಗ ಶ್ರೀಕೃಷ್ಣನ ಮಹಿಮೆಗೆ ಮತ್ತಷ್ಟು ಬಣ್ಣ ಬರುತ್ತದೆ. ಮಾನವ ನಾಟಕವನ್ನಾಡಿ ಶ್ರೀಕೃಷ್ಣನು ಮಹಾಭಾರತದಲ್ಲಿ ತನ್ನ ಅವತಾರದ ಉದ್ದೇಶವನ್ನು ಪೂರೈಸುತ್ತಾನೆ. ಅದೆಂದರೆ ಸಾಧುಗಳ ಪರಿತ್ರಾಣ, ದುಷ್ಕರ ವಿನಾಶ. ಅದಕ್ಕೂ ಹೆಚ್ಚಾಗಿ, ಮಿಗಿಲಾದ ಭಕ್ತರಾದ ಪಂಚ ಪಾಂಡವರನ್ನು ತನ್ನ ಪಂಚಪ್ರಾಣವೆಂದು ಬಗೆದು ಅವರನ್ನು ಪರಿಪಾಲಿಸಿ ಕೌರವ ಕುಲವನ್ನು ಬೇರು ಸಹಿತ ನಿರ್ಮೂಲ ಮಾಡುವುದೆ ಆತನ ಅವತಾರ ಕಾರ್ಯವಾಗಿದೆ. 'ಒಲಿದವರನುಜ್ಜೀವಿಸುವ ಬಗೆ ಬಲುಹು ಮುರಮಥನಂಗೆ'. ಅಂತೆಯೆ 'ಇದು ಮುರಾರಿಯ ಲೀಲೆಗೋಸುಗ ಉದಯಿಸಿದ ನೆಲ' ಎಂಬ ದೃಢವಾದ ನಂಬುಗೆ ಕವಿಗಿದೆ.

'ಅರಸುಗಳಿಗಿದು ವೀರ' ಎಂಬ ಮಾತು ಯುದ್ಧಪಂಚಕದಲ್ಲಂತೂ ಸಾಲು ಸಾಲಿಗೆ ನಮ್ಮ ನಿದರ್ಶನಕ್ಕೆ ಬರುತ್ತದೆ. ಭೀಮನ ಪರಾಕ್ರಮದ ಹಿಂದೆ ಒಂದಿಷ್ಟು ಒರಟುತನವಿದ್ದರೆ ಅಭಿಮನ್ಯುವಿನ ಪರಾಕ್ರಮದ ಹಿಂದೆ ಕೌತುಕವಿದೆ ಸಂಧಿಗಾಗಿ ಹೊರಟ ಶ್ರೀಕೃಷ್ಣನಿಗೆ ಭೀಮನು ಹೇಳುವ ಮಾತು ಇದು :

ನಡೆದು ಸಂಧಿಯು ಮಾಡಿ ಮುರರಿಪು
ಕೊಡಿಸು ಸಾಕ್ಕೈದೂರನಿವರಿಗೆ
ತಡೆಯದಾನೆರಡೂರಕೊಂಬೆನು ಕೌರವೇಂದ್ರನಲಿ !

'ಊರು' ಶಬ್ದದ ಮೇಲಿನ ಶ್ಲೇಷದಿಂದ ಭೀಮನು ತನ್ನ ಪೌರುಷ ಪರಾಕ್ರಮವನ್ನು ಮೆರೆಯುತ್ತಾನೆ ಹಸ್ತಿನಾವತಿಯಿಂದ ಬಂದ ಸಂಜಯನ ಮಾತಿಂದ ದುರ್ಯೋಧನನ ಯೋಗಕ್ಷೇಮವನ್ನು ವಿಚಾರಿಸುತ್ತ,

ತೊಡೆಗಳಿಗೆ ಸುಕ್ಷೇಮವೆ ನಿ
ನ್ನೊಡೆಯನವನೊಡಹುಟ್ಟಿದನ ಬೈ
ಜಡಿದುದೆ ಪಾಲಿಸಿದಡನಿಬರಿಗಹುದು ರಕ್ತಜಲ ।

ಹಿಡಿಂಬ ರಾಕ್ಷಸನನ್ನು ಲೀಲಾ ಮಾತ್ರವಾಗಿ ಸಂಹರಿಸುವ ಸನ್ನಿವೇಶದಲ್ಲಿ 'ಒರಲುಬೇಡವೊ ಕುನ್ನಿ, ಮೆಲ್ಲನೆ ತರುಬಿ ಕಾದುವುದು. ಎಲವೊ, ಮೈ ಮರೆದು ಒರಗಿದವರೇಳ್ವರು ಕಣ ಸತ್ತಂತೆ ಸಾರು' ಎಂದು ಚೇಷ್ಟೆ ಮಾಡುತ್ತಲೆ ಹಿಡಿಂಬನನ್ನು ಯಮಪುರಿಗಟ್ಟುತ್ತಾನೆ.

ಅಭಿಮನ್ಯು ಕೂಡ ತನ್ನ ಪರಾಕ್ರಮದ ಆತ್ಮವಿಶ್ವಾಸವನ್ನು ನಗೆಯ ಮಾತಿನಿಂದ ತಿವಿದು ಹೇಳುತ್ತಾನೆ. ಕೌರವರಾಯನು 'ಮಗುವು ನೀ ಕೆಡ ಬೇಡ ಹೋಗೆನಲು'—

ಮಗುವು ತಾನಹೆ್ತನ್ನ ಬಾಣಕೆ
ಮಗುವುತನ ಬೇರಿಲ್ಲ ನೋಡಿಂ
ದಗಲದಲಿ ಕೂರಂಬ ಸುರಿದನು ಪಾರ್ಥನಂದನನು ।

ವೀರ, ಹಾಸ್ಯ, ಕರುಣೆಗಳಲ್ಲಿ ಕುಮಾರವ್ಯಾಸನು ಅಪ್ರತಿಮನೆನಿಸಿ ದ್ದಾನೆ. ಭೀಷ್ಮ, ಕರ್ಣ, ಕೌರವರ ಕೊನೆಯನ್ನು ಕೇಳಿಸುವಾಗಲೂ ಕವಿ ಉಲುಹುಗೆಡದ ಕಂಠ ಪತ್ರದಿಂದಲೆ ತನ್ನ ಕಣ್ಣೀರು ಮಿಡಿದು ಬರೆದಿರಬೇಕು ಎನಿಸುತ್ತದೆ. ಇದು ಕರ್ಣಾವಸಾನದ ವರ್ಣನೆ. ಪ್ರಕೃತಿಯೂ ಮಾನವೀಯ ಕರುಣೆಯನ್ನು ತೋರುತ್ತಿದೆ :

ದ್ಯುಮಣಿ ಕರ್ಣದ್ಯುಮಣಿ ಸಹಿತ
ಸ್ತಮಿಸೆ ಕಮಲಿನಿ ಕೌರವನ ಮುಖ
ಕಮಲ ಬಾಡಿತು ತಿಮಿರ ಹೆಚ್ಚಿತು ಶೋಕತಮದೊಡನೆ ।
ಅಮಳ ಚಕ್ರಾಂಗಕ್ಕೆ ಭೂಪೋ
ತ್ತಮನ ವಿಜಯಾಂಗನೆಗೆ ಅಗಲಿಕೆ
ಸಮನಿಸಿತು ಕೇಳಯ್ಯ ಜನಮೇಜಯ ಮಹಿಪಾಲ ॥

ದುರ್ಯೋಧನನು ತೊಡೆ ಮುರಿದುಕೊಂಡು ಹೊನಲಿಡುವ ಮಾಂಸ ರಕುತದ ಧಾರೆಗೆ ಖಗ, ಜಂಬುಕೌಘವು ಮುತ್ತುತ್ತಿರಲು ಭೀಮನ ಗದೆಯ ಹೊಯ್ಲಿಗೆ ಉದುರಿ ಬಿದ್ದ ಕಿರೀಟದ ಮಣಿಗಳನ್ನೆ ಕಲ್ಲುಮಾಡಿ ಅವನ್ನು ಹೊಡೆದೋಡಿಸುತ್ತಿರುವಾಗ ಕೃಪ, ಗುರುತನುಜ ಕೃತವರ್ಮಾದಿಗಳು ರಾಯನವಸಾನವನ್ನು ನೋಡಲಾಗದೆ ದೊಪ್ಪನೆ ನೆಲಕೆ ಕೆಡೆಯಲು ಅವರನ್ನು ಸಂತೈಸಿ ಹೃದಯ ಸ್ಪರ್ಶಿಯಾಗಿ ನುಡಿಯುತ್ತಾನೆ :

ಹದುಳಿಸಿರೆ ಸಾಕೇಳಿ ಸಾಕಿ
ನ್ನಿದರಲಿನ್ನೇನಹುದು ದೈವದ
ಕದಡು ಮನಗಾಣಿಸಿತು ನಮಗೀ ಕಂಟಕ ವ್ಯಥೆಯ ।
ಉದಯದಲಿ ನಾವೀಶರೀರವ
ನೊದೆದು ಹಾಯ್ವೆವು ನೀವು ನಿಜ
ಮಾರ್ಗದಲಿ ಬಿಜ್ಜಯಂಗೈವುದೆಂದನು ನಗುತ ಕುರುರಾಯ ॥

ಉದಯದ ಹೊತ್ತು ಈ ಶರೀರವನ್ನೊದೆದು ಹೋಗಿರುತ್ತೇವೆ ಎಂಬ ನುಡಿಗಳನ್ನು ಕೇಳಿದಾಗ ಕರುಣಾಜನಕ ಪರಿಸ್ಥಿತಿಯಲ್ಲೂ ಕೌರವನ ವೀರ ನುಡಿ, ಆತನ ಧೈರ್ಯದ ನಗೆ ನಮ್ಮ ಕರುಳನ್ನು ತಟ್ಟಿ ಕಸಿವಿಸಿಗೊಳಿಸುತ್ತವೆ.

ಕವಿಯು ವೀರರಸದ ನಿರೂಪಣೆಯಲ್ಲಿ ಅಂಚಿಗೇ ಕರುಣರಸದ ಒರತೆ ಸಮವಾಹಿಯಾಗಿರುವುದು ಒಂದು ವೈಶಿಷ್ಟ್ಯ. ಇದರ ಜೊತೆಗೆ ವ್ಯಂಗ್ಯ ಹಾಸ್ಯವೂ ಬೆರೆತು ದೈವದ ಅಣಕವನ್ನು ಇನ್ನಷ್ಟು ಹೆಚ್ಚಿಸುತ್ತದೆ.

ವರ್ಣನೆಗಳಲ್ಲಿ ಕುಮಾರವ್ಯಾಸನದೇ ಒಂದು ವಾಸ್ತವ ವಿಶಿಷ್ಟ ಶೈಲಿ. ಅದು ಪ್ರತಿಮಾತ್ಮಕವಾಗಿರಲಿ, ರೂಪಕಾತ್ಮಕವಾಗಿರಲಿ ಅವನ ವರ್ಣನೆಗಳ ಒಂದು ರೀತಿಯೆ ರೀತಿ.

'ದಿವಾಕರನು ಹೆಡತಲೆಗೆ ಹಗರಿಕ್ಕಿದನು ಚಂದ್ರಮನ'. ಅಮವಾಸ್ಯೆಯಾದ ಒಂದೆರಡು ದಿನಗಳ ನಂತರದ ಸಂಜೆಯ ವರ್ಣನೆ ಇದು. ದಿವಾಕರನು ಚಂದ್ರಮನನ್ನು ಪಗಡಿಯನ್ನಾಗಿ ಮಾಡಿಕೊಂಡು ತನ್ನ ಹಿಂದಲೆಗೆ ಧರಿಸಿ

ಕೊಂಡು ಇನ್ನೇನು ಪಡುವಣದಾಚೆಗೆ ಹೊರಹೊಂಟನೆಂಬ ಚಿತ್ರಣ ಎಷ್ಟು ವಾಸ್ತವಪೂರ್ಣ ! ಅಮವಾಸ್ಯೆಯಾದ ಒಂದೆರಡು ದಿನಗಳಲ್ಲಿ ಸೂರ್ಯನು ಮುಳುಗುವ ಹೊತ್ತಿಗೇ ಚಂದ್ರನು ಸ್ವಲ್ಪ ಹೊತ್ತು ಕಾಣಿಸಿಕೊಂಡು ಕಣ್ಮರೆಯಾಗುತ್ತಾನೆ. ಆ ಕೋರೆಯ ಚಂದ್ರ ಸೂರ್ಯನ ತಲೆಯ ಹಿಂದಿನ ಪಗಡಿಯಂತೆ ಕಾಣುತ್ತಾನೆಂಬ ಕಲ್ಪನೆ ಸುಂದರವಾಗಿರುವಷ್ಟೇ ವಾಸ್ತವಪೂರ್ಣವೂ ಆಗಿದೆ. ಇನ್ನೊಂದು ಸಂದರ್ಭದಲ್ಲಿ ಇನ್ನೊಂದು ಬಗೆಯ ಸೂರ್ಯಾಸ್ತದ ವಾಸ್ತವಿಕ ಚಿತ್ರವನ್ನು ಬರೆಯುತ್ತಾನೆ. 'ರವಿಯ ರಶ್ಮಿಯ ಗೂಳೆಯವು ತೆಗೆದಿತ್ತು ಪಡುವಣ ಕಡಲೊಳಿನಳಿಳಿದ'. ಒಂದೆಡೆಗಿದ್ದ ರವಿಯ ಕಿರಣಗಳು ಅಸ್ತಮಯ ಸಮಯಕ್ಕೆ ಚಲ್ಲಾಪಿಲ್ಲಿಯಾಗಿ ಗುಳೆಯೆತ್ತಿದಂತೆ ತೋರಿದುವಂತೆ ಸೂರ್ಯೋದಯದ ವರ್ಣನೆಯೂ ಇದೇ ಬಗೆಯ ವಾಸ್ತವಮಯ. ಬೆಳಗಿನಲ್ಲಿ ಉದಯಾಚಲದ ಚಾಪಡಿಗೆ ದಿನಪನೈತಂದನೆಂದು ಹೇಳುತ್ತಾನೆ.

ರಾತ್ರಿಯ ಹೊತ್ತು ಯುದ್ಧ ನಿಂತಾಗ ಉಭಯ ಸೇನೆಗಳಲ್ಲಿ ನಡೆಯುವ ಗಡಿಬಿಡಿಯ ಹಿನ್ನೆಲೆಯನ್ನು ಇದ್ದಕ್ಕಿದ್ದಂತೆ ವರ್ಣಿಸುತ್ತಾನೆ. ಮಾರನೆಯ ದಿನದ ಬೆಳಗಿನ ಕಾಳಗದ ಸಿದ್ಧತೆಯನ್ನು ವಿವರಿಸುತ್ತಾನೆ. ಇಲ್ಲಿ ಹಯ, ಗಜಗಳ ಗಾಯಗಳನ್ನು ತಿದ್ದುವದು, ಹರಿದ ರೆಂಚೆಗಳನ್ನು ಸರಿಪಡಿಸುವದು, ಆಯುಧಗಳನ್ನು ಮಸೆಯುವದು, ಗಾಯಾಳುಗಳನ್ನು ಉಪಚರಿಸುವದು ಇತ್ಯಾದಿ ಸೈನಿಕ ವ್ಯಾಪಾರವನ್ನು ಮನೋಜ್ಞವಾಗಿ ಬಣ್ಣಿಸಿದ್ದಾನೆ: ಯುದ್ಧ ನಡೆಯುತ್ತಿರುವಂತೆಯೆ ಎಲ್ಲ ಸರಬರಾಜೂ ಅಲ್ಲಿಂದಲ್ಲಿಯೆ ನಡೆಯುತ್ತಿತ್ತು. 'ಬಾಣದ ಬಂಡಿ ಸಾವಿರವ ಬರಹೇಳು' ಎಂದು ಒಂದೆಡೆಗೆ ಆದೇಶ ನೀಡುತ್ತಿದ್ದರೆ, ಇನ್ನೊಂದೆಡೆಗೆ 'ಹಿಳಿದ ಲೋಹದ ಸೀಸಕಂಗಳ ಬಲಿಸು'ವ 'ಹೋಳಾದ ಕವಚವ ಹೊಲಿಸು'ವ, 'ಖಡ್ಗಕ್ಕೆ ಕುಂತವ ಕಳೆದು ಕಾವನು ತೋಡಿಸು'ವ ಕಾರ್ಯ ಸೇನೆಯೆರಡರಲಿ ನಡೆಯುತ್ತಲೆ ಇತ್ತು. ಇದಲ್ಲದೆ ಸೈನಿಕ ವೈದ್ಯರು, ಪಶು ವೈದ್ಯರು ಗಾಯಹೊಂದಿದ ಸೈನಿಕರನ್ನು, ಕರಿ ತುರಗಗಳನ್ನು ಶುಶ್ರೂಷೆ ಮಾಡುತ್ತಿದ್ದರು. 'ಹರಿವ ಕೊರಳನು ಬಿಗಿವ, ಉರದೊಳು ಮುರಿದ ಬಾಣವ ಕೀಳ್ವ, ಹೊಟ್ಟೆಯ ನಿರುಗರುಳನು ಒಳಗಿಕ್ಕಿ ಹೊಲಿಸುವ, ಮದ್ದುಗಳ ನಿಡಿವ', ದೃಶ್ಯ ಎಸೆಯುತ್ತಿದ್ದಿತು. ಕುಮಾರವ್ಯಾಸನಿಗೆ ಆಯುರ್ವೇದ

ಜ್ಞಾನವೂ ಸಾಕಷ್ಟಿದ್ದಿರಬೇಕು. ಗಾಯಗಳಿಗೆ ಹಳತುಪ್ಪ ಸೂಕರ ತುಪ್ಪ ಗಳನ್ನು ತೊಡೆದು ಉಪಚರಿಸುತ್ತಿದ್ದರಂತೆ. ಗಾಯದಿಂದ ನಂಜೇರದಂತೆ ನಶ್ಯವನ್ನು ಬಳೆಯುತ್ತಿದ್ದರು.

ಕುಮಾರವ್ಯಾಸನು ಆಸ್ಥಾನಕವಿಯಾಗಿರಲಿಲ್ಲ. ಆತ ಜಾನಪದರ ಜನತಾ ಕವಿ ಎನಿಸಿದ್ದ. ಹೀಗೆಂದು ಅವನಲ್ಲಿ ಶಾಸ್ತ್ರೀಯ ಪಾಂಡಿತ್ಯ ಇದ್ದಿರ ಲಿಲ್ಲವೆನ್ನಲಿಕ್ಕಾಗದು. ವ್ಯಾಸಭಾರತ ಪುರಾಣಗಳೊಂದಿಗೆ ಭಾಸ, ಭಟ್ಟ-ನಾರಾಯಣ, ಕನ್ನಡ ಆದಿಕವಿ ಪಂಪ ಇವರೆ ಮೊದಲಾದ ಮಹಾಕವಿಗಳ ಅಭ್ಯಾಸವನ್ನು ಚೆನ್ನಾಗಿ ಮಾಡಿಕೊಂಡಿದ್ದಿರಬೇಕು. ಶ್ರೀ ಎಸ್. ವಿ. ರಂಗಣ್ಣ ನವರು ಅಭಿಪ್ರಾಯಪಟ್ಟಿರುವಂತೆ 'ಪಾಂಡಿತ್ಯ ಅವನಲ್ಲಿ ಬೇಕಾದಷ್ಟಿದ್ದರೂ ಪಂಡಿತ ಕವಿಯ ಬಗೆಯಲ್ಲಿ ಕಾವ್ಯ ರಚನೆ ಮಾಡುವ ಹಂಬಲ ಅವನಿಂದ ದೂರವಾಗಿತ್ತು'.

ಸ್ತ್ರೀ ವರ್ಣನೆ, ಶೃಂಗಾರ ವರ್ಣನೆಗಳಲ್ಲಿ ಕುಮಾರವ್ಯಾಸನ ತೂಕ, ಹಿಡಿತ, ಕವಿಸಮಯಕ್ಕೆ ದಾಸ್ಯವಲ್ಲದ ಸ್ವತಂತ್ರ ವಿಚಾರಗಳು ('ಚಾರುಕವಿತೆಯು ಬಳಕೆಯಿದಲ್ಲ' ಎನ್ನುತ್ತಾನೆ) ಆದ್ವಿತೀಯವೆನಿಸುವಂತೆ ಕುಂತೀತನಯರು ಧಾರುಣೀಸುರರ ವೇಷದಲ್ಲಿ ಪಾಂಚಾಲ ನಗರಕ್ಕೆ ಹೋಗುವಾಗ ದಾರಿಯಲ್ಲಿ ಕಂಡ ಮುಗ್ಧ ಖಚರಿಯರ ವರ್ಣನೆ ಮೋಹಕವಾಗಿದೆ :

ಲಲಿತತನುಕಾಂತಿಗಳ ಮೊಗೆದರು
ತಿಳಿಗೊಳನ ಜಲವೆಂದು ಕಂಗಳು
ಹೊಳೆಯೆ ಮರಿಮೀನೆಂದು ಹೆಕ್ಕಳಿಸಿದರು ಹಿಡಿಹಿನಲಿ ।
ಅಲರಿದಂಬುಜವೆಂದು ವದನಕೆ
ನಿಲುಕಿ ತುಂಬಿಗಳೆಂದು ಕುರುಳಿಂ
ಗಳುಕಿ ಕೈಗಳ ತೆರೆದೆರತಿ ಮುಗುದೆಯರು ಖಚರಿಯರು ॥

ಎಂದರೆ ತಮ್ಮ ಮೈಕಾಂತಿಯ ಅರಿವು ತಮಗೇ ಇರಲ್ಲಿಲ್ಲ, ಆ ಮುಗುದೆಯರಿಗೆ ಅದು ತಿಳಿಗೊಳನ ಜಲವೆಂದು ಭ್ರಮಿಸಿದರು. ತಂತಮ್ಮ ಓರಗೆಯ ಹೆಂಗಳೆ

ಯರ ಕಂಗಳು ಹೊಳೆಯಲಾಗಿ ಅವು ಮರಿ ಮೀನಗಳೆಂದು ಹಿಡಿಯ ಹೋದರು. ಮುಖಗಳು ಕಮಲಗಳೆಂದೂ, ಕುರುಳುಗಳು ತುಂಬಿಗಳೆಂದೂ ಭ್ರಮಿಸಿ ಕೈಮಾಡ ಹೋದರು. ಇತ್ತ ದ್ರೌಪದಿಯ ವರ್ಣನಾಲಂಕಾರವಂತೂ ಕುಮಾರವ್ಯಾಸನ ವಿಶಿಷ್ಟ ವರ್ಣನೆಯಾಗಿದೆ. ಬೆರಳಿನಿಂದ ಉಂಗುರಕ್ಕೆ ಚೆಲ್ವಿಕೆ ಬಂತಂತೆ. ಚರಣಯುಗ ಸೌಂದರ್ಯದಿಂದ ನೂಪುರಗಳಿಗೆ ಶೋಭೆ ಉಂಟಾಯಿತಂತೆ. ಹೀಗಿದೆ ಪದ್ಯ :

ಬೆರಳ ಚೆಲ್ವಿಕೆಯಿಂದ ಮುದ್ರಿಕೆ
ಮೆರೆಯೆ ಪಾಡಗನೇವುರಂಗಳ:
ಚರಣಯುಗ ಸೌಂರ್ಯದಲಿ ಬಿಣ್ಮೊಲೆಯ ಢಾಳಿನಲಿ।
ಕೊರಳ ಮೌಕ್ತಿನಹಾರ ಸುಮನೋ
ಹರದ ಕದಪುಗಳಿಂದ ಕರ್ಣಾ
ಭರಣವೊಪ್ಪಿದುವೇನನೆಂಬೆನು ರೂಪನಂಗನೆಯ ॥

ಕುಮಾರವ್ಯಾಸನ ಉಪಮೆ, ರೂಪಕ, ಪ್ರತಿಮಾ ವಿಧಾನಗಳು ಕೂಡ ಪಾಂಡಿತ್ಯ ಪ್ರಚಾರವಾಗಿರದೆ ಜಾನಪದ ದೇಸಿಗೆ ಉದಾಹರಣೆಯಾಗಿವೆ. 'ಸುರಗೆಯನು ಬಿಸುಟು · ಬೆರೆಯನಂಗೀಕರಿಸಿದಪೊಲಾಯ್ತು', 'ತಮದಲಿ ಬೆಳಕ ಬಂಧಿಸಿದಂತಾಯ್ತು', ಸುರಗಿರಿಯ ತುದಿಯಿಂದ ಮರಿಮಿಂಚುಗಳ ಮುಗಿಲಿಳಿವಂತೆ..... ರಥವನಿಳಿದನು ಧ್ವಾನವಾರಾತಿ' 'ಒಳಗುರಿವ ಹಸಿ ಮರನ ತುದಿಯಲಿ ಜಲವುಗುವವೊಲು', 'ಎಳೆ ಲತೆಯ ಕುಡಿ ಮಾಳಗೆಗೆ ತೊಲೆಯೆ', 'ಸಿಡಿಲಪೊಟ್ಟಣ ಕಟ್ಟಿ ಶಾಖವ ಕೊಡುವರೆ', 'ಸೀಳಬಹುದೆ ಸೀಸದುಳಿಯಲಿ ಶೈಲವನು' 'ಕೋಡಗದ ಮೊಗಸಿರಿಗೆ ಕಾವಲಿಯೋಡು ಕನ್ನಡಿಯಾಯ್ತು' ಎಂಬವೇ ಮೊದಲಾದ ಉಪಮೆ, ರೂಪಕಗಳು ದೈನಂದಿನ ಜೀವನದ ಮತ್ತು ನಿಸರ್ಗದ ವಸ್ತುಗಳಾಗಿವೆ. ಇದರಲ್ಲಿ ಎಷ್ಟೊ ರೂಪಕಗಳು ಗಾದೆಯ ಮಾತಿನಂತೆ ಸಾರವತ್ತಾಗಿವೆ, 'ಎನ್ನ ಪುಣ್ಯವು ಗಾಳಿಗೊಡ್ಡಿದ ಸೊಡರಲಾ', 'ನಾಲಗೆಯ ಸಾಲವನೀಗ ಕೈಯಲಿ ತಿದ್ದುವಡೆ', ಕಾಣೆಯ ಬೀಯಗದಲ್ಲಿ ಬಡವಹುದೆ ಕನಕಾಚಲ ?', 'ಸೂರ್ಯನಾರೋಗಣೆಗೆ

ಸೊಡರೆ ?', 'ಒಡಲಬಳಿನೆಳಲಿಂಗೆಗತಿ', 'ಭರಾವತಕಿ ಕಬ್ಬಿನಲಿರಿದಡೆ ಅಂಜಿಕೆಯುಂಟಿ?', ಆಳುತನಕಾಭರಣವೆ ಮಾತಾಳಿತನ'?, 'ಇರುಳು ಹಗಲಿನ ಬೀಜ' 'ಮೊನೆಸರಳು ಮಾನ್ಯರನರಿವವೆ ?', 'ಕಾಳಕೂಟದ ತೊರೆಗಳಲಿ ಜಲಕೇಳಿಯೆ', 'ದಳ್ಳುರಿಯ ಪ್ರತಿಮೆಯನಪ್ಪುವರೆ?' ಎಂಬ ನುಡಿಗಳನ್ನು ನೋಡಬಹುದಾಗಿದೆ. 'ಪುಣ್ಯಸ್ತ್ರೋವಂ ತರುಗಳಿಗೆ ಈ ಮಹಾಭಾರತ ಕಥಾಮೃತ ರಾಮಣೀಯಕ ಫಲವು' ಎಂದು ಕಾವ್ಯವನ್ನು ಮೊದಲು ಮಾಡುತ್ತಲೆ ಇವನ ರೂಪಕ ಸರಣಿಗೆ ಮೊದಲಾಗುತ್ತದೆ. ಒಂದೊಂದು ರೂಪಕದಿಂದ ಒಂದೊಂದು ಸಲ ಸಮಕಾಲೀನ ಜಾನಪದ ಸಂಸ್ಕೃತಿಯ ಒಂದೊಂದು ಮುಖವನ್ನೆ ಪ್ರಕಟಿಸುತ್ತಾನೆ. ಅಭಿಮನ್ಯುವಿನ ಧನುವನ್ನು ಕರ್ಣನು ಹಿಂದಿನಿಂದ ಬಂದು ಮುಕ್ಕಡಿಯಾಗಿ ಕತ್ತರಿಸುತ್ತಾನೆ. ಅಭಿಮನ್ಯುವಿಗೆ ಬಹಳೆ ಹಾಕಬೇಕೆಂದಿದ್ದ ವಿಜಯವಧು ದೂರ ಸರಿಯುತ್ತಾಳೆ. ಇದನ್ನು ಕವಿ ಹೀಗೆ ಬಣ್ಣಿಸುತ್ತಾನೆ.

ಉರುವ ಜಯವಧು ಒಕ್ಕತನದಲಿ
ಮುರಿದ ಕಡ್ಡಿಯಿದೆನಲು ಕರದಿಂ
ಮುರಿದು ಬಿದ್ದುದು ಚಾಪವಿಂದ್ರಕುಮಾರನಂದನನ।

ಈ ಭಾಗದ ಹಳ್ಳಿಗಳಲ್ಲಿ ಮದುವೆಯ ಮಾರುಗಡೆಗೆ ಕಡ್ಡಿ ಮುರಿಯುವದೆಂಬ ಉಕ್ತಿ ಪ್ರಚಲಿತವಿದೆ. ವಿಜಯವಧುವಿಗೂ ಅಭಿಮನ್ಯುವಿಗೂ ಮದುವೆ ನಿಶ್ಚಯವಾಗಿತ್ತು. ಆದರೆ ನಡುವೆ ಕರ್ಣನು ಬಂದು ಕಡ್ಡಿ ಮುರಿದನೆನುವಂತೆ ಅಭಿಮನ್ಯುವಿನ ಧನುವನ್ನು ಕತ್ತರಿಸಿ ಚೆಲ್ಲಿದನೆಂದು ಕವಿ ಹೇಳುತ್ತಾನೆ. ಇದೇ ಬಗೆಯಲ್ಲಾಗಿ 'ವಿರೋಧಿ ಲಲನೆಯರ ಶ್ರುತಿ ಪತ್ರ ಸೀಳಲಿ ಸಾಲ ಹಿಂಗಿತಲಾ'. ಎಂದರೆ ವೈರಿಗಳ ಹೆಂಡಿರು ತಮ್ಮ ಓಲೆಗಳನ್ನು ಕಳಚಿಕೊಂಡು ವಿಧವೆಯರಾದರು ಎಂಬರ್ಥದಲ್ಲಿ ಕವಿ ಈ ಪ್ರತಿಮೆಯನ್ನು ಬಳಸುತ್ತಾನೆ. ಸಾಲ ಮುಟ್ಟಿಸಿದ ಮೇಲೆ ಕಾಗದಪತ್ರವನ್ನು ಹರಿದು ಹಾಕುತ್ತಾರೆ. ಅದೇ ರೀತಿ ವೈರಿಯ ಸೇಡಿನ ಸಾಲ ಮುಟ್ಟಿದ ಮೇಲೆ ವೈರಿಪತ್ನಿಯರು ತಮ್ಮ ಶ್ರುತಿಪತ್ರಗಳನ್ನು ಎಂದರೆ ಓಲೆಗಳನ್ನು ಸೀಳಿದರಂತೆ. ಎಂತಹ ವ್ಯಾವಹಾ

ರಿಕ ಹೋಲಿಕೆ! ಕುಮಾರವ್ಯಾಸನ ಉಪಮೆಗಳ ಔಚಿತ್ಯವೂ ಅಷ್ಟೇ ಶ್ಲಾಘನೀಯ. ಈತನ ಉಪಮೆಗಳು ಪ್ರತಿಭೆ ಎಂಬ ಗಿಡದಲ್ಲಿ ಅರಳಿದ ಹೂಗಳಾದರೆ ಡಾ. ಎಸ್. ವಿ. ರಂಗಣ್ಣನವರ ಶಬ್ದಗಳಲ್ಲಿಯೆ ಹೇಳಬಹುದಾದರೆ 'ರೂಪಕವೇ ನಾರಣಪ್ಪನ ಅಂಗಾಂಗ, ಪಂಚವಾಯು, ಸಪ್ತಧಾತು, ಪಂಚಕೋಶಕರಣ ವರ್ಗ, ಅಂರಾತ್ಮ ರೂಪಕವೇ ನಾರಣಪ್ಪ ನಾರಣಪ್ಪನೇ ರೂಪಕ'.

ಕುಮಾರವ್ಯಾಸನ ಕಾವ್ಯ ಅರಸುಗಳಿಗೆ ವೀರ, ದ್ವಿಜರಿಗೆ ಪರಮ ವೇದದ ಸಾರ, ಯೋಗೀಶ್ವರರಿಗೆ ತತ್ತ್ವವಿಚಾರ, ಮಂತ್ರಿ ಜನಕೆ ಬುದ್ಧಿಗುಣ, ವಿರಹಿಗಳ ಶೃಂಗಾರ, ವಿದ್ಯಾಪರಿಣತರ ಅಂಕಾರ ಮತ್ತು ಕಾವ್ಯಕೆ ಗುರು. ಇಷ್ಟೆಲ್ಲ ಇದ್ದರೂ 'ಇದ ವಿಚಾರಿಸೆ ಬರಿಯ ತೊಳಸಿಯ ಉದಕದಂತೆ' ಎಂದಿದ್ದಾನೆ. ತುಳಸಿಯ ಉದಕವೆಂದರೆ ತೀರ್ಥ. ತೀರ್ಥದ ಮೌಲ್ಯ H_2O ಮಾತ್ರ ಅಲ್ಲ, ಭಾವುಕರಿಗೇ ಗೊತ್ತು ಅದರ ಬೆಲೆ.

ಕುಮಾರವ್ಯಾಸನ ಕಾವ್ಯವನ್ನು ಒಮ್ಮೆ ಓದಿದರೆ ಸಾಕು, ದ್ವಾಪರವು ಕಣ್ಮುಂದೆ ಕುಣಿಯುತ್ತದೆ. ಕುಮಾರವ್ಯಾಸನ ಶೈಲಿಯೆಂದರೆ ಏನು ಹೇಳಬೇಕು, ಏನು ಬಿಡಬೇಕು? ಆತನ ಪ್ರಜ್ಞೆ, ಪ್ರತಿಭೆಗಳು ಎಂಬಿನೆಳೆಗಳ ಹಾಸುಹೊಕ್ಕಾಗಿವೆ. ಆತನ ಶೈಲಿಯ ನೆಯ್ಗೆಯಲ್ಲಿ ಕುಮಾರವ್ಯಾಸನ ಕಾವ್ಯದ ಮೇರುಶೈಲಕ್ಕೆ ಶಿಖರದಂತಿದೆ ಆತನ ಶೈಲಿ.

———

ಕುಮಾರವ್ಯಾಸನ ಹಾಸ್ಯ ಪ್ರಜ್ಞೆ

ಹಳಗನ್ನಡ ಕವಿಗಳಲ್ಲಿ ನಮ್ಮ ಗದುಗಿನ ನಾರಣಪ್ಪನಿಗಿರುವ ಹಾಸ್ಯಪ್ರಜ್ಞೆ ಬಹುಶ: ಇನ್ಯಾವ ಕವಿಗೂ ಇಲ್ಲವೆಂದರೆ ತಪ್ಪಾಗಲಿಕ್ಕಿಲ್ಲ. ಕುಮಾರ ವ್ಯಾಸನ ಹಾಸ್ಯ ವೈವಿಧ್ಯತೆಯೆ ಹಾಗಿದೆ. ಭಗವಂತ-ಭಕ್ತರಲ್ಲಿಯ ಮಧುರ ಹಾಸ್ಯವನ್ನು ಚಿತ್ರಿಸಬೇಕು ಕುಮಾರವ್ಯಾಸನೆ. ಮಾನವ ಗಂಧರ್ವರ ನಡವಿನ ವ್ಯಂಗ್ಯ ವಿನೋದಗಳನ್ನು ವಿವರಿಸ ಬೇಕು ಆತನೆ. ದಾನವ-ಮಾನವರ ಜೀವ್ಪೆತಮಾಷೆ ಗಳನ್ನು ಚಿತ್ರಿಸಬೇಕು ಆತನೆಯೆ. ಬ್ರಾಹ್ಮಣರ ಮಾತುಗಳನ್ನಾಗಲಿ, ಪರಾಕ್ರಮಿ ಹೇಡಿಗಳ ನಡುವಿನ ಪ್ರಹಸನವನ್ನು ವರ್ಣಿಸಬೇಕು ಆತನೊಬ್ಬನೆಯೆ ಸರಿ. ಅವನ ವಿನೋದಪರಿಭಾಷೆ ಆತನದೇ ಆಗಿದೆ.

ಪರಾಕ್ರಮದಲ್ಲಿ ಮಹಾಭಾರತದ ತುಂಬ ಒಬ್ಬ ಭೀಮನನ್ನು ಬಿಟ್ಟರೆ ಇನ್ನಾರು ? ಒಮ್ಮೊಮ್ಮೆ ಆತನ ಶೌರ್ಯವನ್ನು ಚಿತ್ರಿಸ ಹೋಗಿ ನಾರಣಪ್ಪ ಭೀಮನನ್ನು ಒಂದಿಷ್ಟು ಗಾಂಪನಂತೆ ಒಡ್ಡಾಗಿ ಒರಟಾಗಿ ಕೂಡ ಚಿತ್ರಿಸಿ ದ್ದಾನೆ. ಇಂತಹ ವಿಕ್ರಮ ಭೀಮನು ಮಾರುತಿಯ ಸಂಧಿಸಿದರೆ ಹೇಗಿರು ತ್ತದೆ ? ಸರಿ ಅಂತಹ ಒಂದು ಸುಸಂಧಿ ದೊರೆಕೊಂಡಾಗ ಕವಿ ಅವರ ಪೂರ್ಣ ಪ್ರಯೋಜನ ಪಡೆದು ತನ್ನ ಹಾಸ್ಯ ಪ್ರಜ್ಞೆಯ ವಿಸ್ತಾರವನ್ನು ವ್ಯಕ್ತ ಪಡಿಸುತ್ತಾನೆ. ಅರಣ್ಯ ಪರ್ವದಲ್ಲಿ ದ್ರೌಪದಿಗೆ ಸೌಗಂಧಿಕಾ ಪುಷ್ಪದತ್ತ ಮನಸ್ಸು ಓಡುತ್ತದೆ. ಅವರ ಕಂಪಿಗೆ ಕಂಪಿತಳಾಗುತ್ತಾಳೆ; ಭೀಮನನ್ನು ಅನುನಯದಿಂದ ಬೇಡಿಕೊಳ್ಳುತ್ತಾಳೆ ತನಗೆ ಅವು ಬೇಕು ಎಂದ, ಸರಿ, ಗಂಧಮಾದನ ಪರ್ವತದಿಂದ ಸೌಗಂಧಿಕೆಯನ್ನು ಹುಡುಕಿ ಕೊಂಡು ಹೋಗಿ ದ್ದಾನೆ ಭೀಮ. ದಾರಿಯಲ್ಲಿ ಒಂದು ಮಂಗವು ಅಡ್ಡ ಮಲಗಿದೆ. ದಾರಿ ಬಿಡಲು ಅರಹುತ್ತಾನೆ ಭೀಮಸೇನ. ಪಾಪ ಆ ಮುದಿ ವಾನರವು ಸೋತು ಮಲಗಿರುತ್ತದೆ. ನೀನೆ ಅತ್ತ ಬಾಲವನ್ನು ಸರಿಸಿ ಹೋಗು ಎಂದುಬಿನ್ನವಿ ಸುತ್ತದೆ. ಭೀಮನು ಸೋತಿರುತ್ತಾನೆ. ಆ ವಾನರನ ಬಾಲವನ್ನು ಸರಿಸು ವುದಿರಲಿ ಬಾಲದ ಒಂದು ರೋಮವನ್ನು ಕೂಡ ಅಲುಗಾಡಿಸಲಾಗಲಿಲ್ಲ

ಈ ಭೀಮನಿಗೆ. ಯಾರಿರಬೇಕು ಈ ವಾನರ ? ಓಹೋ ! ತ್ರೇತಾಯುಗದ ರಘುವರನ 'ಓಲೆಯಕಾರ' ಈ ತನ್ನ ಆಟವನ್ನು ನಿಲ್ಲಿಸಿ ಸ್ವಸ್ಥನಾಗಿದ್ದಾನೆ ಮಾರುತಿ ರಾಯ! ಮುಂದೆ ಅವರೀರ್ವರಲ್ಲಿ ಪರಸ್ಪರ ಪರಿಚಯದ ಮಾತು ನಡೆದು ಇಬ್ಬರೂ ಬಂಧುಗಳೆಂದು ಮನಗಂಡು ಮರ್ಯಾದಿಸಿದ ಮೇಲೆ ಭೀಮನು ನಾಳೆ ಕೌರವರೊಂದಿಗೆ ಯುದ್ಧವಾದರೆ ತನ್ನ ತಮ್ಮ ಅರ್ಜುನನ ಧ್ವಜದ ಮೇಲೆ ಕುಳಿತು ಅವನನ್ನು ರಕ್ಷಿಸಬೇಕೆಂದು ಬೇಡಿಕೊಳ್ಳುತ್ತಾನೆ. 'ತಥಾಸ್ತು' ಎನ್ನುತ್ತಾನೆ, ರಾಮಾಯಣಕಾಲದ ರಾಮದೂತ. ಈ ಅಪರೂಪದ ಸಣ್ಣ ಸನ್ನಿವೇಶದಲ್ಲಿ ಕುಮಾರವ್ಯಾಸನು ಸಾಧ್ಯ ವಿದ್ದಷ್ಟು ತನ್ನ ಹಾಸ್ಯ ಪ್ರಜ್ಞೆಯನ್ನು ಹರಿ ಬಿಟ್ಟಿದ್ದಾನೆ.

ಉತ್ತರನ ಪಾತ್ರಚಿತ್ರಣ ಕವಿಯ ಹಾಸ್ಯ ಪ್ರಜ್ಞೆಯ ಜೀವಂತ ಪ್ರತೀಕ ವಾಗಿದೆ. ಅಂತಃಪುರದಲ್ಲಿ ತನ್ನ ಬಡಾಯಿ ಕೊಚ್ಚಿಕೊಳ್ಳುವ ಉತ್ತರಕುಮಾರ ಹೇಡಿತನಕ್ಕೆ ಒಂದು ಗಾದೆಯಮಾತಾಗಿದ್ದಾನೆ. ತಮ್ಮ ಗೋವುಗಳನ್ನು ವೈರಿಗಳು ಅಪಹರಿಸಿಕೊಂಡು ಹೋಗಿದ್ದಾರೆ–ಎಂಬ ವಾರ್ತೆಯು ಕವಿ ಮುಟ್ಟಿದ ಕೂಡಲೆ ಅರಮನೆಯಲ್ಲಿ ಕೋಲಾಹಲವೇಳುತ್ತದೆ, ಆಗ ಅರಮನೆ ಯಲ್ಲಿ ಉತ್ತರನ ಹೊರತಾಗಿ ಇನ್ನೊಬ್ಬ ಯುದ್ಧವೀರನಿರಲಿಲ್ಲ. ಮಾಡುವು ದೇನು ? ಯುದ್ಧದ ಹೊಣೆ ಉತ್ತರನ ಮೇಲೆಯೆ ಬೀಳುತ್ತದೆ. ಈ ವೀರಾಧಿವೀರ ಯುದ್ಧ ಭೂಮಿಗೆ ಒಂದೇ ಕಾಲ ಮೇಲೆ ಸಿದ್ಧ. ಆದರೆ ಮಾಡುವುದೇನು ? ತನಗೆ ಯೋಗ್ಯ ಸಾರಥಿ ಇಲ್ಲವಲ್ಲ ! ಹೀಗೆಂದು ಆಲೋಚಿ ಸುವಾಗ ಬೃಹನ್ನಳೆ ಸಾರಥಿಯಾಗಿ ದೊರೆಕೊಳ್ಳುತ್ತಾನೆ. ಆತ ಕಲಿ ಪಾರ್ಥ ನೆಂಬುದು ತಿಳಿಯುವ ಉತ್ತರನು ಆತನೆದುರಿಗೆ ತನ್ನ ಪೌರುಷವನ್ನು ಕೊಚ್ಚಿ ಕೊಳ್ಳುತ್ತಾನೆ. ಕೌರವ ಸೈನ್ಯ-ಸಮೂಹದಲ್ಲಿ ನಾನು ಕಾದಾಡುವುದಾದರೂ ಯಾರೊಂದಿಗೆ ? ಕೆಲವರು ಆಗಲೇ ಗೋರಿಯಲ್ಲಿ ಒಂದು ಕಾಲನ್ನಿಟ್ಟು ಅಂತಕನ ನೆರೆಯೂರಿನವರಾಗಿದ್ದಾರೆ. ಅವರಿಗೆ ಆಗಲೆ ಯಮರಾಜನಿಂದ ಚೀಟಿಬಂದಿದೆ. ಮತ್ತೆ ಕೆಲವರು ಹಾರುವರು. ಅವರನ್ನು ಕೊಲ್ಲುಪಹಾಗಿಲ್ಲ. ಇನ್ನೂ ಕೆಲವರು ಅಧಮ ಕುಲವವರು. ಅಧಮರೊಡನೆ ಉತ್ತಮ ಕುಲದ ಅಭಿಜಾತ ಉತ್ತರಕಮಾರನು ಯುದ್ಧ ಮಾಡಬಹುದೆ ? ಹೀಗೆ ಜಂಬವನು

ಕೊಚ್ಚಿಕೊಂತ ಕುಮಾರನು ಬೃಹನ್ನಳೆಯು ಬಲವಂತಕ್ಕೆ ರಥದಲ್ಲಿ ಕುಕ್ಕರಿಸಿ ರಣಾಂಗಣವನ್ನು ಸಮೀಪಿಸುತ್ತಿದ್ದಂತೆಯೇ ಭಯಭೀತನಾಗಿ, 'ಅಪ್ಪಾ ಸಾರಥಿಯೇ ನನ್ನನ್ನು ಲೋಗರಿಂದ ಕೊಲ್ಲಿಸಬೇಡ. ಬೇಕಾದರೆ ನೀನೆ ಕತಾರಿಯಿಂದ ಕುತ್ತಿ ಕೆಡಹಿಬಿಡು, ಎನ್ನುತ್ತಾನೆ. ಇದಕ್ಕೆ ಬೃಹನ್ನಳೆ ಧೈರ್ಯ ಕೊಡುತ್ತಾನೆ. ಯುದ್ಧದಲ್ಲಿ ಮಡಿದರೆ ಅಪ್ಸರೆಯರು ಓಲೈಸುತ್ತಾರೆ - ಎಂದು ಹೇಳಿದರೆ - 'ನನಗೆ ಅಪ್ಸರೆಯರು ಬೇಡ, ನಮ್ಮ ಅಂತಃಪುರದ ನಾರಿಯರೇ ಸಾಕು' ಎನ್ನುತ್ತಾನೆ. 'ಹೋಗಲಿ ಕ್ಷತ್ರಿಯರು ಯುದ್ಧ ಮಾಡುವುದರಿಂದ ಯಜ್ಞ ಫಲ', ಎಂದು ಹೇಳಿದರೆ, 'ಆ ಯಜ್ಞವನ್ನು ದ್ವಿಜೋತ್ತಮರನ್ನು ಕರೆಯಿಸಿ ನಮ್ಮ ಅರಮನೆಯನಲ್ಲಿಯು ಮಾಡೋಣ' ಎಂದು ಉತ್ತರಿಸುತ್ತಾನೆ ಉತ್ತರ. ಹೀಗೆ ಅಂತಃಪುರದ ವೀರನು ರಣರಂಗ ಸಮ್ಮುಖದಲ್ಲಿ ಹೇಡಿಯಾದರೂ, ಮಾತಿನಲ್ಲಿ ಚಪಲ, ಉತ್ತರಕೊಡುವಲ್ಲಿ ಉದ್ದರಿ ಇಲ್ಲದ ಹುದ್ದರಿ.

ಉತ್ತರ ಕುಮಾರನ ಹುಚ್ಚುಪೌರುಷವು ಒಂದು ಬಗೆಯಾದಾದರೆ ಭೀಮನ ಅತಿ ಬಲವ ಒರಟುತನ ಇನ್ನೊಂದು ಬಗೆಯದು. ಆತ ಮಾರುತಿಯನ್ನು ಸಂಧಿಸಿದಾಗ "ಹನುಮಂತನ ಮುಂದೆ ಹಾರಲೇ ಗುಬ್ಬಿ" ಎನ್ನುವಂತಾಗುತ್ತದೆ. ಕುಂತಿ ಬಾಲಕ ಭೀಮನನ್ನು ತೊಡೆಯ ಮೇಲೆ ಮಲಗಿಸಿಕೊಂಡಾಗ ಆತ ಕೆಳಗೆ ಬಿದ್ದ ಪರಿಣಾಮವಾಗಿ ಶತಶೃಂಗ ಶೈಲದ ಶಿಲೆಯ ಭಾಗ ನಿರ್ನಾಮವಾದುದಂತೆ. ಪಾಂಡವ ಕೌರವರು ವಿವಿಧ ಆಟಪಾಟಗಳಲ್ಲಿ ಕಾಲ ಕಳೆಯುತ್ತಿರುವಾಗ ಭೀಮನ ಉಪಟಳಕ್ಕೆ ಕೌರವರು ಬೇಸತ್ತು ಹೋಗುತ್ತಿದ್ದರು. ಕೌರವರು ಗಿಡಮರಗಳ ಆಟದಲ್ಲಿ ಮರವ ಏರಲೇರಿ ಕುಳಿತಾಗ ಭೀಮನು ಮರವನ್ನು ಹಿಡಿವಲುಗಿದರೆ ಆ ಭರತಕುಲಪಾಲಕರು ತರುಫಲನಿಕರ ಬೀಳುವಂತೆ ನೆಲಕ್ಕೆ ಬಿದ್ದರು, ಶಿರ ಒಡೆದು, ಬೆನ್ನೊಡೆದು, ಮೊಳಕಾಲ್ಮುರಿದು, ಕೈಗಳು ಮುರಿದು ನೆತ್ತರ ಸುರಿಯಲು ಧೃತರಾಷ್ಟ್ರನಿಗೆ ದೂರುಕೊಡುತ್ತಾರೆ, ಕಳೆದ ಹಲ್ಲುಗಳನ್ನು, ಒಡೆದ ಮೊಣಕಾಲುಗಳನ್ನು ದುರ್ಯೋಧನಾದಿಗಳು ತೋರಿಸಿದರೆ ಭೀಮನು ಸುಮ್ಮನಿರುವನೇ? ತಾನೂ ಮುಳುಮೊನೆಗಳಲ್ಲಿ ಗೀರಿ ನೆತ್ತರಗಳೆದು, ಹುಡಿಯಲಿ ಹೊರಳಿ (ಕಣ್ಣಿರಿಲ್ಲದೆ) ಅಳುತ್ತ ಭೀಷ್ಮರಿಗೆ ಧೃತರಾಷ್ಟ್ರ

ರಿಗಿ ತಾನೂ ದೂರುತ್ತಿದ್ದನು.

ಪಾಂಡವರು ಅರಗಿನ ಮನೆಯಿಂದ ಹೊರ ಬಿದ್ದು ಅರಣ್ಯವನ್ನು ಪ್ರವೇಶಿಸುತ್ತಾರೆ. ಅಲ್ಲಿ ಒಂದು ಮರದ ತಣ್ಣೆಳಲಲ್ಲಿ ಕುಂತಿ ಮತ್ತು ತನ್ನ ನಾಲ್ವರುಸೋದರರು ಒರಗಿರಲು ಭೀಮನು ಅವರ ಮೇಲೆ ಪಹರೆ ಮಾಡುತ್ತ ಎಚ್ಚತ್ತಿರುತ್ತಾನೆ. ಆ ಸಮಯಕ್ಕೆ ಹಿಡಿಂಬಾಸುರ ನೊಂದಿಗೆ ಭೀಮನು ಕಾಳಗಗೊಡಬೇಕಾಗುತ್ತದೆ. ರಾಕ್ಷಸನೊಂದಿಗೆ ಕಾಳುಗ ವೆಂದರೆ ಭೀಮು-ನಿಗಿದು ಕ್ರೀಡೆಯಷ್ಟೇ. ಆದರೆ ಯುದ್ಧದ ಸದ್ದು ಗದ್ದಲಗಳಿಂದ ಚಣಿದು ಮಲಗಿದವರು ಎಚ್ಚರಗೊಳ್ಳಲಿಕ್ಕಿಲ್ಲವೆ ? ಮನೆಯ ಮುಂದಿನ ತಿರುಕರಿಗೆ ಹೇಳುವಂತೆ ಹಿಡಿಂಬ ರಕ್ಕಸನಿಗೆ ಭೀಮನು ಹೇಳುತ್ತಾನೆ; 'ಒರಲ ಬೇಡವೋ ಕುನ್ನಿ ಪೆಲ್ಲನೆ ತುರುಬಿಕಾಡುವುದು. ಪೈ ಮರೆತು ಒರಗಿವರು ಏಳ್ವರು. ಆದ್ದರಿಂದ ಸತ್ತಂತೆ ಸಾರು'– ಎನ್ನುತ್ತ ಹಿಡಂಬನನ್ನು ಲೀಲಾ ಮಾತ್ರನಾಗಿ ಕೊಂದು ಹಾಕುತ್ತಾನೆ. ಇದು ದಾನವನೊಂದಿಗೆ ಮಾನವರೂಪಿ ಮಾರುತಿಯ ವಿನೋದ.

ದ್ರೌಪದಿ ಸ್ವಯಂವರ್ತ್ಕಾಲದಲ್ಲಿ ಪಾಂಡವರು ವಿಪ್ರವೇಷದಲ್ಲಿ ಸ್ವಯಂವರ ಕ್ಕೆಂದು ಬಂದಾಗ ಧರ್ಮರಾಯನ ಸೂಚನೆಯ ಮೇರೆಗೆ ಪಾರ್ಥನು ಮತ್ಸ್ಯ ಭೇದನಕ್ಕಾಗಿ ಸಂವರಿಸಿಕೊಳ್ಳುತ್ತಿರುವಾಗ ಅಲ್ಲಿ ನೆರೆದ ಬ್ರಾಹ್ಮಣರು ಪಾರ್ಥ ನಿಗೆ ಚೇಷ್ಟೆ ಮಾಡುತ್ತಾರೆ.....

ಏನು ಸಿದ್ಧಿಯುಪಾಧ್ಯರೆದ್ದಿರಿ
ದೇನು ಧನುವಿಂಗಲ್ಲಲೆತಾ
ನೇನು ಮನದಂಘವಣೆ, ಬಯಸಿದಿರೆ ನಿತಂಬಿನಿಯ ?
ಧನು ತನಗೆ ನೆಗಹಲ್ಕೆ ಕೃಷ್ಣಾ
ಜಿನವೊ, ಸಾಲಗ್ರಾಮ ದೇವರೋ
ವಿಸುತ ತುಳಸಿಯೊ ಕೌಶವೋ ದರ್ಭೆಯೊ ಸಮಿಧೆಗಳ
ಹೊರೆಯೊ ?

ವಿಪ್ರ-ವೇಷದ ಅರ್ಜುನನ್ನು 'ಉಪಾಧ್ಯಾಯರೆ' ಎಂದು ಸಂಭೋದಿಸುತ್ತ 'ಇದೇನು ತಾವು ಎದ್ದದ್ದು ? ಧನುವಿಗಲ್ಲವಷ್ಟೇ ? ನಿಮ್ಮ ಮನೆಪೆ ಏನು ?

ಆ ನಿತಂಬಿನಿಯ ಬಯಕೆ ಅಲ್ಲವಷ್ಟೆ ತಮಗೆ ? ಧನುವನ್ನು ನೆಗಹಲಿಕ್ಕೆ ಅದೇನು ಕೃಷ್ಣಾಜಿನವೆಂದುಕೊಂಡಿರಾ ? ಸಾಲಿಗ್ರಾಮವೆಂದು ಕೊಂಡಿರಾ ಇಲ್ಲವೆ ತುಳಸಿ, ದರ್ಭೆ, ಕುಶ, ಸಮಿಧೆಗಳ ಹೊರೆಯೋ ?' ಎಂದು ಹೀಗೆ ಪಾರ್ಥನು ವಿಪ್ರನೆಂದೇ ಬಗೆದ ಇತರ ಬಾಹ್ಮಣರ ವಿನೋದವು ಹಿತವಾದ ಹಾಸ್ಯಕ್ಕೆ ಮಾದರಿಯಾಗಿದೆ. ಈ ವಿಪ್ರ ಕುಲವು ಹಾಗಾದರೆ ಸ್ವಯಂವರಕ್ಕೆ ಆಗಮಿಸಿದ ಉದ್ದೇಶವೇನು ? ಅವರಿಗೆ ಇರುವಂಥ ಆಕರ್ಷಣೆ ಏನು ಇಲ್ಲಿ ? ಸ್ವಯಂವರ ಘೋಷಣೆಯನ್ನು ಕೇಳಿದ ಆ ವಿಪ್ರರು ನುಡಿಯುತ್ತಾರೆ. "ನಮಗೆ ಈ ಆರವಿಂದವದನೆಯ ತೊಡಕು ಯಾಕೆ ಬೇಕು ? ಬಂದ ದಕ್ಷಿಣೆ, ವಿಪ್ಪ ಭೋಜನದಿಂದ ನಾವು ತುಷ್ಟರು. ನಮ್ಮ ಪರಾಕ್ರಮ ನೋಡ ಬಯಸುವಿರಾ ? ಹಾಗಾದರೆ ಬರಲಿ ಶೋಧಿಸಿದ ತನಿ ಬೆಲ್ಲವಿಕ್ಕಿದ ಹೂರಿಗೆ, ಪರಯ ಶಾವಿಗೆಯು ಪಾಯಸ, ಸವಿಯ ಸಂಡಿಗೆ, ನವಘೃತಪೂಪಶಗಳು". ಇಲ್ಲಿ ಕವಿ ಸಮಕಾಲೀನ ವಿಪ್ರಕುಲದ ವಿಡಂಬನೆಯನ್ನು ಮಾಡಿರುವಂತೆ ತೋರುತ್ತದೆ, ಅಂತಹ ಸಂದರ್ಭ ಬಂದಾಗಲೆಲ್ಲ. ಅವರುಟ್ಟ ಧೋತರ, ಮೈಗೆ ಬಳೆದ ಮಿಟ್ಟಿಯ ಚಂದನ, ತೊಟ್ಟ ಜನಿವಾರ, ಹಿಡಿದ ದರ್ಭೆ, ಇತರ ಆಲಂಕಾರ ಗಳಿಂದ ಮೊದಲಾಗಿ ಅವರು ಬಾಯಿ ಚಪ್ಪರಿಸಿ ತಿನ್ನುವ ಎಣ್ಣೂರಿಗೆ ಲಡ್ಡುಗೆ ಗಳವರೆಗೂ ಈತನ ಹಾಸ್ಯ.

ಅರ್ಜುನನು ಸನ್ಯಾಸಿಯ ವೇಷದಲ್ಲಿ ಸುಭದ್ರೆಯನ್ನು ವರಿಸುವ ಸಂದರ್ಭದಲ್ಲಿಯೂ ಕವಿಯ ವಿನೋದವು ವಿಸ್ತರಿಸಿದೆ. ಬಾಲಕಿಗೆ ಸನ್ಯಾಸಿ ದೇವರ ಮೇಲೆ ಮನಸಾಯ್ತು. ಅವರಿಗೆ ಈಕೆಯ ಮೇಲೆ ನೆಲಸಿತ್ತು ಚಿತ್ತ. ಜಪಸಮಾಧಿಗಳು ಕಣ್ಮರೆಯಾದುವು. ಜಪಮಾಲೆ ಬೆರಳಲಿ ನಡೆಯುತ್ತಿರುವಾಗ ಚಿತ್ತವು ಸುಭದ್ರೆಯಲ್ಲಿ ತೊಡಕುತ್ತಿತ್ತು. ಅಕ್ಷಿಗಳು ಮಾನಿನಿಯನ್ನು ಮುಕ್ಕುಳಿಸುತ್ತಿದ್ದರು.

ವಿರಾಟಪರ್ವದಲ್ಲಿ ಪಾರ್ಥನು ಬೃಹನ್ನಳೆಯಾವ ಸಂದರ್ಭವೂ ವಿನೋದ ದಾಗರವಾಗಿದೆ. ಅದರಲ್ಲಿ ಉತ್ತರ-ಪಾರ್ಥರ ಪ್ರಸಂಗವು ಹೇಗೆ ಹಾಸ್ಯದ ಹೊನಲಾಗಿದೆಯೆಂಬುದನ್ನು ಮೇಲೆ ನೋಡಿದ್ದೇವೆ.

ಯುದ್ಧಪ್ರಪಂಚದಲ್ಲಿ ತಾನು ಮಗುವಾದರೂ ತನ್ನ ಬಾಣಕ್ಕೆ ಮಾತ್ರ ಮಗುತನವಿಲ್ಲ ಎಂಬ ಅಭಿಮನ್ಯುವಿನ ವೀರವಾಣಿ, ಘಟೋತ್ಕಚನ ರಾತ್ರಿಯ ರಣರಂಗ, ತಂತಮ್ಮ ವಾಹನಗಳ ಮೇಲೆ ನಿಬ್ರೆ ಗೈಯುತ್ತಿದ್ದ ವಿರಹಿ ಸೈನಿಕರ ವರ್ಣನೆಯ ಸಂದರ್ಭ ನೋಡಬೇಕು. ವೀರಪಾರ್ಥವ ಆವೇಶಕ್ಕೆ ವೈರಿ ಸೈನಿಕರು ಗೊಂದಲ ಗೆಟ್ಟು ಬುದ್ಧಿಯನ್ನು ಕಳೆದುಕೊಂಡು ಕುದುರೆಯ ಕಡಿವಾಣಗಳನ್ನು ಆನೆಯ ಮೋರೆಗೆ ತೊಡಿಸಿದರಂತೆ. ಕಾಲೊಳಗಿನ ಜೋಡುಗಳನ್ನು ಶಿರದಲ್ಲಿಯೂ, ಶಿರಸ್ತ್ರಾಣವನ್ನು ಚರಣದಲ್ಲಿಯೂ ಧರಿಸಿದರಂತೆ. ರಾವುತರು ಕರಿಗಳನ್ನು, ಯೋಧರು ತುರಗಗಳನ್ನು, ಕಾಲಾಳುಗಳು ರಥಗಳನ್ನು ಅಡರಿದರಂತೆ. ಅಭಿಮನ್ಯುನು ದುಃಶ್ಯಾಸನನ ಬಾಣ ಪ್ರಯೋಗವನ್ನು ಹಾಸ್ಯ ಮಾಡುತ್ತ– 'ಅಂತೂ ನೋಡು ಸಾರಥಿ, ದುಶ್ಯಾಸನನ ಬಾಣ ಗುರಿತಾಗಲಿಲ್ಲ ಇರಲಿ, ಗುರಿಯ ಸಮೀಪಕ್ಕಾದರೂ ಬಾಣ ಬಿತ್ತು' ಎನ್ನುತ್ತಾನೆ.

ಶ್ರೀಕೃಷ್ಣನ ಪಾತ್ರದಲ್ಲಿಯಂತೂ ಉತ್ತಮಮಟ್ಟದ ಸೂಕ್ಷ್ಮ ಹಾಸ್ಯ ಹೆಜ್ಜೆ ಹೆಜ್ಜೆಗೆ ಕಾಣುತ್ತೇವೆ. 'ದೇವರೆಂದೇ ನೀವು ಬಗೆವಿರಿ ದೇವತನವೆ ಮ್ಮೊಳು ಲವವಿಲ್ಲ' ಎಂದು ನುಡಿದಾಗ ನಗೆಬರದೆ ಏನು ! ದೂರ್ವಾಸಾತಿಥ್ಯ ಸಂದರ್ಭದಲ್ಲಿ ಅಕ್ಷಯಪಾತ್ರೆಯು ನಿಷ್ಕ್ರಿಯವಾದಾಗ ದ್ರೌಪದಿ ಶ್ರೀಕೃಷ್ಣನನ್ನು ಪ್ರಾರ್ಥಿಸಿ ಬರಮಾಡಿಕೊಂಡಾಗ ವಿನೋದ ಪ್ರಿಯನಾದ ಶ್ರೀಕೃಷ್ಣ–'ನಾನು ಹಸಿದ್ದೆನೆಂದರೆ ದೇವಿ, ನಾನಾ ದೂರುವುದುಚಿತವೆ ಹೇಳು' ಎಂದು ಪ್ರಶ್ನೆ ಮಾಡುವಾಗಲು ನಗೆಯರಳದೆ ಏನು ? ಲಕ್ಷ ಸಾವಿರ ಮುನಿಜನ ಸಮೇತ ದೂರ್ವಾಸರು ಬಂದಿರುವಾಗ ಶ್ರೀಕೃಷ್ಣ ತನಗೇ ಹಸಿವೆಯೆಂದರೆ ಆ ಮಾನಿನಿ ಮಾಡಬೇಕೇನು ? ಆಯಿತು ಅಕ್ಷಯ ಪಾತ್ರೆಗೆ ಅಂಟಿದ್ದ ಪಾಕಶೇಷವನ್ನು ತಿಂದು 'ಆಽಬ್' ಎಂದು ತೇಗಿದನಂತೆ. ಆದರಿಂದ ದೂರ್ವಾಸರ, ವಲಿರ ಶಿಷ್ಯರ ಹೊಟ್ಟೆಗಳು ತುಂಬಿ ಬಿರಿದು ಹೋಗುತ್ತವೆ.

ಉದ್ಯೋಗಪೂರ್ವದಲ್ಲಿ ದುರ್ಯೋಧನು ರಾಜನೀತಿಜ್ಞನಾಗಿ ಶ್ರೀಕೃಷ್ಣನಿಂದ ಬಲರಾಮ ಯಾದವ ಸೇನೆಗಳ ಸಹಾಯ ಪಡೆದು ಹಿಂಗ್ಗಿ ಹೋದಾಗ ಶ್ರೀಕೃಷ್ಣನು ಪಾರ್ಥನಿಗೆ ತಮಾಷೆ ಮಾಡುತ್ತಾನೆ. 'ಎಂತಹ ಬಿಪ್ಪನೊ

ನೀನು ? ನಿನಗೆ ಮೊದಲನೆಯ ಆಯ್ಕೆಯನ್ನು ಕೊಟ್ಟಾಗ, ಸೈನ್ಯವನ್ನು ಬಿಟ್ಟು ನನ್ನನ್ನು ಆರಿಸಿಕೊಂಡು ಏನು ಮಾಡುವೆ ?' ಎಂದಾಗ ಅರ್ಜುನನು 'ನಮಗೆ ನಿಮ್ಮ ಗರುಡಿಯಲ್ಲಿ ಪರಿಶ್ರಮವುಂಟು'-ಎಂದು ಅಷ್ಟೇ ಹಾಸ್ಯಮಯವಾಗಿ ಉತ್ತರಿಸುತ್ತ, 'ನಾವು ಬಡವರು ಸೇನೆಯನ್ನು ಪೋಷಿಸುವುದು ನಮಗೆ ಹೇಗೆ ಸಾಧ್ಯ?' ಎಂಬ ನುಡಿಗೆ ಒಳಗೊಳಗೇ ಖುಶಿಯಾದ ಪರಮಾತ್ಮನು 'ಒಳ್ಳೆಯದು ಉಂಡಾಡಿಗರಾದ ನಮ್ಮಂಥವರನ್ನು ಸಾಕಿದ ಮೇಲೆ ಪ್ರತಿಯಾಗಿ ನಾವು ಮಾಡುವುದೇನು ? ನೀನೇ ಸೂಚಿಸುವಂತೆ ಬಂಡಿಯಬೋವರಾಗುತ್ತೇವೆ' ಎಂದು ನುಡಿಯುತ್ತಾನೆ. 'ನಾನೇನು ದೇವರೆಂದು ತಿಳಿದೆಯೆ' ? ಎಂದು ಶ್ರೀಕೃಷ್ಣನು ನಗೆಯಾಡಿದರೆ-ಪಾರ್ಥನು-' ಛೆ ಛೆ ನೀವು ದೇವರಲ್ಲ. ದೇವರ ದೇವರು' -ಎಂದು ಸೇರಿಗೆ ಸವ್ವಾ ಸೇರಿನ ಉತ್ತರ ಮುಟ್ಟಿಸುತ್ತಾನೆ. ಇದು ಸಖ್ಯ ಭಾವದ ಮಧುರ ಹಾಸ್ಯ.

ಮುಖ್ಯವಾಗಿ ಪರಮಾತ್ಮನು ಮನುಷ್ಯ ನಾಟಕವನ್ನಾಡುತ್ತಿರುವುದೆ ಕವಿಯು ಸಾತ್ವಿಕ ಹಾಸ್ಯಕ್ಕೆ ಸಾಕಷ್ಟು ಎಡೆಮಾಡಿಕೊಟ್ಟಂತಾಗಿದೆ., ಅದರಲ್ಲಿಯೂ ಕುಮಾರ ವ್ಯಾಸನಂತಹ ಹಾಸ್ಯಪ್ರಜ್ಞೆ ಇದ್ದ ಮೇಲೆ ಕೇಳಬೇಕೆ ?

ಕುಮಾರ ವ್ಯಾಸನಲ್ಲಿ ಕಂಡು ಬರುವ ಹಾಸ್ಯರಸದ ಉನ್ನತಿಕೆ, ವೈವಿಧ್ಯ, ಸುಕುಮಾರತೆಗಳು ಇನ್ನುಳಿವ ಕವಿಗಳಲ್ಲಿ ದೊರಕುವುದು ಅಪರೂಪ.

ಗದ್ಯವಾಚನ ಮತ್ತು ಗಮಕ

'ಗದ್ಯಂ ಹೃದ್ಯಂ, ಎಂದು ಹೇಳಿದ ಹೊಸ ಕಾಲದ ಕೋಗಿಲೆ ಮುದ್ದಣ ಕವಿ ಆ ಹೃದ್ಯವಾದ ಗದ್ಯಪಾಚನ ಪದ್ಧತಿಯನ್ನು ಹೇಳಲಿಲ್ಲ.

ಕನ್ನಡದಲ್ಲಿ ಗದ್ಯಪ್ರಕಾರವು ಹಳಗನ್ನಡ ಕಾವ್ಯದೊಂದಿಗೆ ಹೆಣೆದು ಕೊಂಡು ಬಂದಿದೆ. ಚಂಪೂಕಾವ್ಯಗಳಲ್ಲಿ ಕಥಾವಸ್ತು ನಿರೂಪಣ ಭಾವುಗು ಗದ್ಯದಲ್ಲಿ, ವರ್ಣನಾತ್ಮಕ ಭಾಗವು ಪದ್ಯದ ವಿವಿಧ ಛಂದಗಳಲ್ಲಿ ರಚಿತವಾಗಿದೆ. ವಡ್ಡಾರಾಧನೆಯು (ಕ್ರಿ. ಶ. ಸು ೯೨೫) ಕನ್ನಡ ಸಾಹಿತ್ಯದಲ್ಲಿ ದೊರಕಿರುವ ಮೊದಲನೆಯ ಗದ್ಯಕಥಾ ಸಂಗ್ರಹ. ಇಲ್ಲಿಯ ನೀತಿ, ಆಧ್ಯಾತ್ಮ, ವೈರಾಗ್ಯ, ಜೀವನಮೌಲ್ಯ, ಉದಾತ್ತ ಪಾತ್ರಸೃಷ್ಟಿಗಳ ಮೂಲಕ ನಿರ್ಮಿಸಲ್ಪಡುವ ಆದರ್ಶಗಳನ್ನು ಓದುಗನ ಮೇಲೆ, ಕೇಳುಗರ ಮೇಲೆ ಪ್ರಭಾವಿಯಾಗಿ ಮೂಡಿಸ ಬೇಕಾದರೆ ಒಂದು ವಾಚನ ಪದ್ಧತಿ ಇದ್ದಿರಬೇಕು. ವಡ್ಡಾರಾಧನೆಯ (ಸು. ೫೦ವರ್ಷಗಳ) ನಂತರದ 'ಚಾವುಂಡರಾಯಪುರಾಣ' ವೂ ಗದ್ಯಪೆ. ಸಕಲ ತೀರ್ಥಂಕರರು ಸೇರಿ ಅರವತ್ತುಮೂರುಜನ ಜೈನಶಲಾಕಪುರುಷರನ್ನು ಕುರಿತ ಈ ಬೃಹತ್ ಕೃತಿ ಜೈನರಿಗೆ ಪೂಜ್ಯವಾದ ಪುರಾಣ ಗ್ರಂಥವಷ್ಟೆ ಅಲ್ಲ ತನ್ನ ಸಾಹಿತ್ಯ ಗುಣದಿಂದ ಕಲಾತ್ಮಕ ಶೈಲಿಯಿಂದ ಸಾಮಾನ್ಯ ವಾಚಕನಿಗೂ ರಸೋದಯವೆನಿಸುವಂತಹ ರಚನೆ. 'ವಡ್ಡಾರಾಧನೆ' ಮತ್ತು 'ಚಾವುಂಡರಾಯ ಪುರಾಣ' ಎರಡೂ. ಗದ್ಯ ಗ್ರಂಥಗಳನ್ನು ಒಂದು ಲಯದಲ್ಲಿ, ಪುರಾಣ ಗ್ರಂಥಕ್ಕೆ ತಕ್ಕಂತಹ ಧಾಟಿಯಲ್ಲಿ ವಾಚನ ಮಾಡಲು ಅನುಕೂಲವಾಗಿದೆ. ಪುರಾಣಿಕರು ಗದ್ಯವನ್ನು ಆಯಾ ರಸಭಾವ ಸನ್ನಿವೇಶಗಳಿಗೊಪ್ಪುವಂತೆ ಸರಾಗವಾಗಿ ಶ್ರುತಿಮಧುರವಾಗಿ ನಿರೂಪಿಸುವ ಕ್ರಮವೊಂದಿದೆ.

ತಮಿಳಿನಲ್ಲಿ ರಾಮಾನುಜೀಯ ಗದ್ಯವನ್ನು ವಾಚನ ಮಾಡುವ ಒಂದು ಉದಾತ್ತ ಪರಂಪರೆಯಿದೆ. ಅವರ ಒಂದು ಲಯಕಾರಿಕೆ, ಶೃತಿಹಿತವಾಗಿರತ್ತವೆ. ರಾಗ ರಾಗವಾಗಿ ಅವನ್ನು ವಾಚನ ಮಾಡುವ ಧಾಟಿ ಇಂಪಾಗಿರುತ್ತದೆ ಬಾಣನ ಕಾದಂಬರಿಯನ್ನು ಗದ್ಯಗಮಕದಲ್ಲಿ ಯಮಕಿನಿಂದ ಹೇಳುವವರಿ

ದ್ದಾರೆ. ಕನ್ನಡ ಚಂಪೂ ಕಾವ್ಯಗಳಲ್ಲಿ ಕಂದ, ಸಂಸ್ಕೃತವೃತ್ತಗಳೂ ವಚನಗದ್ಯಪೂ ಮಿಶ್ರಿತವಾಗಿರುತ್ತವೆ. ಸುಜ್ಞ ಗಮಕಿಯಾದವನು ವೃತ್ತ ಪದ್ಯಗಳನ್ನು ಕಂದ ಪದ್ಯಗಳನ್ನೆ ವಚನ ಭಾಗದ ಗದ್ಯವನ್ನು ಗಮಕವೈವಿಧ್ಯದಿಂದ ವಾಚನ ಮಾಡಿದರೆ ಕಾವ್ಯದ ತಿರುಳು ತಿಳಿಯಾಗಿ ರಸವು ಸುಗಮಗ್ರಾಹ್ಯವಾಗುತ್ತದೆ. ದಾಸರ ಉಗಾಭೋಗಗಳಮ್ಮೂ ಶರಣರ ವಚನಗಳನ್ನೂ ಸಾಹಿತ್ಯ ಭಾಗಕ್ಕೆ ಹೆಚ್ಚು ಗಮನಕೊಟ್ಟು ಸಂಗೀತದ ಸರ್ಕಸ್ ಮಾಡದೆ ಗಮಕಕ್ಕೆ ಸಮೀಪವಾಗಿ ಹೇಳಿದರೆ ಕಾವ್ಯದ ಆಶಯವು ಕೆನೆಯಂತೆ ಎದ್ದು ಬರುತ್ತದೆ. ಶರಣರ ವಚನ ರಚನೆಗಳನ್ನು ತಾಳಕ್ಕೆ ಜಗ್ಗಾಡಿ ಕೇವಲ ಸಂಗೀತಮಯವಾಗಿ ಹಾಡುವುದ ಕ್ಕಿಂತ ಗಮಕರೀತ್ಯಾ ವಾಚನ ಮಾಡುವುದು ಹೆಚ್ಚು ಹಿತ. ಕೆಲವು ನಿಷ್ಣಾತ ಸಂಗೀತಕಾರರು ವಚನ ಸಾಹಿತ್ಯದ ಆಶಯವನ್ನು ಕೆಡಿಸದಂತೆ ಕಲಾಪೂರ್ಣ ವಾಗಿ ತಾಳಬದ್ಧವಾಗಿ ಹೇಳುತ್ತಾರೆಂಬುದನ್ನು ಅಲ್ಲಗಳೆಯುವಂತಿಲ್ಲ. ಬಸವಣ್ಣ ನವರು ಒಂದು ವಚನದಲ್ಲಿ 'ಆನು ಒಲಿದಂತೆ ಹಾಡುವೆ, ಓಜ ಬಜಾವಣೆಯ ನರಿಯೆ' ಎಂದಿದ್ದಾರೆ. ಬಸವಣ್ಣನವರು ತಮ್ಮ ವಚನಗಳನ್ನು ಗಮಕದ ಧಾಟಿಯಲ್ಲಿ ಪಕ್ಕವಾದ ಗಳ ಸಹಾಯವಿಲ್ಲದೆ ಹಾಡುತ್ತಿದ್ದಿರಬೇಕೆಂದು ಊಹಿಸುವದು ಸಾಧ್ಯವಿದೆ. ಆ ವಚನ ಹೀಗೆ:'ತಾಳಮಾನ ಸರಿಸವನರಿಯೆ, ಓಜೆ ಬಜಾವಣೆಯ ಲೆಕ್ಕವನರಿಯೆ, ಅಮೃತಗಣದೇವ ಗಣಗಳನರಿಯೆ ! ಕೂಡಲ ಸಂಗಮದೇವ ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ.'

ಅಷ್ಟಾದಶ ಪುರಾಣಗಳನ್ನು ಹೇಳುವ ಪದ್ಧತಿಯನ್ನೆ ಗದ್ಯಕಥಾ ಸಾಹಿತ್ಯವನ್ನು ನಿರೂಪಿಸುವಲ್ಲಿ ಬಳಸಿಕೊಳ್ಳಬಹುದಾಗಿದೆ. ಪುರಾಣಗಳಲ್ಲಿ ಭಾಗವತಪುರಾಣ ದಶಮಸ್ಕಂದವು ಅತ್ಯಂತ ಲೋಕಪ್ರಿಯವಾಯಿತು. ಪ್ರಾಚೀನ ಪಂಡಿತರು 'ಗದ್ಯಕಥಾ' ಎಂಬ ಕಾವ್ಯ ಪ್ರಕಾರವೊಂದನ್ನು ಹೇಳಿ ದ್ದಾರೆಂಬ ಮಾತನ್ನು ಕವಿರಾಜಮಾರ್ಗಕರ್ತೃ ಸ್ಪಷ್ಟ ಪಡಿಸುತ್ತಾನೆ :

ಮಿಗೆ ಕನ್ನಡಗಬ್ಬಂಗಳೊ
ಳಗಣಿತ ಗುಣ ಗದ್ಯಪದ್ಯ ಸಮ್ಮಿಶ್ರಿತಮಂ
ನಿಗದಿಸುವರ್ ಗದ್ಯಕಥಾ
ಪ್ರಗೀತಿಯಂ ತಚ್ಚಿರಂತನಾಚಾರ್ಯರ್ಕಳ್ ।।

ಈ ಗದ್ಯಕಥಾ ಪ್ರಕಾರವು ಭಿನ್ನವಾದುದಿರಬೇಕು ಎಂದು 'ಸಮಗ್ರ ಕನ್ನಡ ಸಾಹಿತ್ಯಚರಿತ್ರೆ'ಯಲ್ಲಿ ಹೇಳಲಾಗಿದೆ. (ಸಂಪುಟ ೧, ಪ್ರ. ೪೪ ತ. ಸು. ಶಾಮರಾಯ.)-ಗದ್ಯ ಕಥಾ ಎಂಬ ಹೆಸರು ಸಾರ್ಥಕವಾಗುವಂತೆ ಇದರಲ್ಲಿ ಪದ್ಯಕ್ಕಿಂತ ಗದ್ಯವೇ ಹೆಚ್ಚು ಪ್ರಮುಖ ಸ್ಥಾನವನ್ನು ಪಡೆದಿರಬೇಕು. ಬಹುಶಃ ವಡ್ಡಾರಾಧನೆಯಂತೆ ಕೆಲವೇ ಪದ್ಯಗಳನ್ನು ಒಳಗೊಂಡ ಗದ್ಯವಾಗಿರಬಹುದು; ಅಥವಾ ಸಾಮಾನ್ಯ ಚಂಪೂ ಗ್ರಂಥಗಳಿಗಿಂತ ಹೆಚ್ಚು ಗದ್ಯವನ್ನು ಒಳಗೊಂಡು ಕಥಾ ಪ್ರಧಾನವಾದ 'ಪಂಚತಂತ್ರ' ಅಥವಾ 'ಧರ್ಮಾಮೃತ' ದಂಥ ಕಾವ್ಯಗಳಾಗಿರಬಹುದೊ ಏನೊ- ಎಂದು ತ. ಸು ಶಾಮರಾಯರು ಊಹಿಸಿದ್ದಾರೆ. ೯-೧೦ನೆಯ ಶತಮಾನಗಳಲ್ಲಿ ಗದ್ಯಗ್ರಂಥಗಳು ರಚನೆಯಾಗಿದ್ದರೆ ಈಗಿನಂತೆ ಗ್ರಂಥಸ್ಥ ಗದ್ಯಕಥಾ ಸಾಹಿತ್ಯವನ್ನು ಆರಾಮವಾಗಿ ಓದಿಕೊಳ್ಳುವ ಪರಿಸ್ಥಿತಿ ಆಗಿರಲಿಲ್ಲ ಓಲೆಯಪ್ರತಿಗಳನ್ನು ಓದಲಿಕ್ಕೆಂದೆ ತಯಾರಿಸುವದು ಕಷ್ಟದ ಕೆಲಸ. ಕಾವ್ಯ ಗ್ರಂಥವನ್ನು ಹಿಂದು ಸಣ್ಣ ಓಲೆಯಕಾಗದದಲ್ಲಿ ಪ್ರತಿಮಾಡಿ ವಾಚನಮಾಡಿದಾಗ ನೂರಾರು ಕೇಳುಗರು ಅದನ್ನು ಆನಂದಿಸುತ್ತಿದ್ದರು. 'ಕೇಳು ಜನಮೇಜಯ' ಎಂಬಂತೆ, ಓದು ಜನಮೇಜಯರು ಆಗ ಇದ್ದಿರಲ್ಲಿಲ್ಲ. ಆದುದರಿಂದ ಗದ್ಯ ಗ್ರಂಥಗಳನ್ನು ವಾಚನ ಮಾಡುವ ಒಂದು ಕ್ರಮವೂ 'ಗದ್ಯಕಥಾ' ಕಾಲಕ್ಕೆ ರೂಢಿಯಲ್ಲಿದ್ದಿರಬೇಕೆಂದು ಊಹಿಸಬಹುದಾಗಿದೆ.

ಹರಿಹರನ ರಗಳೆಗಳನ್ನು ಹರಿಹರನ ಗದ್ಯವನ್ನು ರಾಗವಾಗಿ, ಲಯಬದ್ಧವಾಗಿ ಓದುವಂತೆ ಕವಿ ರಸವತ್ತಾದ ಶೈಲಿಯಲ್ಲಿ ರಚಿಸಿದ್ದಾನೆ. ಭಕ್ತಿಯ ಆವೇಶ ಉಕ್ಕಿ ಚೆಲ್ಲುವಂತೆ 'ವೃತ್ತ ಗಂಧಿ' ಗದ್ಯದಲ್ಲಿ ಕಾವ್ಯಮಯ ಭಾಷೆಯನ್ನು ದುಡಿಸಿಕೊಂಡಿದ್ದಾನೆ. ಒಂದೊಂದು ಶಬ್ದಕ್ಕೆ ಸಮಾನಾರ್ಥ ಬರುವ ಪರ್ಯಾಯ ಪದಗಳನ್ನು ಸೂರೆ ಮಾಡಿದ್ದಾನೆ. ಇದರಿಂದ ವಾಚನ ಕಾಲಕ್ಕೆ ಒಂದು 'ಟೆಂಪೊ' ನಿರ್ಮಾಣವಾಗುತ್ತದೆ.

ಕವಿಯ ರಚನಾ ಚಾತುರಿಯೊಂದಿಗೆ ವಾಚನ ಮಾಡುವ ಗದ್ಯಗಮಕಿಯ ನಿರೂಪಣಾಚಾತುರಿಯೂ ಬೇಕು. ಗದ್ಯ ವಾಚನವೂ ಒಂದು ಕಲೆ ಭರತಮುನಿ ಹೇಳಿರುವ ವಾಚಿಕಾಭಿನಯವನ್ನು ಒಲ್ಲಿ ಸಯುಕ್ತಿಕವಾಗಿ ಬಳಸಿಕೊಂಡು

ಅದರ ವೈಖರಿಯನ್ನು ಪ್ರದರ್ಶಿಸಬಹುದಾಗಿದೆ. ಹಳಗನ್ನಡ ಗದ್ಯ ವಾಚನದಲ್ಲಿ ವಿರಾಮಚಿಹ್ನೆಗಳನ್ನು ತಾನೇ ಪೂರೈಸಿಕೊಂಡು, ಉದ್ಧರಣ ಚಿಹ್ನೆಗಳು ಇರುವಲ್ಲಿ ಧ್ವನಿಯಂಗಾತ್ರವನ್ನು ವಿರಿಳಿತಗಳೊಡನೆ ಬದಲಿಸಬೇಕಾಗುವುದು. ಒಂದೇ ವ್ಯಕ್ತಿ ಕೃಲಾಸಂರಂತೆ ಅನೇಕ ಪಾತ್ರಗಳಾಗಿ ಧ್ವನಿಮಾರ್ಪಾಟಿನೊಂದಿಗೆ ಅಭಿನಯಿಸಬೇಕಾಗುವುದು. ಹೊಸಗನ್ನಡ ಗದ್ಯವಾಚನವು ಹಳಗನ್ನಡದಿಂದ ವ್ಯತಿರಿಕ್ತವಾಗಿರುತ್ತದೆ. ಹೊಸಗನ್ನಡದಲ್ಲಿ ಚಿಹ್ನೆಗಳು ವಿಪರೀತ, ವಿಪುಲ– ಅಲ್ಪ ವಿರಾಮ, ಅರ್ಧವಿರಾಮ, ಪೂರ್ಣವಿರಾಮ, ವಿವರಣೆಯ ಚಿಹ್ನೆ, ಉದ್ಗಾರ ಚಿಹ್ನೆ, ಪ್ರಶ್ನಾರ್ಥಕಚಿಹ್ನೆ, paranthitical ಚಿಹ್ನೆಗಳು. ಕಂಸಿನಲ್ಲಿ ಅಡಕವಾದ ಒಕ್ಕಣಿಕೆ–ಈ ಮೊದಲಾದ ಮೇರೆಗೆ ಓದುವ ವೇಗ, ಲಯ ಜೋರು, ಎತ್ತರ, ಗಾತ್ರಗಳು ವ್ಯತ್ಯಾಸಗೊಳ್ಳಬೇಕಾಗುವುದು. ಶಾಲೆ ಕಾಲೇಜುಗಳಲ್ಲಿ ಗದ್ಯವಾಚನವನ್ನೂ ರೂಢಿಸುವ ಕ್ರಮವಿದ್ದಂತೆ ತೋರುವುದಿಲ್ಲ. ಬಿ. ಎಡ್. ಕಾಲೇಜುಗಳಲ್ಲಿ ಮಾತ್ರ ಗದ್ಯವಾಚನದ ಪ್ರಾತ್ಯಕ್ಷಿಗೆಗಳಿರುತ್ತವೆ.

ಒಳ್ಳೆಯ ವಾಗ್ಮಿಯಾಗಬೇಕಾದವನು ಮೊದಲು ಗದ್ಯವಾಚನವನ್ನು ರೂಢಿಸಿಕೊಳ್ಳಬೇಕು. ಮನಸ್ಸಿನಲ್ಲಿ ಓದಿಕೊಳ್ಳುವವನು ಮೂಕವಾಗ್ಮಿಯಾದಾನು. ಡಾ. ರಾಧಾಕೃಷ್ಣನ್, ಬಿ. ಎಂ. ಶ್ರೀಕಂಠಯ್ಯನವರು, ಅ.ನ.ಕೃ ಜವಾಹರಲಾಲ್ ನೆಹರೂ, ಚಾರ್ಚಿಲ್, ಡಿಜರೈಲಿ, ಎಡ್ಮಂಡ್ ಬರ್ಕ್, ಗ್ಲಾಡ್ ಸ್ಟನ್ ಅಂತಹ ವಾಗ್ಮಿಗಳ ವಾಗ್ಮಿತೆ ಉತ್ತಮ ಗದ್ಯವಾಚನದ ಉದಾಹರಣೆಗಳಿಂದು ಹೇಳಬೇಕು ಸಾಹಿತ್ಯಸಮ್ಮೇಳನ, ವಿಚಾರಸಂಕಿರಣ, ವಿಚಾರಗೋಷ್ಠಿಗಳಲ್ಲಿ ಪ್ರಬಂಧಗಳನ್ನು ಮಂಡಿಸುವ ಪರಿಣಾಮಕಾರಿ ವಾಗ್ಮಿತೆಗೆ ಉತ್ತಮ ಗದ್ಯ ವಾಚನವೆನ್ನಬಹುದು.

ಗಮಕವಾಚನಕ್ಕೆ ಬೇಕಾಗುವ ಯೋಗ್ಯ ಗದ್ಯಭಾಗಗಳನ್ನು ಜಾಣ್ಮೆಯಿಂದ ಆಯ್ಕೆ ಮಾಡಬೇಕಾಗುವುದು. ಕವಿ ಬೇಂದ್ರೆಯವರು ಗೀತವನ್ನು ಭಾವಗೀತ, ನಾದಗೀತ, ಸ್ವರಗೀತ, ಗದ್ಯಗೀತವೆಂದು ವಿಭ್ಹಾಗಿಸಿದ್ದಾರೆ ಗದ್ಯಗೀತವೆಂಬ ಕೊನೆಯ ವಿಭಾಗವು ಅರ್ಥ ಪೂರ್ಣವಾಗಿದೆ. ಗೀತವು ಗದ್ಯರೂಪದಲ್ಲೂ ಇರಬಹುದು. ಆದನ ಒಂದು ವಿಶಿಷ್ಟ ಧಾಟಿ

ಯಲ್ಲಿ ಹೇಳಬಹುದು. ಚಿಕ್ಕದೇವರಾಜ ವಂಶಾವಳಿ ಉತ್ತಮ ಗದ್ಯಕಾವ್ಯ. (೧೭ ಶ.) ಕಂಪನಿ ನಾಟಕಗಳಲ್ಲಿ ಹೆಸರಾದ Prose actors ಆಗಿ ಹೋದರು. ಅವರು ರಂಗಭೂಮಿಯ ಮೇಲೆ ಹೇಳುತ್ತಿದ್ದ ಗದ್ಯಕ್ಕೆ ಒಂದು ಧಾಟಿ ಇತ್ತು, ಥಾಟು ಇತ್ತು. ೧೪, ಡಿಸೆಂಬರ್ ೩೨ರಲ್ಲಿ ಮೈಸೂರು ನಗರದಲ್ಲಿ ಆ ನಗರದ ಮತ್ತು ಜಿಲ್ಲೆಯ ಕರ್ನಾಟಕ ಸಂಘಗಳ ಆಶ್ರಯದಲ್ಲಿ ನಡೆದ 'ಕನ್ನಡ ಉತ್ಸವದ' ಅಧ್ಯಕ್ಷಸ್ಥಾನದಿಂದ ಬಿ. ಎಂ. ಶ್ರೀ ಅವರು ಭಾಷಣಮಾಡುವಾಗ, ತಮ್ಮ ಕೊರಳಿಗೆ ಹಾಕಿದ ಹಾರವನ್ನು ತೆಗೆದು ಕನ್ನಡ ಭೂಪಟಕ್ಕೆ ಹಾಕಿ, ಆ ಭೂಪಟವನ್ನೆ ಭುವನೇಶ್ವರಿಯೆಂದು ತಿಳಿದು ಅದನ್ನು ಬೆರಳಿನಿಂದ ನಿರ್ದೇಶಿಸುತ್ತ—

"ಇಗೋ ಈ ಕನ್ನಡ ತಾಯಿ ! ಈಕೆಯ ವಯಸ್ಸನ್ನು ನಾವು ಪರಿಕ್ಷೀಸ ಬೇಕಾಗಿಲ್ಲ ಕಂಡು ಹಿಡಿಯಲೆಳಸಬೇಕಾಗಿಲ್ಲ. ಈ ತಾಯಿ ಬಹುಕಾಲ ಬದುಕಿ ಬಂದಿದ್ದಾಳೆ. ಅನೇಕ ಸಾಧು–ಸಂತರೂ, ರಾಜ–ಸಾಮ್ರಾಟರೂ ಈ ನಾಡಿನಲ್ಲಿ ಅವತಾರ ಮಾಡಿದ್ದಾರೆ. ಈಗ ನಮ್ಮ ತಾಯಿ ಎಷ್ಟೇ ಬಡವೆ ಯಾದರೂ ಆಕೆಯನ್ನು ಕೀಳಾಗದಂತೆ ಮಕ್ಕಳು ನೋಡಿಕೊಳ್ಳಬೇಕು...". ಹೀಗೆ ನಾಟ್ಯಪೂರ್ಣವಾಗಿ ಮುಂದುವರಿಯುವ ಭಾಗ ಗದ್ಯವಾಚನವಾದರೆ, 'ಕನ್ನಡ ತಾಯ್ನೋಟ' ಎಂಬ ಶ್ರೀಯವರ ಕಾವ್ಯಶ್ರೀಒಂದು ಗಮಕವಾಚನಕೆ ಸುಂದರ ಲಕ್ಷ್ಯವಾದೀತು :

"ಬಳಸಿ ಬಂದೆನು ಸುತ್ತ ಕನ್ನಡದ ನಾಡುಗಳ ಸಿರಿಯನೋಡುತ್ತ
ತಾಯಡಿಯ ಹುಡಿಯ ತಲೆಗಾನುತ್ತ ಹರಕೆಯ ಪವಿತ್ರಯಾತ್ರೆಯಲಿ....
ತುಂಗಭದ್ರೆಯ ತಡಿಯ ಬೆದರಿರುವ ಮೊರಡಿಗಳ ಕೊರಕಲಿನ ಬಸಿಲ
ಬೇಗುದಿಯ ಬಿರುಕಿನಲಿ ಮುಳ್ಳಿಡಿಯ ಕಲ್ಲು ಹೂವಿಡಿದರೆಯ ಮೇಲೆ
ಕುಳಿತಿದ್ದಳಾ ತಾಯಿ...
"ಕೇಳಣ್ಣ, ನಾ ನೊಬ್ಬ ಹಳೆಯ ಮುತ್ತೈದೆ– ಹಿರಿದಾಗಿ ಬಾಳಿದವಳೊಮ್ಮೆ ;
ಈಗ ಬಡತನ, ಬಡವೆ, ಬಡವಾವಾದೆ, ಬಡವಾದ ಮಕ್ಕಳನು ನೋಡಿ,
ಬತ್ತಿ, ಮತ್ತಿನ್ನುಡಿಯ ಸೊರಗಿನಲಿ ಬಡವಾದೆ—ಸಾವಿಲ್ಲ ನನಗೆ..."

ಅಥವ– ಕವಿಕುಮಾರವ್ಯಾಸನ ವಿರಾಟ ಪರ್ವದ ಕೀಚಕ ವಧೆಯ ಸಂದರ್ಭ–ವಾಗಲಿ, ವೀರ ರಸದ ಅಭಿಮನ್ಯು ಕಾಳಗವಾಗಲಿ, ಶೋಕರಸದ ಕರ್ಣಾವಸಾನವಾಗಲಿ, ಭಕ್ತಿಯ ಉತ್ಕಟತೆಯ ದ್ರೌಪದಿಯ ಮಾನರಕ್ಷಣೆಯ ಪ್ರಸಂಗ–ವಾಗಲಿ, ವೀರಭಕ್ತಿಯ ಭೀಷ್ಮ ಶ್ರೀಕೃಷ್ಣರ ಯುದ್ಧ ಪ್ರಸಂಗವಾಗಲಿ ಗಮಕಕ್ಕೆ ಅತಿಯೋಗ್ಯವಾದ ಸನ್ನಿವೇಶಗಳು. ಇದು ಪದ್ಯ ಗಮಕ ವಾಚನ, ಕವಿ ಕುಮಾರವ್ಯಾಸನ ಬಗ್ಗೇ ಬಿ.ಎಂ. ಶ್ರೀಯವರು ಬರೆದ ಈ ಸಾಲುಗಳು ಉತ್ತಮ ಗದ್ಯವಾಚನ ನೀಡಬಲ್ಲವು.

"ನಾರಣಪ್ಪನ ನೋಟ, ಕುಮಾರವ್ಯಾಸನ ದರ್ಶನ, ಭಕ್ತಿಯ ಆವೇಶ ಬೇರೆ. ಸೀರೆ ಸೆಳೆದದ್ದೂ ಸೆಳೆದದ್ದೇ; ಉಂಡು ತೇಗಿ ಹೊಟ್ಟೆ ನೀವಿದ್ದೂ ನೀವಿದ್ದೇ; ದೇವ ಬಂದಾ ನಮ್ಮ– ಓ ಹೋ ಹೋ! ಏಳನೆಯ ಸ್ವರ್ಗ! ಪರಮೇವ್ಯೋ ಮನ್! ಕಿವಿ ಹೊಗುವುದೇ ತಡ– ಪರವಶ! ಕೊಚ್ಚುವ ಪ್ರವಾಹ; ಇಂದಿಗೂ ನಮ್ಮ ಕರಳುನಿಂದ ಬಂದು ನಾಲಗೆಯಲ್ಲಿ ನಲಿಯುವ ಕನ್ನಡ; ಆ ಮಾತು, ಆ ಶೈಲಿ, ಆ ಮಾತ್ರೆಗಳ ವಿನ್ಯಾಸ, ಭಾವ, ರಸ, ಮೈಮರೆತ!... ಇಂತಹ ಗದ್ಯ ಶೈಲಿಯಲ್ಲಿ ಲಯದ ಕಣಿತವನ್ನು ಕಾಣುತ್ತೇವೆ

ರಾಜರ ಆಸ್ಥಾನಗಳಲ್ಲಿ ಕವಿಗಮಕಿವಾದವಾಗ್ಮಿಗಳು ಶೋಭಿಸುತ್ತಿದ್ದರೆ, ಗಮಕಿಗಳು ಕಾವ್ಯಗಮಕಿಗಳೆ ಆಗಿರುತ್ತಿದ್ದರಲ್ಲದೆ, ಗದ್ಯಗಮಕಿಗಳಲ್ಲ. ಗಮಕ ಕಲೆ ಕನ್ನಡನಾಡಿನ ಸಂಸ್ಕೃತಿಯೊಂದಿಗೇ ಬೆಳದುಕೊಂಡು, ಬಂದಿದೆ. ಅದು ಎಷ್ಟು ಪ್ರಾಚೀನ ಎಂಬುದನ್ನು ಹೇಳುವದು ಕಷ್ಟ. ಬಹುಶಃ ಸಂಗೀತ ಕಲೆಯಷ್ಟೆ ಗಮಕ ಕಲೆಯೂ ಪ್ರಾಚೀನ. ಹಾಗೆ ನೋಡಿದರೆ ಗಮಕ ಎಂಬದು ಸಂಗೀತದ ಒಂದು ಅಂಗ.– 'ಸ್ವರಸ್ಯ ಕಂಪೋ ಗಮಕಃ ಶೋತೃ ಚಿತ್ತ ಸುಖಾವಹಃ' ಎಂದು ಸಂಗೀತ ರತ್ನಾಕರ ಹೇಳುತ್ತದೆ. ಆದರೆ ಕಾವ್ಯ ಗಮಕ ವಾಚನವು ಸಂಗೀತದ ಸ್ವರ ಕಂಪನದ ಗಮಕಕಿಂತ ಭಿನ್ನ, ಕವಿಯಕೃತಿಗಳನ್ನು ವಿವರಿಸಿ, ವಿಶದಪಡಿಸಿ ಹೇಳುವವನು ಗಮಕಿ ಎಂಬುದು ರೂಢಿಯಿಂದ ಬಂದ ಕಲ್ಪನೆ. ಇಂದಿನ ಭಾವಗೀತೆಗಳನ್ನು, ಹಿಂದಿನ ದಾಸರ ಕೀರ್ತನೆಗಳನ್ನು, ಅದಕ್ಕೂ ಹಿಂದಿನ ಶರಣರ ವಚನಗಳನ್ನು ಹೇಳುವವರೆಲ್ಲರೂ ಗಮಕಿಗಳೆ. ಗೇಯ ಕಾವ್ಯವನ್ನು ಹೇಳುವವರೆಲ್ಲಾ ಗಮಕಿಗಳೆ. ಆದರೆ

ಕೃತಿಕಾರ, ಸ್ವತಃ ಗಮಕಿಯಾಗಿದ್ದರೆ ಆತನಿಗೆ ವಾಗ್ಗೇಯಕಾರ ಎನ್ನುವ ರೂಢಿ. ಮೈಸೂರು ವಾಸುದೇವಾಚಾರ್ಯರು ವಾಗ್ಗೇಯಕಾರರಾಗಿದ್ದರು. ಆದರೆ ಅವರು ಗಮಕಿಗಳಾಗಿದ್ದಿರಲಿಲ್ಲ, ಸಂಗೀತಕಾರರಾಗಿದ್ದರು. ಬಸವಪ್ಪ ಶಾಸ್ತ್ರಿಗಳು ಮೈಸೂರು ಆಸ್ಥಾನ ಕವಿಯಾಗಿದ್ದಂತೆ ಗಮಕಿಗಳೂ ಆಗಿದ್ದರಂತೆ.

ಕಾವ್ಯಗಮಕಿ, ಕಾವ್ಯದ ಜೀವಾಳವನ್ನು ಸಹೃದಯರು ಅರಿಯುವಂತೆ ಹಿತ-ಮಿತವಾದ ಸಂಗೀತದೊಂದಿಗೆ ಸಮುಚಿತರಾಗಗಳಲ್ಲಿ ನಿವೇದಿಸುತ್ತಾನೆ. ಕವಿಹೃದಯವೀಣೆಯನ್ನು ಮಿಡಿಯಬಲ್ಲ ಭಾವಜ್ಞ, ಸಂಗೀತಜ್ಞನೆ ಗಮಕಿ. ಕಾವ್ಯದ ರಸ, ಭಾವ, ಅರ್ಥಗಳನ್ನು ಶ್ರೋತೃವಿಗೆ ರಸಾನಂದವಾಗುವಂತೆ ಸರಾಗವಾಗಿ ಅನುವಾದಿಸುವುದೆ ಗಮಕ. 'ಓದಿಹೊಗಳಿಸಿಕೊಳ್ವ' ಗಮಕಿಗಳು ಕೌರವನ ಆಸ್ಥಾನದಲ್ಲಿದ್ದರೆಂದು ಕವಿಕುಮಾರವ್ಯಾಸ ವರ್ಣಿಸಿದ್ದಾನೆ. ಗಮಕಿಗಳ ಜೊತೆ ಉತ್ಪ್ರೇಕ್ಷೆ, ರೂಪಕಗಳಲ್ಲಿ ಅಲಂಕೃತಿ ಚಿಮತ್ಕೃತಿಗಳಲ್ಲಿ ಪರಿಣತರಾದ ಚತುರ್ಭಾಷಾ ವಿಶಾರದೆ ಕವಿಗೆಳೂ ಒಪ್ಪಿದಂತೆ ಆಸ್ಥಾನದ ಕವಿಯು ಕಾವ್ಯ ರಚನೆಯನ್ನು ಮಾಡಿದ ಮೇಲೆ ಗಮಕಿಯಾದವನು ಕವಿಯ ಬಾಯಿಂದ ವಾಚನ ವಿವರಣೆಗಳನ್ನು ಕೇಳಿ ಅದನ್ನು ಸಭೆಗೆ ಗಮಕ ರೀತ್ಯಾ ಅನುವಾದಿಸಿ ಹೇಳುತ್ತಿದ್ದಿರಬೇಕು. ಗಮಕಿಗಳ ಮೂಲಕವೆ ಕಾವ್ಯವು ರಸಿಕ ಲೋಕಕ್ಕೆ ವೇದ್ಯವಾಗುವದು.

ಗಮಕ ಕಲೆಯು ಸಾಕಷ್ಟು ಪ್ರಾಚೀನವಾದುದಾದರೂ ಅದು ಜನಮನವನ್ನು ಸಾಕಷ್ಟು ಹಿಡಿದಿಲ್ಲ. ಮುಖ್ಯವಾಗಿ ಸಂಗೀತಕಾರರೆ ಕಾವ್ಯ ಗಮಕಗಳತ್ತ ಕಣ್ಣು ಹಾಯಿಸಿಲ್ಲ. ಶಾಸ್ತ್ರೀಯ ಸಂಗೀತಕಾರರು ಗುರುಮುಖೇನ ಕಲಿತ ಕೃತಿ-ಕೀರ್ತನೆಗಳು, ಚೀಜುಗಳನ್ನು ಮಾತ್ರ ಆಯಾ ರಾಗದಲ್ಲಿ ಪ್ರಸ್ತುತ ಪಡಿಸಲು ರೂಢಿಮಾಡಿಕೊಂಡಿರುತ್ತಾರಲ್ಲದೆ, ಪಂಪನ, ರನ್ನನ, ಹರಿಹರನ, ರಾಘವಾಂಕನ, ಕುಮಾರವ್ಯಾಸನ, ಲಕ್ಷ್ಮೀಶನ, ಷಡಕ್ಷರದೇವನ ಕಾವ್ಯಗಳನ್ನು ಓದಿ ತಿಳಿದುಕೊಂಡು ವಾಚನ ಮಾಡುವ ಶಿಕ್ಷಣ ಅವರಿಗೆ ಸಾಲದು. ಶಾಲೆ ಕಾಲೇಜುಗಳಲ್ಲಿ ಕವಿಗಳ ಅಭ್ಯಾಸವಾಗಿದ್ದರೂ ಸಂಗೀತ ಸಾಧಕನು ಗುರುವಿನ ಗರುಡಿಯಲ್ಲಿ ಪಳಗುವಂತೆ, ಗಮಕ ಪ್ರವೀಣನಾದ ಗುರುವೊಬ್ಬನಲ್ಲಿ ಸಾಧನೆ ಮಾಡದೆ ಸ್ವಂತ ಬುದ್ಧಿಯಿಂದ ಕಾವ್ಯ ಗಮಕವಾಚನ ಸಾಧ್ಯವಾಗುವುದಿಲ್ಲ

ಹಿಂದುಸ್ಥಾನೀ, ಕರ್ನಾಟಕೀ ಸಂಗೀತ ಪದ್ಧತಿಗಳಲ್ಲಿ ಗುರುಮುಖೇನ ಸಾಧನೆ ಮಾಡಿದ ಕಲಾವಿದರು ಉತ್ತರ ಕರ್ನಾಟಕದಲ್ಲಿಯೂ, ದಕ್ಷಿಣ ಕರ್ನಾಟಕದ ಲ್ಲಿಯೂ ಇದ್ದಾರೆ. ಕಳೆದ ಕೆಲವರ್ಷಗಳಿಂದ ಮೈಸೂರು ಬೆಂಗಳೂರುಗಳಲ್ಲಿ ಕರ್ನಾಟಕ ಸಂಗೀತ ಪದ್ಧತಿಯ ಗಮಕ ಶಿಕ್ಷಣವನ್ನು ಪಡೆದ ಗಮಕಿಗಳು ಮುಂದೆ ಬಂದಿದ್ದಾರೆ. ಆದರೆ ಹಿಂದುಸ್ಥಾನೀ ಸಂಗೀತ ಪದ್ಧತಿಯು ರೂಢ ವಾಗಿರುವ ಉತ್ತರ ಕರ್ನಾಟಕದಲ್ಲಿ ಹಿಂದುಸ್ಥಾನೀ ಪದ್ಧತಿಯ ಗಮಕ ಕಲೆ ಬೆಳೆದು ಬರಲಿಲ್ಲ. ಖ್ಯಾತ ಹಿಂದುಸ್ಥಾನೀ ಗಾಯಕ ಶ್ರೀ ಗುರುರಾವ್ ದೇಶಪಾಂಡೆ ಅವರೊಬ್ಬರೆ ಗಮಕದತ್ತ ಒಲವು ತೋರಿದರು ಭಾರತ ಬಿಂದೂರಾಯರನ್ನು ಗುರುಗಳನ್ನಾಗಿ ಪಡೆದುಕೊಂಡು ಕರ್ನಾಟಕ ರಾಗಗಳ ಲ್ಲಿಯೂ ಬಿಂದೂರಾಯರನ್ನು ಗುರುಗಳನ್ನಾಗಿ ಪಡೆದುಕೊಂಡು ಕರ್ನಾಟಕ ರಾಗಗಳಲ್ಲಿಯೆ ಬಿಂದೂರಾಯರ ನಿರ್ದೇಶನದ ಮೇರೆಗೆ ಗದುಗಿನ ಭಾರತದ ಗಮಕವನ್ನು ರೂಢಿಸಿಕೊಂಡರು. ಇದರಿಂದಾಗಿ ಗುರುರಾಯರು ಸವ್ಯ ಸಾಚಿ ಯಾಗಿ ಹಿಂದುಸ್ಥಾನೀ ಕರ್ನಾಟಕೀ ಎರಡೂ ಪದ್ಧತಿಗಳಲ್ಲಿ ಪ್ರಗತಿ ಸಂಪನ್ನ ರಾದರು. ಮುಂದೆ ತಮ್ಮ ಸ್ವಂತಿಕೆಯಿಂದ ಭಾರತವಾಚನದಲ್ಲಿ ಹಿಂದುಸ್ಥಾನೀ ರಾಗಗಳನ್ನು ಅಳವಡಿಸಿಕೊಂಡು ಹಿಂದುಸ್ಥಾನೀ ಶೈಲಿಯ ಮಿಶ್ರಣವನ್ನು ತಮ್ಮ ಗಮಕಕ್ಕೆ ತಂದುಕೊಂಡರು. ಇದು ಗುರುರಾವ್ ದೇಶಪಾಂಡೆ ಅವರ ವೈಶಿಷ್ಟ್ಯ. ಆದರೆ ಅವರ ಗಮಕಗರುಡಿಯಲ್ಲಿ ತಯಾರಾದ ಶಿಷ್ಯರು ಪಾತ್ರ ನಮಗೆ ಸಿಗಲಿಲ್ಲ.

ಬಿಂದೂರಾಯರು, ಕೃಷ್ಣಗಿರಿ ಕೃಷ್ಣರಾಯರು, ಸಂಪತ್ಕುಮಾರಾ-ಚಾರ್ಯರು ಸಾಹಿತ್ಯ ಪರಿಷತ್ತಿನ ಮೂಲಕ ಉತ್ತರ ಕರ್ನಾಟಕಕ್ಕೂ ಪರಿಚಿತ ರಾದರು. ಆದರೆ ಅವರ ಶಿಷ್ಯ ಬಳಗವು ಪಾತ್ರ ಧಾರವಾಡ ಭಾಗದಲ್ಲಿ ಹೆಚ್ಚಾಗಿ ಬೆಳೆಯಲಿಲ್ಲ. ಈಗ ಸುಮಾರು ಆರವತ್ತು ವರ್ಷಗಳ ಹಿಂದೆ ಭಾರತವಾಚನದ ಒಂದು ಗ್ರಾಮೋಫೋನ್ ಧ್ವನಿಮುದ್ರಿಕೆಯೊಂದು ಜನಪ್ರಿಯವಾಗಿತ್ತು. ದ್ರೌಪದೀ ವಸ್ತ್ರಾಪಹರಣದ ಪದ್ಯಗಳನ್ನು ಆಕೆ ರೆಕಾರ್ಡ್ ಮಾಡಿದ್ದಳು, ಕೊನೆಗೆ 'ನಾಗಮ್ಮ ಮೈಸೂರು ಎಂಟು ವರ್ಷದ ಬಾಲೆ' ಎಂಬ ಅನೌನ್ಸಮೆಂಟ್ ಕೂಡ ಇತ್ತು. ಈ ಎಂಟು ವರ್ಷದ ಬಾಲೆ ಯಾರಲ್ಲಿ ಗದುಗಿನ ಭಾರತ ಗಮಕ

ವಾಚನ ಕಲಿತಳೊ ನನಗಂತೂ ತಿಳಿದಿಲ್ಲ. ಆ ಹೊತ್ತಿಗಾಗಲೆ ಬಹುಶಃ ಭಾರತ ಬಿಂದೂರಾಯರು ನುರಿತ ಗಮಕಿಗಳಾಗಿ ಭಾರತವಾಚನದ ಕಚೇರಿಗಳನ್ನು ಆರಂಭಿಸಿದ್ದಿರಬೇಕು. ವರದಾಚಾರ್ಯರಿಂದ ಕಂದಪದ್ಯಗಳನ್ನು ಹೇಳುವ ಮಟ್ಟಿಗಳನ್ನು ಕೇಳಿ ಕೇಳಿ ಬಿಂದೂರಾಯರು ಅದೇ ಕಂದಪದ್ಯ, ಶ್ಲೋಕ, ಮೊದಲಾದವನ್ನು ರಾಗವಾಗಿ ಹೇಳುವ ಪದ್ಧತಿಯನ್ನು ಭಾರತವಾಚನಕ್ಕೆ ತಿಳವಡಿಸಿಕೊಂಡಿರಬೇಕು. ಅಂತೂ ಹೀಗೆ ಮೈಸೂರಿನಲ್ಲಿ ಕಡಿಬಿಟ್ಟ ಗಮಕ ಕಲೆ ದಾಂಗುಡಿಬಿಟ್ಟು ಬೆಳೆಯಿತು. ಉತ್ತರ ಕರ್ನಾಟಕದಲ್ಲೂ ಕಂಪನಿ ನಾಟಕ ಗಳಲ್ಲಿ ಕಂದ, ಶ್ಲೋಕಗಳನ್ನು ಹಾಡುವ ನೆಟರಿದ್ದರೂ ಅವರು ಕಾವ್ಯವಾಚನ ದತ್ತ ಬುದ್ಧಿ ಹರಿಸಲಿಲ್ಲ.

ಆಕಾಶವಾಣಿಯ ಮೂಲಕ ಗಮಕ ಕಲೆಯನ್ನು ಅಭಿವೃದ್ಧಿ ಪಡಿಸುವ ಪ್ರಯತ್ನ ಯಾವ ಕೇಂದ್ರದಿಂದಲೂ ಒಂದು ಸ್ಥಿರವಾದ, ಚಿರವಾದ ಚೌಕಟ್ಟಿನಲ್ಲಿ ನಡೆದಿಲ್ಲ. ಬೆಂಗಳೂರು ಆಕಾಶವಾಣಿಯಿಂದ 'ಪ್ರಾಚೀನ ಕವಿ ವಾಣಿ' ಎಂಬ ಶೀರ್ಷಿಕೆಯಲ್ಲಿ ಖ್ಯಾತ ಗಮಕಿಗಳು ಕಂಪನಿಯ ಕಲಾವಿದ ಕಲಾ ವಿದೆಯರು ಭಾಗವಹಿಸುವ ಗಮಕರೂಪಕಗಳ ಮೂಲಕ ಗದುಗಿನ ಭಾರತ ವನ್ನು ಪರಿಚಯಿಸುವ ಪ್ರಯತ್ನ ನಡೆಯಿತು. ರಂಗಭೂಮಿಯ ಮೇಲೆ ಹೆಸರು ಮಾಡಿದ ಎನ್. ಶ್ರೀಕಂಠ ಮೂರ್ತಿ, ಕೊಟ್ಟೂರು ಬಸಪ್ಪ, ಬಿ. ಜಯಮ್ಮ, ಎಂ. ಸಿ. ಮಹಾದೇವಸ್ವಾಮಿ, ಗುರುರಾಜಲು ನಾಯಿಡು ಮೊದಲಾದ ಕಲಾಳಿದರು ಖ್ಯಾತ ಗಮಕಿಗಳಾದ ಶಕುಂತಲಾಬಾಯಿ ಪಾಂಡುರಂಗರಾವ್, ಬಿ. ಎಸ್. ಎಸ್. ಕೌಶಿಕ, ಬಿ. ವಿ. ಇಂದಿರಮ್ಮ, ಗೌರಮ್ಮ ನಾಗರಾಜ, ಎಂ. ಎ, ಎನ್; ಅಯ್ಯಂಗಾರ್ ಮೊದಲಾದವರೊಡನೆ ಸಹಕರಿಸಿ ಕಾರ್ಯಕ್ರಮಮಾಡಿದ ಒಂದು ದಾಖಲೆ ಗಮಕಕಲೆಯನ್ನು ಅಭಿ ವೃದ್ಧಿ ಪಡಿಸಲು ಇದೊಂದು ಉತ್ತಮ ಯೋಜನೆಯೆಂದು ಸಿದ್ಧಪಡಿಸಿದಂತಾ ಯಿತು. ಆದರೆ ಈ ಪ್ರಯತ್ನ ಅಲ್ಪಾಯುಷಿಯಾಯಿತು. ಈಗ ಬೆಂಗಳೂರಿ ನಲ್ಲಿ ದೂರದರ್ಶನ ಕಾರ್ಯಮಾಡಲು ತೊಡಗಿದೆ. ಒಣ್ಣದ ತೀವಿಯೂ ಈ ಟಿ ವಿ. ಗಿದೆ. ಕಲ್ಪನಾಶೀಲ ಕಾರ್ಯಕರ್ತರು ಈ ಸಾಧನವನ್ನು ಇಲ್ಲಿಯ ಗಮಕಲೆಯನ್ನು ಅಭಿವೃದ್ಧಿ ಪಡಿಸಲು ಬಳಸಿಕೊಳ್ಳಬಹುದಾಗಿದೆ.

ಇದರ ಹೊರತಾಗಿ ಉಳಿದ ಸಾಂಸ್ಕೃತಿಕ ಚಟುವಟಿಕೆಗಳ ಅಂಗವಾಗಿ ಮತ್ತು ಸಂಗೀತ ಸಮ್ಮೇಳನಗಳ ಅಂಗವಾಗಿ ನಡೆಯುವ ಪ್ರಸಾರ, ಪ್ರಸಾರೇತರ ಕಾರ್ಯಕ್ರಮಗಳಲ್ಲಿಯೂ ಗಮಕ ಕಾರ್ಯಕ್ರಮವು ಸ್ಥಾನವಾನ ಪಡೆಯುವುದು ಅವಶ್ಯವಾಗಿದೆ. ಸಾಹಿತ್ಯ ಸಮ್ಮೇಳನಗಳಲ್ಲಿ ಕೆಲವೊಂದು ಕಾಲ ಗಮಕ ಗೋಷ್ಠಿಗಳು ಕ್ರಮಪ್ರಾಪ್ತವಾಗಿ ನಡೆದುಕೊಂಡು ಬಂದವು. ಕನ್ನಡ ಸಾಹಿತ್ಯ ಪರಿಷತ್ತು ಗಮಕ ಪ್ರಚಾರಕ್ಕಾಗಿ ಸಾಕಷ್ಟು ಶ್ರಮವಹಿಸಿದೆ. ರಾಜ್ಯ ಅಕಾಡೆಮಿ ಪ್ರತಿವರ್ಷ ಶ್ರೇಷ್ಠ ಗಮಕಿಯೊಬ್ಬರಿಗೆ ಪ್ರಶಸ್ತಿ ನೀಡುತ್ತ ಬಂದಿದೆ. ಇಂದಿನ ಗಮಕಕಲಾ ಪರಿಷತ್ತು ಅಕಾಡೆಮಿ ಸಹಾಯ, ಸಹಕಾರದಿಂದ ಜರುಗುತ್ತಿರುವುದು ಗಮಕ ಇತಿಹಾಸದಲ್ಲಿಯೇ ಮೈಲುಗಲ್ಲು. ಗಮಕಕಲೆಗೆ ಒಳ್ಳೆಯ ಕಾಲ ಬಂದೀತೆಂದು ಈಗ ಹಾರೈಸಬಹುದಾಗಿದೆ.

ಗಮಕ ಕಲೆ ಮತ್ತು ಗದುಗಿನ ಭಾರತ

ಕವಿ ಗಮಕಿ, ವಾದಿ ವಾಗ್ಮಿಗಳು ಹಿಂದೆ ರಾಜರ ಆಸ್ಥಾನಗಳಲ್ಲಿ ಶೋಭಿಸುತ್ತಿದ್ದರಂತೆ. ವೀಣೆಗೆ ವೈಣಿಕನಿದ್ದಂತೆ ಕವಿಯ ಕಾವ್ಯಕ್ಕೆ ಗಮಕಿ ಗಮಕವು ಶಾಸ್ತ್ರೀಯ ಸಂಗೀತದ ಒಂದಂಗ. "ಸ್ವರಸ್ಯ ಕಂಪೋ ಗಮಕಃ ಶ್ರೋತೃಚಿತ್ತ ಸುಖಾವಹಃ" ಎಂದು ಸಂಗೀತ ರತ್ನಾಕರದಲ್ಲಿ ಹೇಳಿದೆ. ಆದರೆ ಕಾವ್ಯ ಗಮಕವು ಸಂಗೀತ ಗಮಕದ ತಂತ್ರಕ್ಕಿಂತ ಭಿನ್ನವಾದುದು. ಕಾವ್ಯ ಗಮಕಿಯು ಕಾವ್ಯದ ಜೀವಾಳವನ್ನು ಸಹೃದಯರು ಅರಿಯುವಂತೆ ಹಿತಮಿತವಾದ ಸಂಗೀತದೊಂದಿಗೆ ಸಮುಚಿತ ರಾಗಗಳಲ್ಲಿ ನಿವೇದಿಸುತ್ತಾನೆ. ಕವಿಯ ಹೃದಯ ವೀಣೆಯನ್ನು ಮಿಡಿಯುಬಲ್ಲ ಭಾವಜ್ಞನೆ ಗಮಕಿ.

ವಾಲ್ಮೀಕಿಯ ಮಹಾ ಕಾವ್ಯವನ್ನು ವೀಣೆಯೊಂದಿಗೆ ಸಂಕೀರ್ಣ ರಾಗಗಳಲ್ಲಿ ರಸ-ಭಾವಗಳಿಗನುಗುಣವಾದ ರೀತಿಯಲ್ಲಿ ಶ್ರೋತೃಗಳು ಮುಗ್ಧರಾಗುವಂತೆ ಪಾಠನ ಮಾಡಿದ ಪ್ರಥಮ ಯಮಳ ಗಮಕಿಗಳೆಂದರೆ ಲವಕುಶರು. ಸ್ವತಃ ರಾಮಾಯಣ ಕರ್ತೃ ವಾಲ್ಮೀಕಿಗಳೆ ಈ ಗಮಕಿಗಳನ್ನು ತಯಾರಿಸಿದ್ದರಂತೆ. ಶ್ರೀರಾಮಚಂದ್ರನ ಯಜ್ಞ ಶಾಲೆಯಲ್ಲಿ ರಾಮಾಯಣ ಕಾವ್ಯವಾಚನ ಈ ಬಾಲ ಗಮಕಿಗಳಿಂದ ಜರುಗಿಪಾಗ ಶ್ರೀರಾಮಚಂದ್ರ ಭಾವಪರವಶನಾಗಿ ಹೋದ. ಹೃದಯ ಪರಿವರ್ತನೆಯನ್ನು ಹೊಂದಿದ. ವಟುವೇಷದಲ್ಲಿದ್ದ ಆ ಬಾಲ ಗಮಕಿಗಳು ರಾಮಾಯಣ ಕಾವ್ಯವಾಚನ ಮಾಡಿದಾಗ ಶ್ರೀರಾಮಚಂದ್ರನ ಮನಸ್ಸೇಕೆ, ಶ್ರೀರಾಮಚಂದ್ರನೆ ಕರಗಿ ಹೋಗಿದ್ದ. ಪೊದಲೆ ರಾಮಾಯಣದಂಥ ರಸಕಾವ್ಯ, ಹೇಳುವವರು ವಾಲ್ಮೀಕಿಯ ಗರುಡಿಯ ಶಿಷ್ಯರು, ಕೇಳುವ ಸೂರಿಗಳು ಶ್ರೀರಾಮಚಂದ್ರ, ಲಕ್ಷ್ಮಣಾದಿ ಶ್ರೋತೃವೃಂದ! ಕೇಳುವದೇನು?

ಗಮಕಕಲೆ ಅಗಲಿದ ತಂದೆ-ಮಕ್ಕಳನ್ನು ಒಂದುಗೂಡಿಸುವಷ್ಟು ಮಂತ್ರ ಶಕ್ತಿಯುಳ್ಳದ್ದು. ಬಾಲ ಗಮಕಿಗಳ ರಾಮಾಯಣಕಾವ್ಯವಾಚನದ ಸಿದ್ಧಿ ಇಂತಹದು. ಕಾವ್ಯ ಮತ್ತು ಸಂಗೀತ ಎರಡೂ ಸಮಸಮವಾಗಿ ಬೆರೆತರೆ ಸುವರ್ಣಪುಷ್ಪಕ್ಕೆ ಸುಗಂಧ ಬೆರೆತಂತೆ. ಕಬ್ಬವಿಲ್ಲದೆಯೆ ಬರಿ ತರಾನಾ ಗಳ್ಲವೆ

ತಿಲ್ಲಾಣವಲ್ಲಿ ಹಾಡಬಹುದು. ಸಂಗೀತವಿಲ್ಲದೆ ಕಾವ್ಯವನ್ನು ಗದ್ಯಪಾಟಿಯಲ್ಲಿ ಓದಬಹುದು. ಒಂದು ಸಂಗೀತದ ಮೇಲ್ಮೆಯನ್ನೂ ಇನ್ನೊಂದು ಸಾಹಿತ್ಯದ ಮೇಲ್ಮೆಯನ್ನೂ ಎತ್ತಿ ಎತ್ತಿ ತೋರುವಂತಪವಾದರೆ ಗಮಕವು ಸಾಹಿತ್ಯ-ಸಂಗೀತಗಳ ಸಮರಸಭಾವವನ್ನು ನಿದರ್ಶಿಸುತ್ತದೆ.

ಆದರೆ ಗಮಕಕ್ಕೆ ಎಲ್ಲ ಕಾವ್ಯ ಪ್ರಕಾರಗಳೂ ಒಗ್ಗುತ್ತವೆ ಎಂದು ಹೇಳಲಿಕ್ಕಾಗದು. ಷಟ್ಪದಿಗಳಷ್ಟು ಗಮಕ ಸೌಲಭ್ಯ ಉಳಿದ ಚಂಪೂ, ಸಾಂಗತ್ಯ, ರಗಳೆ ಮೊವಲಾವ ಕಾವ್ಯ ಪ್ರಕಾರಗಳಿಗೆ ಅಷ್ಟೊಂದು ಲಭ್ಯವಾಗಲಿಕ್ಕಿಲ್ಲ. ಗಮಕಿಸುವ ಪ್ರಯತ್ನವೇನೊ ಸ್ತುತ್ಯವೆ, ಆದರೆ ಸೌಲಭ್ಯದ ದೃಷ್ಟಿಯಿಂದ ಷಟ್ಪದಿ ಕಾವ್ಯಗಳ ಅನುಕೂಲ್ಯ ಹೆಚ್ಚು ಎಂದೇ ಹೇಳಬೇಕಾಗುತ್ತದೆ.

ಗಮಕ ನಿರೂಪಣೆಗಾಗಿಯೆ ಅವತಾರವಾವಂತಿದೆ ಗದುಗಿನ ಭಾರತ. ನಮ್ಮ ನಾರಣಪ್ಪನಿಗೆ 'ಓದಿ ಹೊಗಳಿಸಿ ಕೊಳ್ವ' ಗಮಕಿಗಳ ಪರಿಚಯ ಚೆನ್ನಾಗಿದ್ದಂತೆ ತೋರುತ್ತದೆ. ಕೌರವರಾಯನ ಆಸ್ಥಾನದಲ್ಲಿ ಮೆರೆಯುತ್ತಿದ್ದ ಕವಿ, ಗಮಕಿ, ಪಾದಿ, ಪಾಗ್ಮಿಗಳ ವರ್ಣನೆಯನ್ನು ಯಥಾಮತ್ತಾಗಿ ಮಾಡುತ್ತಾನೆ. ಗಮಕ ಕಲೆಯೆಂದರೇನು, ಕಾವ್ಯವು ಹೇಗಿದ್ದರೆ ಗಮಕಯೋಗ್ಯವಾದೀತು ಎಂಬುದರ ಪೂರ್ಣ ಕಲ್ಪನೆ ಆತನಿಗಿದೆ. ಗದುಗಿನ ಭಾರತವು ನವರಸಪೂರ್ಣವಾಗಿದ್ದು. ಮುಖ್ಯವಾಗಿ—

"ಅರಸುಗಳಿಗಿಮ ವೀರ, ದ್ವಿಜರಿಗೆ
ಪರಮ ವೇದದ ಸಾರ. ಬೋಗೀ
ಶ್ವರರ ತತ್ವ ವಿಚಾರ, ಮಂತ್ರಿಜನಕೆ ಬುದ್ಧಿಗುಣ।
ವಿರಹಿಗಳ ಶೃಂಗಾರ, ವಿದ್ಯಾಪರಿಣತರಲಂಕಾರ..."

ಆದುದರಿಂದ "ಕಾವ್ಯಕೆ ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತ" ಎಂದೂ ಹೇಳಿದ್ದಾನೆ. ಗಮಕಿಗಳು ಈ ರಹಸ್ಯವನ್ನರಿತುಕೊಂಡು ರಾಜರ

ಆಸ್ಥಾನಗಳಲ್ಲಿ ವೀರರಸದ ಭಾಗಗಳನ್ನೂ, ಪಂಡಿತವಿಪ್ರರ ಸಭೆಯಲ್ಲಿ ವೇದದ ಸಾರವೆನಿಸುವಂತಹ ವಿದುರ ನೀತಿ, ವ್ಯಾಸೋಪದೇಶ, ನಾರದರ ಹಿತೋಕ್ತಿ ಮೊದಲಾದ ಭಾಗಗಳನ್ನೂ, ಯೋಗಾಸಕ್ತಿಯುಳ್ಳವರ ಮುಂದೆ ಭಗವದ್ಗೀತಾ ಸಾರ, ಭೀಷ್ಮ-ದ್ರೋಣರ ನುಡಿಗಳನ್ನೂ, ರಸಿಕರಿಗೆ ಶೃಂಗಾರ-ಭಾಗಗಳನ್ನೂ, ವಿದ್ವಾಂಸರ ಸಮ್ಮುಖದಲ್ಲಿ ಅಲಂಕಾರಗಳನ್ನೂ ವಾಚನ ಮಾಡಬಹುದೇನೊ. ಇದಕ್ಕಿಂತ ಮಿಗಿಲಾಗಿ ಭಕ್ತಿರಸದ ಶ್ರೇಷ್ಠ ನಿದರ್ಶನವೆಂದು ಇಡಿಯ ಕಾವ್ಯವನ್ನೆ ವಾಚನ ಮಾಡಬಹುದಾಗಿದೆ. ಕವಿಗೆ ಈ ಕಾವ್ಯ ಕೃಷ್ಣ ಕಥೆಯಾಗಿದೆ. ಅಂತೆಯೆ ಇಲ್ಲಿ ನಾವು 'ಪದುಮನಾಭನ ಮಹಿಮೆ'ಯನ್ನು ನೋಡಬಹುದು. ದ್ರೌಪದಿ ಪಾಂಡವರಂತೂ ಪದುಮನಾಭನ ಪೆರಮ ಭಕ್ತರು. ಆದರೆ ಕರ್ಣ-ಕೌರವರೂ ಕೂಡ ಶ್ರೀಕೃಷ್ಣನ ಮಹಿಮೆಯನ್ನು ಅರಿತವರೆ ಆಗಿದ್ದಾರೆ. 'ಕಷ್ಣನ ಕೆಣಕಿದಲ್ಲದೆ ಮಹಿಲದಲ್ಲಿ ಕೈವಲ್ಯವಿಲ್ಲ' ಎಂಬುದನ್ನು ದುರ್ಯೋಧನ ಬಲ್ಲವನಾಗಿದ್ದ. 'ಮರಣದ ಹೊತ್ತು, ಕಷ್ಣನ ಕಾಬ ಸುಕೃತಫಲ' ಎಂಬ ಸಮಾಧಾನ ಕರ್ಣನಿಗೆ. ಇನ್ನು ಭೀಷ್ಮರ ವೀರ ಭಕ್ತಿ, ವಿದುರನ ಶರಣಾಗತಿ ಭಕ್ತಿ, ಧೃತರಾಷ್ಟ್ರನ ಬುದ್ಧಿಗುರುಡ ಭಕ್ತಿ ಒಂದೊಂದು ಮಾದರಿ.

ಆದಿಪರ್ವದಿಂದ ಗದಾ ಪರ್ವದ ವರಗೆ ಗದುಗಿನ ಭಾರತದಲ್ಲಿ ಗಮಕಕ್ಕೆ ಅತ್ಯಾನುಕೂಲ್ಯವುಳ್ಳ ಭಾಗಗಳನ್ನು ಆಯ್ದುಕೊಳ್ಳುವುದು ಅತಿ ಸುಲಭ. ಹಾಗೆ ನೋಡಿದರೆ ಸಮಗ್ರ ದಶಪರ್ವಗಳನ್ನು ಒಂದು ಪರ್ವ ಬಿಡದಂತೆ ಗಮಕರೀತ್ಯಾ ವಾಚನ ಮಾಡಬಹುದು. ದಶ ಪರ್ವಗಳ ನಾಟ್ಯ ಪೂರ್ಣಭಾಗಗಳ ಗಮಕ ರೂಪಕಗಳೂ ರಂಗಕ್ಕೆ ಬಂದಿವೆ. ಆದರಲ್ಲು ಆಯ್ಕೆ ಮಾಡಬಹುದಾದರೆ ಮೊದಲು ವಿರಾಟ ಪರ್ವದ ಕೀಚಕ ವಧೆಯ ಪ್ರಸಂಗವನ್ನೆ ತೆಗೆದುಕೊಳ್ಳಬಹುದು. ವಿರಾಟ ಪರ್ವದಿಂದಲೆ ಗದುಗಿನ ಭಾರತದ ಗಮಕಕ್ಕೆ ಮೊದಲು ಮಾಡುವದು ರೂಢಿ. ಕೀಚಕ ವಧೆಯ ಪರ್ಯಂತ ಪಾಂಡವರ ಅಜ್ಞಾತವಾಸದ ಕತೆಯನ್ನು ಸನ್ನಿವೇಶದಿಂದ ಸನ್ನಿವೇಶಕ್ಕೆ ಕುಮಾರವ್ಯಾಸ ನಾಟ್ಯ ಕೌಶಲದಿಂದ ಕುತೂಹಲಕಾರಿಯಾಗಿ ಸಾಗಿಸಿಕೊಂಡು ಹೋಗುವದನ್ನು ಗಮಕಿ ಪರಿಣಾಮಕಾರಿಯಾಗಿ ನಿವೇದಿಸಬಹುದು. ಕೀಚಕನಿಂದ ರಕ್ಷಣೆ ಕೋರಿ ವಲಲನ ಬಳಿ ಹೋದಾಗ ಆತ ತಂಪಾಗಿರಲು ಕೆರಳಿದ ಸೈರಂಧ್ರಿ—

ಹೆಂಡತಿಯ ಹರಿಬದಲಿ ಒಬ್ಬನೆ
ಗಂಡನಾದರೆ ವೈರಿಯನು ಕಡಿ
ಖಂಡವನು ಮಾಡುವನುಮೇಣ್ ತನ್ನೊಡಲ ನಿಕ್ಕುವನು
ಗಂಡರೈವರು ಮೂಂಲೋಕದ
ಗಂಡರೊಬ್ಬಳನಾಳಲಾರಿರಿ
ಗಂಡತೋ ನೀವ್ ಷಂಢರೋ ಹೇಳಿಂದಳಿಂದು ಮುಖಿ ॥

ಈ ಪದ್ಯ ಸೈರಂಧ್ರಿಯೆನಿಸಿದ ದ್ರೌಪದಿಯ ರೋಷ, ಸಂತಾಪಗಳನ್ನು ಒಪು ತೀವ್ರವಾಗಿ ಪ್ರಕಟಿಸುತ್ತದೆ. ಗಮಕಿಯು ತನ್ನ ಕಲ್ಪನಾ ಸಾಮರ್ಥ್ಯದಿಂದ, ಕಾವ್ಯ ರಸ ಗ್ರಹಣ ಶಕ್ತಿಯಿಂದ, ಸಂಗೀತದ ಆವರಣದಲ್ಲಿ ಸಮರ್ಪಕ ರಾಗದಲ್ಲಿ (ಹಿಂದುಸ್ತಾನೀ ಸೂಲಕ್ಕಂಸಾಲ್ಲಿ) ಪರಣಾಮಕಾರಿಯಾಗಿ ನಿರೂಪಿಸ ಬಹುದು.

ಸಭಾ ಪರ್ವದಲ್ಲಿ ದ್ರೌಪದಿಯ ವಸ್ತ್ರಾಕರ್ಷಣದ ಸಂಧಿಯನ್ನು ಶೋಕ, ಭಕ್ತಿಗಳು ಹೊಮ್ಮಿಬರುವಂತೆ ವಿವಿಧ ರಾಗಗಳಲ್ಲಿ (ಆನಂದ ಭೈರವಿ ಜೋಗಿಯಾ ರಾಗಗಳಲ್ಲಿ) ಗಮಕಿಸಬಹುದು. 'ಸುಲಿವರೂರೊಳಗುಟ್ಟ ಸೀರೆಯನು। ಎಲೆ ಮುರಾಂತಕ ರಕ್ಷಿಸೆ' ಎಂದು ಮೊದಲಾಗಿ- 'ಬಳಿಕಲಕ್ಷಯು ಸೀರೆಯಾಗಲಿ ಗವುಗಿನ ವೀರನಾರಯಣ' ಎಂಬಲ್ಲಿಯವರೆಗೆ ಪ್ರತಿ ಪದ್ಯವೂ ಶೋಕ, ಭಕ್ತಿಗಳ ಪಾಕವಾಗಿದೆ. ಗಮಕಿಗೆ ಇಲ್ಲಿ ರಸಾವೇಶದ ಆವಿಷ್ಕಾರ ಮಾಡಿ ತೋರಿಸಲು ಅವಕಾಶವಿದೆ. ಕರುಣೆ ಶೋಕಗಳಿಗೆ ಹಿಂದುಸ್ತಾನೀ ಭೈರವಿ, ಭೈರವ, ಕಾಲಂಗಡಾ ಮೊದಲಾದ ರಾಗಗಳು ಉಚಿತವೆನಿಸಬಹುದು.

ಅರಣ್ಯ ಪರ್ವದಲ್ಲಿ ಅರ್ಜುನನು ಶಿವ-ಪಾರ್ವತಿಯರಿಂದ ಪಾಶುಪತಾಸ್ತ್ರ ಅಂಜನಾಸ್ತ್ರಗಳನ್ನು ಪಡೆದ ಸನ್ನಿವೇಶವಾಗಲಿ, ಸೌಗಂಧಿಕಾಪುಷ್ಪದ ಸಂಧಿಯಾಗಲಿ, ದೂರ್ವಾಸರ ಆತಿಥ್ಯವಾಗಲಿ ವಾಚನಕ್ಕೆ ಒಪ್ಪುವ ಭಾಗಗಳಾಗಿವೆ. ಉದ್ಯೋಗ ಪರ್ವದಲ್ಲಿ ಶ್ರೀಕೃಷ್ಣನ ಸಂಧಿಯಾನವು ಅತ್ಯುತ್ತಮ ಪ್ರಸಂಗ. ಇವರಲ್ಲಿ ದ್ರೌಪದಿಯ ಪಾತ್ರವು ಭೀಮನನ್ನೆ ಹಿಂದೆ ಹಾಕುತ್ತದೆ ತನ್ನ ವೀರದಲ್ಲಿ.

ಯುದ್ಧ ಪ್ರಾರಂಭದಲ್ಲಿ ಭೀಷ್ಮರು ಶ್ರೀ ಕೃಷ್ಣನಿಂದ ಚಕ್ರವನ್ನು ಹಿಡಿಸುವ ಸನ್ನಿವೇಶ, ವೀರ ಅಭಿಮನ್ಯುವಿನ ಮರಣ, ಕರ್ಣಾವಸಾನ, ಗದಾಯುದ್ಧದ ಸನ್ನಿವೇಶಗಳು ವೀರ, ಶೋಕಗಳ ಆಗರವಾಗಿವೆ.

ಕುಮಾರವ್ಯಾಸನ ಭಾಷೆ, ಪದಪುಂಜ, ಶಬ್ದಗಳ ಆಯ್ಕೆ, ಸಂಗ್ರಾಹಕ ಶಕ್ತಿ, ಪುನರುಕ್ತಿಯ ಬೆಡಗು, ಅನುಪ್ರಾಸ, ಶಬ್ದಲಂಕಾರಗಳು ಗಮಕದಲ್ಲಿ ಹೆಚ್ಚಿನ ಸೊಗಸು, ಸೌಂದರ್ಯವರ್ಧನೆಯನ್ನುಂಟುಮಾಡುತ್ತವೆ.

ಭೀಷ್ಮಪರ್ವದಲ್ಲಿ ಭೀಷ್ಮನು ಶ್ರೀ ಕೃಷ್ಣನ ಮಂಗಳಾನನಕಮಲದಲಿ ಶರಗಳ ನಿಡುವ ಸನ್ನಿವೇಶ, ಪಾರ್ಥನನ್ನು ಬೆನ್ನಿಗೆ ಕಟ್ಟಿಕೊಂಡು ಶ್ರೀಕೃಷ್ಣನು ರಕ್ಷಿಸುವಬಗೆಯನ್ನು ಕವಿ ವರ್ಣಿಸುವ ರೀತಿ ಗಮಕಕ್ಕೆ ವಿಶೇಷ ಬೆಡಗನ್ನು ನೀಡುವಂತಹದು—

ಎತ್ತಲೊಲೆದನದೆತ್ತ ಸರಿದನ
ದೆತ್ತ ಜಾರಿದನೆತ್ತ ತಿರುಗಿದ
ನೆತ್ತ ಹಿಂಗಿದನೆತ್ತಲೊಕಿದ ನೆತ್ತಲುರುಬಿದನು ।
ಅತ್ತಲತ್ತಲು ರಥ ಹಯವ ಬಿಡ
ದೊತ್ತಿ ಬೀದಿಗೆ ನೂಕಿ ಪಾರ್ಥನ
ಮುತ್ತಯನ ಸಂಮುಖಿಕೆ ಬಿಡದೌಕಿದನು ಮುರವೈರಿ ॥

ಕರ್ಣಪರ್ವದ ೧೧ನೆಯ ಸಂಧಿಯ–'ಇರಿತ ಮುನ್ನವೊ ಸುಭರಿಟಗೆ ಬೋಬ್ಬಿರಿತ ಮುನ್ನವೊ' ಎಂಬ ಪದ್ಯವಾಗಲಿ, ದ್ರೋಣಪರ್ವದ— 'ಬಪರವಾದರೆ ಹರನವದನಕೆ । ಬೆವರತಹೆನು' ಎಂಬ ಅಭಿಮನ್ಯುವಿನ ವೀರವಾಣಿಯಾಗಲಿ, 'ಯಾದವರು ನಮಗೆ ಹಗೆಯಾವವರು' ಎಂಬ ಶ್ಲೇಷಾರ್ಥದ ಸಾಲಾಗಲಿ, ಘಟೋತ್ಕಚನ ಮಾಯಾ ಯುದ್ಧ ವೈಖರಿಯನ್ನು ವರ್ಣಿಸುವ– 'ಮಾಯದಲಿ ಹುಲಿಯಾಗಿ ಗರ್ಜಿಸಿ । ಹಾಯಿವನು ಕಲಿ ಸಿಂಹವಾಗಿಗ । ದಾಯುಧದಲಪ್ಪಳಿಸಿದನು ಭೈರವನರೂಪಾಗಿ' ಎಂದೊ–ಇಲ್ಲವೆ,

ಎರಗಿದನು ಸಿಡಿಲಾಗಿ ಕಂಗಳೊ
ಳಿರುಕಿದನು ಮಿಂಚಾಗಿ ಮಳೆಯನು
ಕರೆದು ನಾದಿದನಾತಪತ್ರತನುತ್ರ ಸೀಸಕವ ।
ತುರುಕಿದನು ಹೊಗೆಯಾಗಿ ಮಿಗೆಬೊ
ಬ್ಬಿರಿದನೊಂದೆಡೆಯಲ್ಲಿ ಸುಭಟರ
ನೊರಲಿಸಿದನೊಂದೆಡೆಯಲೇನೆಂಬೆನು ಮಹಾರಣವ ॥'

ಎಂಬಂತಹ ಪದ್ಯಗಳು ಗಮಕ ನಿರೂಪಣೆಗೆ ಗಣನೀಯವಾದ ರೀತಿಯಲ್ಲಿ ಎತ್ತಿಕೊಡುತ್ತವೆ.

ಅಭಿಮನ್ಯುವಿನ ದುರಂತ ಮರಣದ ಸನ್ನಿವೇಶವು ಶೋಕಪೂರದಿಂದ ನಮ್ಮ ಹೃದಯವನ್ನು ಕಲಕಿ ಬಿಡುತ್ತದೆ. ರಥವು ಕಳೆದು, ಸಾರಥಿ ಇಲ್ಲವಾಗಿ, ಧನುವನ್ನು ಧರಿಸಿದ ಕೈಕತ್ತರಿಸಿ ಹೋದರೆ ಅವನು ಮೊಂಡಗೈಯಿಂದಲೆ ರಥದ ಗಾಲಿಗಳನ್ನು ಚಕ್ರಾರವಾಗಿ ತಿರುಗಿಸುತ್ತ ವೈರಿಯತ್ತ ತೂರುತ್ತಾನೆ. ಕೊನೆಗೂ ವೈರಿಯ ಕಪಟಕ್ಕೆ ತುತ್ತಾಗಿ ಮೃತ್ಯುಪಶನಾದಾಗ ಕವಿ ವ್ಯಕ್ತ ಪಡಿಸುವ ಉದ್ಗಾರ, ನಿಪುಣ ಗಮಕಿಗೆ ಶೋಕಾವಿಷ್ಕಾರದ ಶಿಖರ ಪ್ರಾಯವಾದ ಶ್ಲೋಕವಾಗಿವೆ—

ಕಾಳಕಿಚ್ಚಿದ್ದಡವಿಯನು ಕುಡಿ
ನಾಲಗೆಯೊಳಳವಡಿಸಿ ದಳ್ಳುರಿ
ಜ್ವಾಲೆ ತಗ್ಗಿದ ವೋಲು ಗಗನದ ಮುಗಿಲು ಮೋಹರವ ।
ಧಾಳಿಯಲಿಯರೆಯಟ್ಟಿ ಸುಂಟರು
ಗಾಳಿಯುರವಣಿ ನಿಂದವೊಲುಸುರ
ಪಾಲ ತನಯನ ತನಯನಸ್ತವಿಸಿದನು ರಣದೊಳಗೆ ॥

ತತ್ಪೂರ್ವದಲ್ಲಿ–'ಕೋಡಿದನೆ, ಕೊಂಕಿದನೆ, ನಾಯಕವಾಡಿಗಳು ಹಲರೆಂದು ಬೆಂಗೊಟ್ಟೋಡಿದನೆ? ಕೈಗಾಯದೆಚ್ಚನು ನಚ್ಚಿದಂಬಿನಲಿ' ಎಂಬ ಕವಿಯ ಕೌತುಕದ ಸಾಲುಗಳು, ಕರ್ಣನು ಹಿಂದಿನಿಂದ ಹೇಡಿಯಂತೆ ಧನುವ ಕತ್ತರಿಸಿದಾಗ– (ಇದು) 'ಆವ ಶರ ಸಂಧಾನ ? ಲಾಘವದಾವಪರಿ ? ಮರ್ಕು,

ಪೂತು, ಪಾಯಿಕು, ದೇವಬಿಲ್ಲಾಳಿಂತು ಕಡಿದೈ ಕರ್ಣ ನೀ ಧನುವ ? ಈ ವಿವೇಕ, ಇವಾರ ಸೇರುವೆ ? 'ಹಿಂದೆ ಬಂದೆಸುವೀ ವಿಗಡತನ ನಿನಗೆ ಮೆರೆವುದೆ ಕರ್ಣ' ? ಎಂಬ ವ್ಯಂಗ್ಯ ಪ್ರಶ್ನೆ ಅಭಿಮಾನಿಯಾದ ಕರ್ಣನಿಗೆ ಅಭಿಮನ್ಯುವಿನ ಭಾಣದಷ್ಟು ಪರಿತವಾದ ಮಾತಿನ ಉಡುಗೊರೆಯಾಗಿದೆ. ತಜ್ಞ ಗಮಕಿಯಾದವನು ಈ ಭಾಗವನ್ನು ಕೇಳುಗರು ಕಂಬನಿದುಂಬುವಂತೆ ನಿರೂಪಿಸಲು ಸಾಧ್ಯ. ಮುಂದೆ ನಡೆಯುವ ಪ್ರಸಂಗಗಳೆಲ್ಲವೂ ಕರುಣೆ ಕನಿಕರಗಳಿಗೆ ನಿದರ್ಶನಗಳಾಗುತ್ತ ಅಂತಿಮವಾಗಿ ವೀರವಾರ್ಧನೆ ಘೋರ ಪ್ರತಿಜ್ಞೆ ! ಆ ಜಯದ್ರಥನನ್ನು ಸಂಹರಿಸುವ ಪುಲಕತರುವ ಪದ್ಯ—

ಹರನ ದುರ್ಗದಲಿರಲಿ ಮೇಣಾ
ಹರಿಯ ಕಡಲೊಳಗಿರಲಿ ಬ್ರಹ್ಮನ
ಕರ ಕಮಂಡಲುವೊಳಗೆ ಹುದುಗಿರಲಿ ರವಿಯ ಪೊರೆ ಹೊಗಲಿ
ಉರಗ ಭುವನದೊಳಿರಲಿ ಮೇಣ್ ಸಾ
ಗರವ ಮುಳುಗಲಿ ನಾಳೆ ಪಡುವಣ
ತರಣಿ ತೊಲಗದ ಮುನ್ನ ಕೊಲುವೆನು ವೈರಿ ಸೈಂಧವನ ।

ಪಾತ್ರಗಳ ಸೆಂಕೀರ್ಣತೆಯನ್ನು ಕವಿ ಕುಮಾರವ್ಯಾಸ ಹೇಗೆ ಬೆಳಿಸಿಕೊಂಡು ಬರುತ್ತಾನೆಂಬುದನ್ನು ಗಮಕಿ, ಒಂದೊಂದು ಪಾತ್ರ ವಿನ್ಯಾಸದ ಪದ್ಯಗಳನ್ನಷ್ಟೆ ಆಯ್ದುಕೊಂಡು ನಿರೂಪಿಸಬಹುದು. ಮೇಲಿನ ಪದ್ಯದಲ್ಲಿ ಕರ್ಣನ ಕಪಟ ತನವ ವಿದ್ಯೆಯನ್ನು ಕೆಣಕಿ 'ಹಿಂದೆ ಬಂದೆಸುವೀ ವಿಗಡತನವದಾರ ಸೇರುವೆ' ಎಂದು ನುಡಿದಾಗ ಕರ್ಣನ ಕೀಳ್ಮೆ, ವಂಚಕ ವೃತ್ತಿಗಳು ನಮ್ಮಲ್ಲಿ ಅವನ ಬಗ್ಗೆ ಹೇಯಭಾವವನ್ನು ಮೂಡಿಸಿದರೆ ಕೃಷ್ಣಾರ್ಜುನರ ವಿಷಾದದ ಭಾಗದಲ್ಲಿ ಕರ್ಣನ ಸ್ವಾಮಿನಿಷ್ಠೆ, ಕೃಷ್ಣ ಕಾರಸ್ಥಾನದಿಂದ ಅವನಿಗೊದಗಿದ ದುರವಸ್ಥೆಗಳನ್ನು ನೆನೆದು ಕರ್ಣನಿಗಾಗಿ ಅನುಕಂಪ ತಾಳಿ ಕಂಬನಿಗರೆಯುತ್ತೇವೆ. ಕರ್ಣನ ರಥದ ಗಾಲಿ ಹೂತು ಹೋಗಿದೆ. ಧರ್ಮಯುದ್ಧವನ್ನು ನೆನೆದು ಗಾಲಿಯನ್ನೆತ್ತಿ ಮತ್ತೆ ಅಳವಿಗೊಡಲು ಕರ್ಣ ಸದುಪಕಾಶವನ್ನು ಕೇಳಿದರೆ ಕೂಡದೆಂದು ಕೃಷ್ಣ ಚಾಟಿಯಿಂದ ಪಾರ್ಥನನ್ನು ಜುಚ್ಚುತ್ತಾನೆ. ಆಗ ಕರ್ಣನ ಉದ್ಗಾರವಿದು—

(ಮೂಗಿನಲಿ ಬೆರಳಿಟ್ಟು ಮಕುಟವ ತೂಗಿ ತೊನೆದನು-) 'ಪೂತು ಮರುಳು ನಿರ್ಭಾಗಧೇಯನು ರಾಯನಕಟಾ ಶಿವಮಹಾದೇವ' ಎಂದು ತನ್ನ ಸ್ವಾಮಿಯ ದೈವ ದುರ್ವಿಲಾಸಕ್ಕಾಗಿ ಮರುಗುತ್ತಾನಲ್ಲದೆ ತನಗಾಗಿ ಅಲ್ಲ—

ಶಿವನ ಬಲಹುಂಟೆಂಬೆನೇ ? ಶಿವನವರಕಡೆ. ಹರಿಯೆಂಬೆನೇ ಪಾಂ
ಡವರ ಬಂಡಿಯಬೋವ. ಇಂದ್ರಾದ್ಯರು ಸಹಾಯಿಗಳು ।
ಅವರು ಸಾಕ್ಷಾತರ್ಜುನರೂ, ನ । ಮ್ಮವನಿ ನಮಗುಂಟೆಂಬೆನೇ ಕೌ ।
ರವನ ಪುಣ್ಯವನರಿಯೆನಿದು ಹದನೆಂದನಾ ಕರ್ಣ ॥

ವಿಧಿ ವಿಲಾಸವನ್ನು ಗಮಕಿ ಇಲ್ಲಿ ಗಮಕವಿಲಾಸದಿಂದ ಶೋಕರಸಾವಿಷ್ಕಾರ ದೊಂದಿಗೆ ಅರ್ಥೈಸಿ ಆದರ ರಸ ಭಾವಗಳನ್ನು ಅನುಭವಿಸಿ ಸೂಕ್ತ ರಾಗದಲ್ಲಿ ಇಲ್ಲಿಯ ಕರುಣಾಸ್ಪದತೆಯನ್ನು ವಿಸ್ತರಿಸಿ ಹೇಳಿದಾಗ ಅಭಿಮನ್ಯು ಹಂತಕ ನೆಂದು ಹುಬ್ಬೇರಿಸಿದ ಶ್ರೋತೃ ಈಗ ಕರ್ಣನ ಸಾನುಭೂತಿಕನಾಗುತ್ತಾನೆ.

ನಾರಣಪ್ಪನ ಕಾವ್ಯ ಪದಲಾಲಿತ್ಯ, ರಸಾವಿಷ್ಕಾರ, ಪಾತ್ರಪೋಷಣೆ, ಭಾಷೆಯ ಬಿಡಗು, ಪ್ರಾಸಾನು ಪ್ರಾಸಗಳ ಎಡೆಗಳಿಂದ ಗಮಕಕ್ಕಾಗಿಯೆ ರಚಿಸ ಲ್ಪಟ್ಟ ರಸವತ್ತಾದ ದಶಪರ್ವಗಳ ಮಹಾ ಕಾವ್ಯವೆನಿಸಿದೆ; 'ಕಾವ್ಯಕೆ ಗುರು' ವೆನಿಸಿದೆ.

ಲಕ್ಷ್ಮೀಶನ ಕಾವ್ಯ, ರಾಘವಾಂಕನ ಹರಿಶ್ಚಂದ್ರನ ಕಾವ್ಯ, ಭೀಮ ಕವಿಯ ಬಸವ ಪುರಾಣ, ಚಾಮರಸನ ಪ್ರಭುಲಿಂಗಲೀಲೆ, ಮೊದಲಾದ ಪಟ್ಟದಿ ಕಾವ್ಯ ಗಳೂ ಗಮಕ ಯೋಗ್ಯವೆಂಬಲ್ಲಿ ಸಂಶಯವೆ ಇಲ್ಲ. ಆದರೆ ಕುಮಾರವ್ಯಾಸನ ಈ ಭಾಮಿನೀಷಟ್ಪದಿಯ ಬಿಡಗು, ವಿನ್ಯಾಸ, ರಸ-ವಿಲಾಸಗಳು ಗಮಕಾನು ವಾದಕ್ಕೆ ನೀಡುವ ರಸೋತ್ತರ ಸೌಲಭ್ಯಗಳನ್ನು ಉಳಿದ ಕಾವ್ಯಗಳು ಅಮಟ್ಟದಲ್ಲಿ ಒದಗಿಸಲಾರವೇನೋ ಎಂಬ ಭಾವನೆಯನ್ನು ಸೀಮಿತ ಅವಕಾಶದಲ್ಲಿ ಸಾಕಷ್ಟು ಉದಾಹರಿಸಲಿಕ್ಕಾಗಿಲ್ಲ ಎಂಬ ಅನುಮಾನದೊಂದಿಗೆ ಇಲ್ಲಿ ವ್ಯಕ್ತ ಪಡಿಸಿದ್ದೇನೆ. ನನ್ನ ಅನುಮಾನ ತಪ್ಪಿದ್ದರೆ ಅದೇನು ದೊಡ್ಡ ತಪ್ಪಲ್ಲ. ಏಕೆಂದರೆ ಕುಮಾರ ವ್ಯಾಸನ ಬಗ್ಗೆ ನನ್ನ ಭಾವನೆ ಮಾತ್ರ ಆ ರೀತಿಯದಾಗಿದೆ.

ಮಹಾಕವಿ ಕುಮಾರವ್ಯಾಸನ ಬಗ್ಗೆ ನಡೆಯಬೇಕಾದ ಸಂಶೋಧನಾ ಕಾರ್ಯ

ಮಹಾಕವಿ ಕುಮಾರವ್ಯಾಸನ ಬಗ್ಗೆ ನಡೆಯಬೇಕಾದ ಸಂಶೋಧನ ಕಾರ್ಯ ಇನ್ನೂ ಸಾಕಷ್ಟಿದೆ. ಅದರಲ್ಲಿಯೂ ಮುಖ್ಯವಾಗಿ ಮೂರು ದಿಕ್ಕಿನಲ್ಲಿ ಈ ಕಾರ್ಯ ಅತ್ಯಗತ್ಯವಾಗಿ ನಡೆಯಬೇಕಾಗಿದೆ.

೧) ಕುಮಾರವ್ಯಾಸ ಯೋಗೀಂದ್ರ ವಿರಚಿತವಪ್ಪ ಕರ್ಣಾಟ ಭಾರತ ಕಥಾಮಂಜರಿಯ ಸಮಗ್ರ, ಸಪ್ರಮಾಣ (authoritative) ಮೂಲ ರಚನೆಯ (authentic) ಒಂದೂ ಆವೃತ್ತಿಯ ಸಂಪಾದನೆ.

೨) ಕವಿಯ ಕಾಲ ನಿರ್ಣಯ ; ಚಾರಿತ್ರಿಕ ವಿಷಯಗಳು.

೩) ಕವಿಯ ಭಾಷಾ ಕೋಶ ; ಕನ್ನಡ ವಿಷಯ ಜ್ಞಾನಕೋಶ.

ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯಗಳ, ಅಧ್ಯಯನ ಸಂಸ್ಥೆಗಳ ಮಟ್ಟದಲ್ಲಿ; ಸಂಶೋಧನ ಸಂಸ್ಥೆಗಳ ಮಟ್ಟದಲ್ಲಿ; ಸರಕಾರದ ಸಂಸ್ಕೃತಿ ಅಭಿವೃದ್ಧಿ ಇಲಾಖೆಗಳ ಮಟ್ಟದಲ್ಲಿ; ಇತಿಹಾಸ ಸಂಶೋಧನ ಸಂಸ್ಥೆಗಳ ಮಟ್ಟದಲ್ಲಿ; ಅಕಾಡಮಿ ಸಂಸ್ಥೆಗಳ ಮಟ್ಟದಲ್ಲಿ; ವೈಯಕ್ತಿಕ ಪರಿಶ್ರಮದ ಮಟ್ಟದಲ್ಲಿ; ಎನ್ ಸೈಕ್ಲೊಪೀಡಿಯಾ ಕಾರ್ಯಾಲಯಗಳ ಮಟ್ಟದಲ್ಲಿ; ಸಾಮಿತ್ಯ ಸಂಶೋಧನೆ, ಪರಿಷತ್ತು, ಪ್ರಾಚ್ಯ ಇಲಾಖೆಗಳ ಮಟ್ಟದಲ್ಲಿ; ವಿದ್ಯಾವರ್ಧಕ ಸಂಸ್ಥೆಗಳ ಮಟ್ಟದಲ್ಲಿ ಎಲ್ಲ ಮಟ್ಟಗಳಲ್ಲಿಯಾಗಲಿ, ಯಾವುದೆ ಮಟ್ಟದಲ್ಲಿಯಾಗಲಿ ಈ ಬಗ್ಗೆ ಸಂಶೋಧನ ಕಾರ್ಯ ನಡೆದು ಕವಿಯ ಬಗ್ಗೆ 'ಇದಮಿತ್ಥಂ' ಎಂಬ ಖಚಿತ ನಿರ್ಣಯಕ್ಕೆ ಆಧಾರ ಭೂತವಾದ ಸಾಮಗ್ರಿ ಬೆಳಕಿಗೆ ಬರುವ ಅವಶ್ಯಕತೆ ಇದೆ. ಇದನ್ನು ಪೆಚ್ಚು ಒತ್ತಿ ಹೇಳಬೇಕಾಗಿಲ್ಲ. ಆದರೆ ಇದುವರೆಗೂ ಮೇಲಿನ ಮೂರು ಅಂಶಗಳ ಕುರಿತು ಕಾರ್ಯ ನಡೆದಿಲ್ಲ ಎಂದು ಅಸಮಾಧಾನದ ಧ್ವನಿಯನ್ನೆತ್ತಬೇಕಾಗಿದೆ.

ಈ ಮಹಾಕವಿಯ ವಿಚಾರವಾಗಿ ಗೋಷ್ಠಿಗೆಳು ಎಷ್ಟೇ ನಡೆಯಲಿ, ಪ್ರಶಸ್ತಿ ಗ್ರಂಥಗಳು ಪುನರ್ಮುದ್ರಿತವಾಗಲಿ ಮೇಲಿನ ಮೂರು ಅಂಶಗಳ ಬಗ್ಗೆ ಮೂಲಭೂತ ಸಾಮಗ್ರಿಯನ್ನು ಒದಗಿಸುವ ಸಂಶೋಧಕ ಕಾರ್ಯಸಿದ್ಧಿ ಬೆಳಕಿಗೆ ಬರುವ ತನಕ ಎಲ್ಲ ಪ್ರಸಿದ್ಧಿಯ ಕಾರ್ಯ ಅಪೂರ್ಣವೆ.

ಕುಮಾರವ್ಯಾಸನ ಕಾಲ ವಿಚಾರವು ಕ್ರಿ. ಶ. ೧೨೩೫, ೧೨೪೨ ರಿಂದ ೧೫೦ನೆಯ ಶತಮಾನದ ಉತ್ತರಾರ್ಧದವರೆಗೆ ಎಳೆಯಾಡಲ್ಪಟ್ಟಿದೆ ಶ್ರೀ ಬೆಟಗೇರಿ ಕೃಷ್ಣಶರ್ಮರು ಸಮಗ್ರ ದೃಷ್ಟಿಯಿಂದ ಕೂಲಂಕಷವಾಗಿ ಸಮೀಕ್ಷಿಸಿ ಕವಿಯು ದೋರಸಮುದ್ರದ ಹೊಯ್ಸಳ ಯಾದವರ ಕಾಲಕ್ಕಿದ್ದಿರಬೇಕೆಂದೇ ಅನುಮಾನಿಸಿದ್ದಾರೆ. ಅಂತೂ ಈ ದಿಸೆಯಲ್ಲಿ ಖಚಿತವಾಗಿ ಇಂತಹದೇ ಕಾಲವೆಂದು ಆಂತರಿಕ ಬಾಹ್ಯ ಪ್ರಮಾಣಗಳಿಂದ ಸ್ಪಷ್ಟಪಡಿಸುವದು, ಇಷ್ಟೆಲ್ಲ ಅಭಿಪ್ರಾಯಗಳ ವೈವಿಧ್ಯದ ಮಧ್ಯದಲ್ಲಿ. ಸಾಧ್ಯವಾಗಿಲ್ಲ. ಕುಮಾರವ್ಯಾಸನ ಭಾಷೆ, ಶಬ್ದ ಪ್ರಯೋಗ, ಶೈಲಿ, ಆಂತರಿಕ ಸಂದರ್ಭಗಳನ್ನು ಮನಸಂದು ಶ್ರೀ ಗೋವಿಂದ ಪೈಗಳು ಊಹಿಸಿರುವಂತೆ (ಕ್ರಿ. ಶ. ೧೨೩೫) ಶ್ರೀ ಸ ತ. ಪುರೋಹಿತರು ಬಾಹ್ಯ ಪ್ರಮಾಣಗಳಿಂದ ಸುಮಾರಾಗಿ ಇದೇ ಕಾಲಕ್ಕೆಯೆ ತಮ್ಮ ಅಭಿಪ್ರಾಯವನ್ನು ಬಾಯಲ್ಲಾಡಿಸಿದ್ದಾರೆ. ಶ್ರೀ ಬೆಟಗೇರಿ ಅವರು ಹೊಯ್ಸಳರ ವೀರ ನರಸಿಂಹನ ಕಾಲಕ್ಕೆ, ಆದರೆ ಯಾವುದೆ ರಾಜಾಶ್ರಯವಿಲ್ಲದೆ, ಕುಮಾರವ್ಯಾಸನು ಇದ್ದಿರಬೇಕೆಂದು ಅಭಿಪ್ರಾಯ ಪಡುತ್ತಾರೆ. ಈ ಅಭಿಪ್ರಾಯದ ಮೇರೆಗೆ ಕುಮಾರವ್ಯಾಸನು ಸುಮಾರಾಗಿ ರಾಘವಾಂಕನ ಸುಮ ಸುಮಾರು ಕಾಲದವನೆ ಆಗುತ್ತಾನೆ. ಅಂತೂ ಈ ವಿಚಾರಧಾರೆಗೆ ಇನ್ನೂ ವಿರಾಮ ದೊರೆತಿಲ್ಲ.

ಕುಮಾರವ್ಯಾಸನ ಭಾಷಾ ವಿಚಾರವೂ ಅಷ್ಟೆ. ಅವನು ಬಳಸುವ ವ್ಯಾಕೃತ ಪ್ರಯೋಗಗಳು, ಗ್ರಾಮ್ಯ ಪ್ರಯೋಗಗಳು, ದೇಸಿಯ ಪ್ರಯೋಗಗಳು, ಪಾರಿಭಾಷಿಕ ಪ್ರಯೋಗಗಳು, ನಾಡ ನುಡಿಗಳು, ಲೋಕ್ತಿಗಳು, ಅವನ ವಿಶಿಷ್ಟ ವ್ಯಾಕರಣ, ಅವನ ಸಂಧಿ ಸಮಾಸಗಳು, ಅವನ ತದ್ಭವ–ಕೃದಂತಗಳು ಇವೆಲ್ಲ ಅಂಶಗಳನ್ನೂ ಗಮನಿಸಿ ಕುಮಾರವ್ಯಾಸನ ಭಾಷಾ ಸ್ವರೂಪ ನಿಶ್ಚಯಿ

ಸಲ್ಪಡಬೇಕು. ಅದರಿಂದಲೂ ಅವನ ಕಾಲವನ್ನು ಅಳೆಯಲು ಸಾಧ್ಯವಾಗ ಬಹುದು. ಕುಮಾರವ್ಯಾಸನಿಗಿರುವ ಹಲವಾರು ಶಾಸ್ತ್ರಗಳ ಪಾಂಡಿತ್ಯ ಅವನು ವರ್ಣಿಸುವ ವಾದ್ಯ ವಿಶೇಷಗಳು, ಉಲ್ಲೇಖಿಸುವ ಆಯುಧಗಳು, ಅವನ ಕಲ್ಪನೆಯಲ್ಲಿ ಸೃಷ್ಟಿ ರಚನಾ ಕ್ರಮ, ಭೂಗೋಲ ಖಗೋಲ ವಿಜ್ಞಾನ, ಜ್ಯೋತಿರ್ವಿಜ್ಞಾನ, ಅವನ ಕಣ್ಣಿನಲ್ಲಿ ಛಪ್ಪನ್ನ ದೇಶಗಳು, ಅವುಗಳ ಇಂದಿನ ಭೌಗೋಲಿಕ ವಾಸ್ತವಿಕತೆ, ಕವಿಯ ಪೌರಾಣಿಕ-ವೈದಿಕ ಜ್ಞಾನ, ದಾರ್ಶನಿಕ ದೃಷ್ಟಿ, ಅಧ್ಯಾತ್ಮಿಕ ವಿಚಾರ ಇವುಗಳ ಮೇಲಿಂದ ಕುಮಾರವ್ಯಾಸನ ವ್ಯಕ್ತಿತ್ವದ ಉನ್ನತಿಕೆ-ಇವುಗಳ ಜ್ಞಾನ ಕೋಶಕ್ಕೆಂದು ಸಿದ್ಧವಾಗಬೇಕು.

ಇನ್ನು ಕವಿಯ ಚಾರಿತ್ರಿಕ ಅಂಶಗಳಿಗೆ ಸಂಬಂಧಿಸಿ, ಮುಖ್ಯವಾಗಿ ಅತ ಕೋಳಿವಾಡದ ಶಾನುಭೋಗವಂಶಜನೆ ? ಕೋಳಿವಾಡದಲ್ಲಿ, ಕುರ್ತುಕೋಟಿ ಯ-ಲ್ಲಿ, ಮೇವುಂಡಿಯಲ್ಲಿ, ಮಲ್ಲಿಗೆವಾಡದಲ್ಲಿ, ಬೊರೆಯುವ ಗೌಡರ ಮನೆ ತನದ ಕಾಗದ ಪತ್ರಗಳ ಸಪ್ರಮಾಣಿಕತೆಯು ನಿರ್ಧರಿಸಲ್ಪಡಬೇಕು. ಕವಿಯ ವಂಶಜರು ಶಿವಮೊಗ್ಗೆಯ ಯಗಟಿ ಗ್ರಾಮದಲ್ಲಿಯೂ ಇದ್ದಂತೆ ಕೆಲವು ಕಾಗದ ಪತ್ರಗಳಿಂದ ತಿಳಿದು ಬರುತ್ತದೆ.* ಈ ವಿಷಯವಾಗಿಯೂ ನಿಷ್ಕರ್ಷೆಯಾಗ ಬೇಕು. ಕವಿಯ ವಂಶಾವಳಿ ನಿರ್ಧಾರವಾದರೆ ಕವಿಯ ಮತ, ಕುಲ, ಗೋತ್ರಗಳೂ ನಿರ್ಧಾರಿತವಾಗುವುವು. ಕವಿ ಯೋಗೀಂದ್ರನೆಂದರೆ ಯತಿ ಯಾಗಿದ್ದನೆ ? ಇಲ್ಲವೆ ಗೃಹಸ್ಥನಾಗಿದ್ದು ವಾನಪ್ರಸ್ಥಾಶ್ರಮದ ಹೊತ್ತಿಗೆ ಯೋಗೀಂದ್ರನೆಂದು ಕರೆಯಿಸಿಕೊಂಡನೆ ? ಇವನು ಸ್ಮಾರ್ತನೆ, ಮಾಧ್ವನೆ, ಭಾಗವತ ಸಂಪ್ರದಾಯದವನೆ ? ಇದೆಲ್ಲ ನಿಷ್ಕರ್ಷೆಯಾಗಬೇಕು, ನಿಜ. ಅವನ 'ಹಣೆಯ ಮೇಲೆ ಯಾವ ಚಿಹ್ನವಿದ್ದರೇನು? ಈ ಕವಿ ನಮ್ಮವನು'! ಆದರೂ ಐತಿಹಾಸಿಕ ಜಿಜ್ಞಾಸೆಗೆ ಕವಿಯ ಮತವಿಚಾರ ಬೇಕಾದೀತು. ಕೋಳಿವಾಡ ಗ್ರಾಮವನ್ನು ಚಿನ್ನದ ಕೈ ವಾಧವರಸನು ಕೊಂಡು ಕೊಂಡನೆ ? ಕುಮಾರ-ವ್ಯಾಸನ ವಂಶದ ಮೂಲ ಪುರುಷ ಈತ ಹೌದೆ ? ಕೋಳಿವಾಡದ ಕಾಗದ ಪತ್ರದಲ್ಲಿ ಲಿಖಿತವಾಗಿರುವಂತೆ ಈತನು ರಾಜಾ ನರಸಿಂಗರಾಯನಲ್ಲಿ ದಂಡಾ

* ಯಗಟಿ ವಂಶಜರಾದ ಶ್ರೀ ಬಿ. ಎಸ್. ಲಕ್ಷ್ಮೀನಾರಾಯಣ ಅವರು ನನಗೆ ಇಲ್ಲಿಯ ವಂಶಾವಳಿಯ ಒಂದು ಪ್ರತಿಯನ್ನು ಅಭ್ಯಾಸಕ್ಕಾಗಿ ನೀಡಿದ್ದಾರೆ.

ಳುವೂ ಅಂಗರಕ್ಷಕನೂ ಆಗಿದ್ದನು. ಆ ಕಾಲಕ್ಕೆ ಸಾಳೋ ವೆಂಕಟಪತಿ ಎಂಬವನು ಮಂತ್ರಿಯಾಗಿದ್ದನು. ಎಂದರೆ ಯಾವ ಅಳಿಯರಸರ ಕಾಲ ? 'ಈ ಕಾಲದಲ್ಲಿ ಹೊಯ್ಸಳರು ಕನ್ನಡ ನಾಡನ್ನು ಆಳುತ್ತಿದ್ದುದು ಇತಿಹಾಸದಿಂದ ತಿಳಿಯುವದು' ಎಂದು ಶ್ರೀ. ನ. ತ ಪುರೋಹಿತರು ತಮ್ಮ 'ಕುಮಾರವ್ಯಾಸ ಕವಿಯ ಕಾಲದರ್ಶನ' ಎಂಬ ಚಿಕ್ಕ ಹೊತ್ತಗೆಯಲ್ಲಿ (ಪುಟ 13) ವಿವರಿಸಿದ್ದಾರೆ. ಆದರೆ ಕೋಳಿವಾಡದ ಕೆಲವು ಕಾಗದ ಪತ್ರಗಳ ಪ್ರಕಾರ ಸಾಳುವ ವೆಂಕಟ ರಾಯನು ವಿಜಯನಗರದ ನರಸಿಂಗರಾಯನ ಮಂತ್ರಿಯಾಗಿದ್ದನೆಂದೂ ಹುಣಸಿಗೆ ದೇವಲಾಪುರದ ಚಿನ್ನದ ಕೈ ಮಾಧವರಸನು ನರಸಿಂಗರಾಯನ ಮುಖ್ಯ ದಂಡಾಳುವೂ ಅಂಗರಕ್ಷಕನೂ ಆಗಿದ್ದನೆಂದು ತಿಳಿದು ಬರುತ್ತದೆ. ಹೀಗಿರುವಾಗ ವೀರ ನಾರಾಯಣಗೌಡನಿಗೆ ಸಂಬಂಧಿಸಿದ ಕಾಗದ ಪತ್ರಗಳ ಸಪ್ರಮಾಣಿಕತೆಯು ಸಂಶಯಾಸ್ಪದವಾಗಿ ಉಳಿಯುತ್ತದೆ. ಆದ್ದರಿಂದ ಶ್ರೀ ನ. ತ. ಪುರೋಹಿತರು ಕವಿಯ ಕಾಲದ ಬಗ್ಗೆ ವ್ಯಕ್ತ ಪಡಿಸಿರುವ ಅಭಿ ಪ್ರಾಯವು ಖಚಿತವೆನಿಸಲಾರದು. ಕವಿಯ ಕಾಲ ನಿರ್ಣಯದ ಬಗ್ಗೆ ಇನ್ನುಳಿದ ಸಂಶೋಧಕರು ಈ ದಿಸೆಯಲ್ಲಿ ತಾಳಿದ ನಿಲುವನ್ನು ನಿರ್ದಿಷ್ಟ ಪಡಿಸುವದೂ ಅಗತ್ಯವೆನಿಸುತ್ತದೆ.

ಕವಿಯ ಬಗ್ಗೆ ಜ್ಞಾನಕೋಶ, ಭಾಷಾಕೋಶಗಳು ಹಾಗು ಚಾರಿತ್ರಿಕ, ಕಾಲ ನಿರ್ಣಯ ವಿಷಯಗಳ ಬಗ್ಗೆ ಆಗಬೇಕಾದ ಕಾರ್ಯವನ್ನು ಕುರಿತು ನಿವೇದಿಸಿಕೊಂಡ ಮೇಲೆ ಕುಮಾರವ್ಯಾಸ ಭಾರತದ ಒಂದು ಅಧಿಕೃತ ಆವೃತ್ತಿಯ ವಿಷಯವಾಗಿ ಒಂದೆರಡು ವಿಚಾರಗಳನ್ನು ಸಂಶೋಧಕರ, ವಿದ್ವಾಂಸರ ಅವಗಾಹನೆಗಾಗಿ ಮಂಡಿಸಬಹುದಾಗಿದೆ.

ಆಚ್ಚಾದ ಕುಮಾರವ್ಯಾಸನ 'ಭಾರತ ಕಥಾಮಂಜರಿ' ಸರಾಸರಿ ೧೦,೦೦೦ ಪದ್ಯಗಳುಳ್ಳದ್ದಾಗಿದೆಯೆಂದು ಸ್ಥೂಲವಾಗಿ ಹೇಳಬಹುದು. ಆಚ್ಚಾದ ವೀರ ಹಳೆಯ ಶೆಟ್ಟರ ಪ್ರತಿಯಲ್ಲಿ ತಿಮ್ಮಣ್ಣ ಕವಿಯ ಅಷ್ಟ ಪರ್ವ ಗಳೂ ಸೇರಿವೆ. ತಿಮ್ಮಣ್ಣ ಕವಿಯ ಅಷ್ಟ ಪರ್ವಗಳಲ್ಲಿ ಸ್ತ್ರೀ ಪರ್ವ, (ಈ

ಪರ್ವವನ್ನು ಬರೆದವನು ತಿಮ್ಮಣ ಕವಿಯಲ್ಲ. ಇದನ್ನು ಬರೆದವನು 'ಶ್ರೀನಿವಾಸ ಕವಿ' [ಕ್ರಿ. ಶ. ೧೭೦೦] ಎಂದು ತಿಳಿಯಬಹುದು. ಶಾಂತಿ ಪರ್ವ, ಅನುಶಾಸನ ಪರ್ವ, ಅಶ್ವಮೇಧ ಪರ್ವ, ಆಶ್ರಮವಾಸ ಪರ್ವ, ಮೌಸಲ ಪರ್ವ, ಮಹಾಪ್ರಸ್ಥಾನ ಪರ್ವ, ಹಾಗೂ ಸ್ವರ್ಗಾರೋಹಣ ಪರ್ವ ಎಂದು ಎಂಟು ಪರ್ವಗಳು ೪೪ ಸಂಧಿಗಳಲ್ಲಿ ವ್ಯಾಪಿಸಿವೆ. ಒಟ್ಟಾ ಪದ್ಯಗಳ ಸಂಖ್ಯೆ ಸ್ತ್ರೀ ಪರ್ವದ ೨೧೪ ಪದ್ಯೆಗಳನ್ನು ಕೂಡಿ, ೩.೯೫೨. ಹಳೆಯ ಆವೃತ್ತಿಯ ಈ ಪದ್ಯಗಳು ಗದ್ಯ ಬರವಣಿಗೆಯಂತೆ ಉದ್ದಕ್ಕೆ ಓಡುತ್ತವೆ. ಭಾರತ ಕಥಾಮಂಜರಿ ಹಾಗೂ ಉಳಿವ ಅಪ್ಪ ಪರ್ವಗಳು ಸೇರಿ ಈ ಆವೃತ್ತಿಯಲ್ಲಿ ಅಂದಾಜು ೧೨೦೦೦ ಪದ್ಯಗಳಿರಹುದು.

೧೯೧೨ ರಲ್ಲಿ ಆದಿ ಪರ್ವದಿಂದ ಆರಂಭಿಸಿ ೧೯೪೩ ರಲ್ಲಿ ಶಲ್ಯ-ಗದಾ ಪರ್ವಗಳವರೆಗೆ ಕುಮಾರವ್ಯಾಸನ ಪೂರ್ಣ ಕಾವ್ಯವನ್ನು ಪರಿಷ್ಕರಿಸಿ ಸಂಪಾದಿಸಿ ಹತ್ತು ಸಂಪುಟಗಳಲ್ಲಿ ಹೊರತಂದ ಮೈಸೂರ ಓರಿಯಂಟಲ ಸಂಶೋಧನ ಇಲಾಖೆಯವರ ಪ್ರಾಚ್ಯ ಕೋಶಾಗಾರದ ಸಂಶೋಧನ ಪ್ರಕಟಣೆಯು ಆ ಕಾಲಕ್ಕೆ ಒಂದು ಸಪ್ರಮಾಣ ಆವೃತ್ತಿಯೆನಿಸಿ ಆಕರ್ಷಕವೆನಿಸಿತು: ಆದರೆ ಇವರಲ್ಲಿ ಬಂದ ಏಷ್ಟೋ ಹೆಚ್ಚಿನ ಪದ್ಯಗಳು ಕುಮಾರವ್ಯಾಸ ಕರ್ತೃಕ ಅಹುದೆ ಅಲ್ಲವೆ ಎಂಬ ಸಂದೇಹಕ್ಕೆ ಅವಕಾಶ ಮಾಡಿಕೊಟ್ಟಿತು. ಈ ಓರಿಯಂಟಲ ಲೈಬ್ರರಿ ಇಲಾಖೆಯ ಸಂಶೋಧಕರಿಗೆ ದೊರೆತ ತಾಳೆಯ ಗರಿಯ ಹಸ್ತಪ್ರತಿಗಳಲ್ಲಿ ಅತ್ಯಂತ ಹಳೆಯ ಪ್ರತಿಯು ಕ್ರಿ.ಶ. ೧೫೫೪ಕ್ಕಿಂತ ಹಿಂದಿದ್ದುದು ಒಂದು ಮಹತ್ವದ ವಿಷಯ. ಇದನ್ನು ಪ್ರಾಚ್ಯ ಕೋಶಾಗಾರದವರು 'ಕ' ಪ್ರತಿಯೆಂದು ಕರೆದಿದ್ದಾರೆ. ("ಕೋಶಾಗಾರದ ಪ್ರತಿಗಳಲ್ಲಿ (ಕ) ಇದು ಕೈಬರಹದ ಕೆ. ೨೦೫ ನೆಯ ನಂಬರಿನ ಪ್ರತಿ. ಕ್ರಿ.ಶ. ೧೫೫೪ಕ್ಕಿಂತ ಹಿಂದಿನ ಪ್ರತಿಯಾಗಿದ್ದು. ಇದು ವ ಗೆ ನಮಗೆ ದೊರೆತಿರುವ ಕನ್ನಡ ಮಹಾಭಾರತ ಕೈಬರಹದ ಪ್ರತಿಗಳಲ್ಲಿ ಇದೇ ಅತ್ಯಂತ ಪ್ರಾಚೀನವಾದುದು"- 'ಕರ್ಣಪರ್ವ'ದ ಮುನ್ನುಡಿ ಪುಟ iv ೧೯೪೦ ರ ಆವೃತ್ತಿ). ಈ ಪ್ರಾಚ್ಯಕೋಶಾಗಾರದ ಆವೃತ್ತಿಯು ಹತ್ತು ಸಂಪುಟಗಳಲ್ಲಿ (ಪೌಲೋಮ–ಆಸ್ತಿಕ ಪರ್ವದ ಸಂಪುಟವನ್ನು ಬಿಟ್ಟು) ಹೊರ ಬಂದಿದ್ದು ಪ್ರತಿ ಸಂಪುಟದ ಸಂಧಿಗಳ ಸಂಖ್ಯೆ ಈ ರೀತಿಯಾಗಿದೆ.

೧.	ಆದಿಪರ್ವ	೩೭ ಸಂಧಿಗಳು	೨೫೬೮ ಪದ್ಯಗಳು (೧೬೫ರಷ್ಟು ಪರಿಶಿಷ್ಟ ಪದ್ಯಗಳನ್ನು ಬಿಟ್ಟು)
೨.	ಸಭಾಪರ್ವ	೧೭ ಸಂಧಿಗಳು	೧೨೭೪ ಪದ್ಯಗಳು
೩.	ಅರಣ್ಯಪರ್ವ	೨೬ ಸಂಧಿಗಳು	೧೫೯೨ ಪದ್ಯಗಳು
೪.	ವಿರಾಟಪರ್ವ	೧೧ ಸಂಧಿಗಳು	೭೭೩ ಪದ್ಯಗಳು
೫.	ಉದ್ಯೋಗಪರ್ವ	೧೨ ಸಂಧಿಗಳು	೭೧೩ ಪದ್ಯಗಳು
೬.	ಭೀಷ್ಮಪರ್ವ	೧೦ ಸಂಧಿಗಳು	೫೭೯ ಪದ್ಯಗಳು
೭.	ದ್ರೋಣಪರ್ವ	೧೯ ಸಂಧಿಗಳು	೧೧೨೮ ಪದ್ಯಗಳು + (೧೦೨ ಪರಿಶಿಷ್ಟ ಪದ್ಯಗಳು)
೮.	ಕರ್ಣಪರ್ವ	೨೭ ಸಂಧಿಗಳು	೧೧೫೬ ಪದ್ಯಗಳು + (೭೫ ಪರಿಶಿಷ್ಟ ಪದ್ಯಗಳು)
೯.	ಶಲ್ಯಪರ್ವ	೩ ಸಂಧಿಗಳು	೧೭೫ ಪದ್ಯಗಳು
೧೦.	ಗದಾಪರ್ವ	೧೨ ಸಂಧಿಗಳು	೫೮೯ ಪದ್ಯಗಳು

ಒಟ್ಟು ೧೭೪ ಸಂಧಿಗಳು ೧೦,೧೪೭ ಪದ್ಯಗಳು+೩೪೨ ಪರಿಶಿಷ್ಟ ಪದ್ಯಗಳು=೧೦,೪೮೯

ಅಂತೂ ಸರಾಸರಿ ೧೦,೫೦೦ ಪದ್ಯಗಳು.

ಈ ಸುಮಾರು ೧೦೫೦೦ ಪದ್ಯಗಳಲ್ಲಿ ಪ್ರಕ್ಷಿಪ್ತ ಪದ್ಯಗಳೆಷ್ಟು, ಸರಿಯಾದ ಪಾಠಾಂತರಗಳು ಯಾವವು ಎಂಬುದು ನಿರ್ಧಾರವಾಗಬೇಕು. ಹೆಚ್ಚಾಗಿ ಆದಿಪರ್ವದಲ್ಲಿ ಅರಣ್ಯ ಪರ್ವದಲ್ಲಿ ಈ ಪ್ರಕ್ಷಿಪ್ತ ಪದ್ಯಗಳು ದೊರಕುತ್ತವೆ. 'ಈಗ ಮುದ್ರಿಸಿರುವ ಪಾಠಕ್ರಮದಲ್ಲಿ ಸೇರಿದ ಮತ್ಸ್ಯೋದ್ಭವತಾರ ಚರಿತ್ರ ಭಾಗವು ಮತ್ತು ಐರಾವತವ ಕಥೆಯು ಸಂಸ್ಕೃತ ಮೂಲ ಭಾರತದಲ್ಲಿ ಇಲ್ಲವಾದುದರಿಂದ ಈ ಭಾಗದ ಗ್ರಂಥಗಳು ಕುಮಾರವ್ಯಾಸ ಕೃತಿಯಲ್ಲಿ ಸೇರಲರ್ಹವೆ ಅಲ್ಲವೆ ? ಎಂಬುದು ವಿಚಾರಕ್ಕೆ ತಕ್ಕ ವಿಷಯವಾಗಿದೆ' ಎಂಬ ಸಂಪಾದಕರ ಉಕ್ತಿ (ಆದಿಪರ್ವದ 'ಅವತರಣಿಕೆ' ಪುಟ viii) ವಿಮರ್ಶಾರ್ಹವಾಗಿದೆ.

ಕುಮಾರವ್ಯಾಸನು ಭಾಗವತ ಧರ್ಮಕ್ಕನುಸಾರವಾಗಿ ನಡೆದುಕೊಂಡಿರುವುದು ಅವನ ಕಾವ್ಯದಲ್ಲಿ ಕಂಡು ಬರುತ್ತದೆ, ಆದರೆ ಆತ ಮಧ್ವಮತೀಯ ದೃಷ್ಟಿಯನ್ನು ತೋರಿರಲಾರ. ಕೃಷ್ಣ ಭಕ್ತಿಯನ್ನು, ಕೃಷ್ಣ ಕಥೆಯನ್ನು, ಕೃಷ್ಣ ಮಹಾತ್ಮೆಯನ್ನು ಬಣ್ಣಿಸಿರುವ ಆತನ ಕಾವ್ಯದಲ್ಲಲ್ಲಿ ಮಧ್ವಮತದ ವೈಶಿಷ್ಟ್ಯಗಳನ್ನು, ತಾರತಮ್ಯ ಭಾವವನ್ನು, ಮುಖ್ಯಪ್ರಾಣ-ಭಾರತೀ ತತ್ವವನ್ನು ಸೂಚಿಸುವಂತಹ ಅನೇಕಾನೇಕ ಪ್ರಕ್ಷಿಪ್ತ ಪದ್ಯಗಳನ್ನು ನಾವು ಕಾಣುತ್ತೇವೆ. ಕಾವ್ಯದ ಓಲಿಗರಿಯ ಪ್ರತಿಯನ್ನು ತಯಾರಿಸುವವರೆ ನಡುನಡುವೆ ಸ್ವಕಪೋಲ ಕಲ್ಪಿತವಾದ ರಚನೆಗಳನ್ನು ಸೇರಿಸಿರುವುದು ಸಾಧ್ಯವಿದೆ

ವಂದಿತಾಮಳ ಚರಿತನಮರಾ
ನಂದ ಯದುಕುಲ ಚಕ್ರವರ್ತಿಯ
ಕಂದ ನತ ಸಂಸಾರಕಾನನಘನದವಾನಳನು
ನಂದ ನಂದನ ಸನ್ನಿಭನು ಸಾ
ನಂದದಿಂದವೆ ನಮ್ಮವನು ಕೃಪೆ
ಯಿಂದ ಸಲಹುಗೆ ದೇವ ಜಗದಾರಾಧ್ಯ ಗುರುರಾಯ ॥

ಎಂಬ ಮೇಲಿನ ಪದ್ಯದ 'ಜಗದಾರಾಧ್ಯ ಗುರುರಾಯ' ಎಂಬ ಸಂಬೋಧನೆ ಶ್ರೀಮಧ್ವಾಚಾರ್ಯರಿಗೆ ಸಂಬಂಧಿಸಿದೆ ಎಂದು ಕೆಲವರ ಅಭಿಪ್ರಾಯ. ಇದು ಕವಿ ಮಾಧ್ವನಿರಬೇಕೆಂದು ನಿರ್ಧರಿಸಿ ಹೊರಟಿರುವ ಗಡಿಬಿಡಿಯ ಊಹೆಯೆನಿಸುತ್ತದೆ.

ಒರಿಯಂಟಲ್ ಆವೃತ್ತಿಯ ಆದಿಪರ್ವದ ೩ನೆಯ ಸಂಧಿಯಿಂದ ಹದಿಮೂರನೆಯ ಸಂಧಿಯ ಪರ್ಯಂತ, ಎಂದರೆ ಸುಮಾರು ೭೦೦ ಪದ್ಯಗಳು ಕುಮಾರವ್ಯಾಸನವಾಗಿರಲ್ಲಾರವು ಎಂಬ ಅಭಿಪ್ರಾಯವಿದೆ. ಮೂಲ ಮಹಾಭಾರತದಲ್ಲಿಲ್ಲದ ದಶಾವತಾರದ ಕಥೆಗೆ ಸಂಬಂಧಿಸಿ ನಿರೂಪಣೆಯಿದೆ. ಇದರಲ್ಲಿ ಜನಮೇಜಯನ ಪೂರ್ವಿಕರ ವೃತ್ತಾಂತ, ಅಷ್ಟವಸುಗಳ ಪೂರ್ವಾಪರ ಕಥೆ, ಸತ್ಯವತಿಯ ಕೌಮಾರ್ಯ ಕಥೆ, ವೇದವ್ಯಾಸರ ಜನನ ಇವೆಲ್ಲವೂ

ಮುಂಚೆ ಮೈಸೂರು ಸರಕಾರದ ಸಾಹಿತ್ಯ-ಸಂಸ್ಕೃತಿ ಅಭಿವೃದ್ಧಿ ಇಲಾಖೆಯ ಎರಡು ರೂಪಾಯಿ ಆವೃತ್ತಿಯಲ್ಲಿ ಆದಿಪರ್ವದ ಎರಡನೆಯ ಸಂಧಿಯಲ್ಲಿಯೇ ಸಂಕ್ಷಿಪ್ತವಾಗಿ ಬಂದಿವೆ. ಇದೇ ಕ್ರಮವನ್ನೇ ೧೯೭೧ ರ ಮೈಸೂರು ಆಧ್ಯಯನ ಸಂಸ್ಥೆಯ ಆವೃತ್ತಿಯಲ್ಲೂ ಅನುಸರಿಸಲಾಗಿದೆ.

ಓರಿಯಂಟಲ್ ಆವೃತ್ತಿಯಲ್ಲಿ ಕ-ಖ-ಗ-ಘ-ಚ-ಛ-ಜ-ಝ-ಟ ಎಂಬ ಒಂಬತ್ತು ಹಸ್ತಪ್ರತಿಗಳ ಪರಿಶೀಲನೆಯ ಫಲ ಕಂಡುಬರುತ್ತಿದೆ. ತತ್ಪೂರ್ವಕ ಬೆಂಗಳೂರು-ಮಂಗಳೂರುಗಳ ಮುದ್ರಣದ ಆವೃತ್ತಿಯಲ್ಲಿ ಕುಮಾರವ್ಯಾಸನ ಕಾವ್ಯವು ಅಸಮಗ್ರವೇದು ಅವರಿಗೆ ಕಂಡುಬಂದಿದೆ. ಆದಿಪರ್ವವೊಂದರಲ್ಲಿಯೆ ೩೫ ಸಂಧಿಗಳಷ್ಟು ಹೆಚ್ಚಿನ ಪದ್ಯಗಳು ದೊರೆತಿದ್ದರೆ ಸಭಾಪರ್ವದಿಂದ ಮುಂದೆ ಸಂಧಿ ಸಂಧಿಗೂ ಹೆಚ್ಚಿನ ಪದ್ಯಗಳು ಲಭ್ಯವಾಗಿವೆ. ಇದು ನಿಜ, ಆದರೆ ಕಾವ್ಯದ ಗಾತ್ರ ಹೆಚ್ಚಾಯಿತೆಂದು ಪ್ರಕ್ಷಿಪ್ತ ಪದ್ಯಗಳು ಲಕ್ಷಿತವಾಗದೆ ಉಳಿದಿರುವುದು ಸಂಶೋಧನ ದೃಷ್ಟಿಗೆ ಸಮರ್ಪಕವಾಗಿ ತೋರುವುದಿಲ್ಲ. ಅಂತೆಯೆ ಮುಂದೆ ೧೯೫೮ರ ಆಭಿವೃದ್ಧಿ ಇಲಾಖೆಯ ಆವೃತ್ತಿಯಲ್ಲಿ ಪದ್ಯಗಳನ್ನು ಸಾಕಷ್ಟು ಪ್ರಮಾಣದಲ್ಲಿ edit ಮಾಡಿರುವುದು ಕಂಡು ಬರುತ್ತದೆ. ಮುಂದೆ ೧೯೬೬ ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಆಧ್ಯಯನ ಸಂಸ್ಥೆಯಲ್ಲಿ ಪ್ರಾಚ್ಯ ಸಂಶೋಧನಾಲಯದ ಕನ್ನಡ ವಿಭಾಗವು ವಿಲೀನವಾದ ಮೇಲೆ ೧೯೭೧ ರಿಂದ ಆದಿಪರ್ವಾದಿಯಾಗಿ ಗದಾಪರ್ವದ ವರೆಗೆ ಕಾಲ ಕ್ರಮದಲ್ಲಿ ಸಂಪಾದಿತವಾಗಿ ಹೊರಬಂದ ನವೀನ ಆವೃತ್ತಿಗಳಲ್ಲಿ ಒಂದು ವ್ಯವಸ್ಥಿತ ಪಠ್ಯಭಾಗ ಅಳವಡುವಂತಾಯಿತು. ಆದರೆ ಕವಿಯ ಸ್ವಂತದ ರಚನೆಯ ಗಾತ್ರವೆಷ್ಟು, ಪ್ರಕ್ಷಿಪ್ತಗಳೆಷ್ಟು ಎಂಬ ಬಗ್ಗೆ ಈ ಆವೃತ್ತಿಯಲ್ಲಿಯೂ ವಿಮರ್ಶಾತ್ಮಕ ವಿವೇಚನೆ ಬಂದಿಲ್ಲ. ಒಂದೊಂದು ಪರ್ವವನ್ನೂ ಒಬ್ಬೊಬ್ಬ ವಿದ್ವಾಂಸರು ಸಂಪಾದಿಸಿದುದರ ಫಲವಾಗಿ ವಿಕೃದೃಷ್ಟಿಯ ಸಮನ್ವಯತೆ ಹಾಗು ಸಮಗ್ರತೆ ಇಲ್ಲಿ ಲುಪ್ತವೆನಿಸುತ್ತದೆ. ಒಬ್ಬೊಬ್ಬ ಸಂಪಾದಕರೂ ಕವಿ-ಕಾವ್ಯ ಪರಿಚಯ, ಕಥಾ ಸಾರಾಂಶಗಳನ್ನು ಕೊಟ್ಟು ಪಾಠಕನಿಗೆ ಸಹಾಯಕ ಸಾಮಗ್ರಿಯನ್ನೇನೊ ಒದಗಿಸಿದ್ದಾರೆ. ಆದರೆ ಪುನರುಕ್ತಿಯೂ ಆಗಿವೆ. ಕವಿಯ ಕಾಲವನ್ನು ಖಚಿತವಾಗಿ ಕಂಡು ಹಿಡಿಯುವಲ್ಲಿ ಆಗಲಿ,

ಕವಿಯ ವಂಶಾವಳಿ-ಚಾರಿತ್ರಿಕ ವಿಷಯದಲ್ಲಾಗಲಿ ಕಾವ್ಯದಲ್ಲಿ ನುಸುಳಿದ ಪ್ರಕ್ಷಿಪ್ತ ಪದ್ಯಗಳ ಬಗ್ಗೆ ಆಗಲಿ ಹೆಚ್ಚಿನ ವಿವರಗಳನ್ನೂ ನೀಡಿರುವುದಿಲ್ಲ. ಶ್ರೀ ಕೆ. ಆರ್. ಶೇಷಗಿರಿ ಅವರು ಸಂಪಾದಿಸಿರುವ ಆದಿಪರ್ವಭಾಗದ ಪೀಠಿಕೆ ಕವಿಯ ಕಾಲದ ಬಗ್ಗೆ, ಮೂಲ ಮಹಾಭಾರತದಿಂದಾದ ವ್ಯತ್ಯಾಸಗಳ ಬಗ್ಗೆ, ಮುಖ್ಯವಾಗಿ ಸಂಪಾದಕೀಯ ಪರಿಷ್ಕರಣದ ಮುಖ್ಯ ಕಾರ್ಯದ ಬಗ್ಗೆ ಸಾಕಷ್ಟು ಸಾಮಗ್ರಿಯನ್ನು ಒದಗಿಸುತ್ತದೆ ಎಂಬ ಅಂಶವನ್ನು ಇಲ್ಲಿ ನೆನೆಯಬೇಕು. ಆದಿಪರ್ವದ ಮಟ್ಟಿಗೆ ಇವರು ೧೭ ಮೂಲ ಹಸ್ತಪ್ರತಿಗಳನ್ನು ಪರಿಶೀಲಿಸಿದ್ದು 'ದ' ಪ್ರತಿಯಲ್ಲಿ ೩೧೧೬ ಪದ್ಯಗಳೂ 'ಗ' ಪ್ರತಿಯಲ್ಲಿ ೩೮೯೦ ಪದ್ಯಗಳೂ ಇವೆಯೆಂದು ಕೊಟ್ಟಿದ್ದಾರೆ. 'ಗ' ಪ್ರತಿಯನ್ನು ತಯಾರಿಸಿದ ಕಾಲ ಕ್ರಿ. ಶ. ೧೮೪೧ ಇದ್ದರೆ 'ದ' ಪ್ರತಿಯನ್ನು ತಯಾರಿಸಿದ ಕಾಲ ಸಿಕ್ಕಿಲ್ಲ. ಇಲ್ಲಿಯೂ 'ಕ' ಪ್ರತಿಯನ್ನು ತಯಾರಿಸಿದ ಹೆರಗಿನ ನಂಜಯ್ಯನ ಕಾಲ ಕ್ರಿ. ಶ. ೧೫೫೪ ಇದೆ. ಇದುವರೆಗೆ ಇದೇ ಅತ್ಯಂತ ಪ್ರಾಚೀನವಾದ ಹಸ್ತ ಪ್ರತಿಯಾಗಿದೆ. ಈತನ ಪ್ರತಿಯನ್ನೆ ಓರಿಯಂಟಲ್ ಆವೃತ್ತಿಯಲ್ಲೂ ಬಳಸಿಕೊಂಡಂತಿದೆ. ನಕಲಿನ ಕೊನೆಯಲ್ಲಿ ನಂಜಯ್ಯನು ಹೇಳಿರುವ ಮಾತುಗಳು ಕಾವ್ಯದ ಗಾತ್ರದ ಬಗ್ಗೆಯೂ ಕಲ್ಪನೆ ನೀಡುತ್ತವೆ.

"ಅಂತು ಸಂಧಿ ೧೩ ಪದ ೬೨೧ ಕಂ ಗದಾಪರ್ವ ಸಮಾಪ್ತ ಮಂಗಳ ಮಹಾ ಶ್ರೀ....ತು ವರ್ತಮಾನ ಆನಂದ ಸಂವತ್ಸರದ ಶ್ರಾವಣ ಬ ಸೌಮ್ಯ ವಾರದಲ್ಲೂ ಸಾಲಿಗ್ರಾಮದ ಚಿಕ್ಕ ದೇವರಸರ ಮಕ್ಕಳು ಬೋಧಾಯನ ಸೂತ್ರ ಶ್ರೀ ವತ್ಸ ಗೋತ್ರ.... ಹೆರಗಿನ ನಂಜಯ್ಯ.... ಪರ್ವ ೧ ಕ್ಕೆ ಸಂಧಿ ೧೯ ಕ್ಕೆ ಪದ ೯೪೦. ಸಭಾಪರ್ವ ೨ ಕಂ ಸಂಧಿ ೧೬ ಕ್ಕೆ ಪದ ಸಾ ೧೧೫೫. ಆರಣ್ಯ ಪರ್ವ ೩ ಕಂ ಸಂಧಿ ೨೧ ಕಂ ಪದ ಸಾ ೧೧೪೨. ವಿರಾಟಪರ್ವ...ಭೀಷ್ಮ ಪರ್ವ ೬ ಕಂ ಸಂಧಿ ೧೦ ಕ್ಕೆ ೫೪೦, ದ್ರೋಣಪರ್ವ ೭ ಕ್ಕೆ ಸಂಧಿ ೧೯ ಕ್ಕೆ ಪದ ೧೧೭೫ ಕಂ. ಕರ್ಣಪರ್ವ ೮ ಕ್ಕೆ ಸಂಧಿ ೭೬ ಕ್ಕೆ ಪದ ೧೧೫೨, ಶಲ್ಯಪರ್ವವು ೯ ಕ್ಕೆ ಸಂಧಿ ೩ ಕ್ಕೆ ದಶ ಪರ್ವವು ೧೦ ಕ್ಕೆ ಸಂಧಿ ೧೪೭ ಕಂ ಪದ ಸಾ ೭೯೭ಗೆ ಕಂ ಶುಭಮಸ್ತು, ಶ್ರೀ ನಾರಾಯಣಾರ್ಪಿತವಸ್ತು ಮಂಗಳ ಮಹಾ ಶ್ರೀ" (ಆದಿ ಪರ್ವ ಮೈಸೂರು ಅಧ್ಯಯನ ಸಂಸ್ಥೆಯ ಆವೃತ್ತಿ, ಪೀಠಿಕೆ ಪುಟ XXXXIX).

ಎಂದರೆ ನಂಜಯ್ಯನ ನಕಲಿನ ಪ್ರಕಾರ ದಶಪರ್ವಗಳಲ್ಲಿಯ ಒಟ್ಟು ಸಂಧಿಗಳು ೧೪೭ ಹಾಗು ಪದ್ಯಗಳ ಸಂಖ್ಯೆ ೭೯೧೧ ಎಂದು ಸ್ಪಷ್ಟವಾಗುತ್ತದೆ. ಆದರೆ ನಾವು ಪರಿಶೀಲಿಸಿದ ಮೇರೆಗೆ ಓರಿಯಂಟಲ್ ಆವೃತ್ತಿಯ ಪ್ರಕಾರ ೧೭೪ ಸಂಧಿಗಳು ಹಾಗು ೧೦,೪೮೯ ಪದ್ಯಗಳು.

ಓರಿಯಂಟಲ್ ಆವೃತ್ತಿಯ ಜತುಗೃಹಾದಿ ಪರ್ವಗಳುಳ್ಳ ಆದಿಪರ್ವದ ಉತ್ತರಾರ್ಧದಲ್ಲಿ ದಶಾವತಾರಗಳಲ್ಲಿ ಒಂದಾದ ಪರುಶುರಾಮ ಕಥೆಯನ್ನು ಹೇಳಲಾಗಿದೆ. ೨೪ನೆಯ ಸಂಧಿಯಲ್ಲಿ ಅರ್ಜುನನಿಗೂ ಅಂಗಾರವರ್ಣನಿಗೂ ಸ್ನೇಹವಾದ ಬಳಿಕ ಅಂಗಾರವರ್ಣನು ಪಾಂಡವರಿಗೆ ಪರಶುರಾಮನ ಕಥೆಯನ್ನು ವಿಸ್ತರಿಸುತ್ತಾನೆ. ಮುಂದೆ ೨೬ ನೆಯ ಸಂಧಿಯ ೧೨೯ ಪದ್ಯಗಳಲ್ಲಿ ಈ ಕಥೆ ಬೆಳೆದು ನಿಂತಿದೆ. ೨೫ನೆಯ ಸಂಧಿಯ ವಶಿಷ್ಠ, ಜಮದಗ್ನಿಗಳ ಕಥೆಯನ್ನೂ ಮೂಲದ ತೌಲನಿಕ ಅಭ್ಯಾಸದ ದೃಷ್ಟಿಯಿಂದ ಪರಿಶೀಲನಾರ್ಹವಾಗಿದೆ.

ಆದಿ ಪರ್ವದ ೧೫ನೆಯ ಸಂಧಿಯಲ್ಲಿ ಭೀಮನ ಜನನದ ವರ್ಣನೆ ಹೀಗಿದೆ :

ಎಂದು ಬಳಿಕರವಿಂದಲೋಚನೆ
ಯಂದು ಸಾಕ್ಷಾದ್ದೇವ ಘಧ್ವರ —
ತಂದೆಯನು ರಜಗುಣದ ಮುಖ್ಯ ಪ್ರಾಣದೇವನನು !
ಇಂದು ಮುಖಿವರ ಮಂತ್ರದಿಂದವೆ
ಕಂದೆರೆದು ಕಳುಹಿದಳು—

ಈ ಪದ್ಯವು ಪ್ರಾಚ್ಯ ಕೋಶಾಗಾರದ 'ಜ' 'ಘ' ಎಂಬ ತಾಳ ಪ್ರತಿಗಳಲ್ಲಿದೆಯೆಂದು ಸಂಪಾದಕರು ಹೇಳುತ್ತಾರೆ. ಸಾಕ್ಷಾದ್ದೇವಘಧ್ವರ ತಂದೆ ಎಂಬ ಪ್ರಯೋಗವು ಕವಿಮಾಧ್ವನೆಂದು ತೋರಿಸಲು ಹೊರಟಂತಿದೆ. ಆದಿ ಪರ್ವದ ೮ನೆಯ ಸಂಧಿಯಲ್ಲಿ ನರಸಿಂಹ ಅವತಾರದ ಕಥೆಯಿರುವುದೂ ಪರಿಶೀಲನಾರ್ಹವಾಗಿರುವದಷ್ಟೆ. ಅದರಲ್ಲಿಯೂ ಹರಿಯ ವಿಷಯದಲ್ಲಿ ತಂದೆಗೆ ಪ್ರಲ್ಹಾದನು 'ಭೇದವರುಹುವ-ಹಲವು ಶ್ರುತಿಗಳುವುಂಟು ತತ್ವದಲಿ' ಎಂದು ನುಡಿದು—

ಲಾಲಿಸುವೊಡದ್ವೈತ ಪಕ್ಷಕೆ
ಕಾಳು ನಿನ್ನಯ ಕರ್ಮಕಾಂಡವು
ಮೇಲೆ ನೀನೊದೆದು ಕಳೆಯ್ಯೆ.....

ಎಂದು ಹೇಳುವ ಅದ್ವೈತ ನಿರಾಕರಣೆಯ ಮಾತುಗಳು ಬರುತ್ತವೆ. ಈ ಕವಿಯನ್ನು ದ್ವೈತಿಯೆಂದು ತೋರ್ಪಡಿಸುವುದಕ್ಕಾಗಿ ಇಂತಹ ವಾಕ್ಯ ಗಳನ್ನು ಹೊಸದಾಗಿ ರಚಿಸಿ ಕೆಲವರು ಮಧ್ಯಮಧ್ಯದಲ್ಲಿ ಸೇರಿಸಬಹುದೆಂದು ಕೆಲವರು ಹೇಳಬಹುದು' (ಆದಿಪರ್ವದ ಅವತರಣಿಕೆ, ಪುಟ ii) ಹೌದು ಸಂಶಯವೇನು ?

ಅರಣ್ಯಪರ್ವದಲ್ಲಿ ಬರುವ ಕೆಲವು ಉಪಕಥೆಗಳ ಶೈಲಿಯನ್ನು ನೋಡಿ ದರೆ ಅವು ಕುಮಾರವ್ಯಾಸನ ಬಿಗಿ-ಬಂಧಗಳಿಗೆ ದೂರವಾಗಿರುವಂತೆ ತೋರು ತ್ತವೆ. ಇಂತಹ ಅನೇಕ ಸಂಕ್ಷಿಪ್ತ ಪದ್ಯಗಳಿಗೆ ನಿದರ್ಶನಕ್ಕೆಂದು ತಿಣಿನಿಯ ಸಂಧಿಯ ಕನಕನೆಂಬ ಮಾಟಗಾರನ ಕಥೆಯನ್ನು ನೋಡಬಹುದು. ಹೀಗೆ ಕುಮಾರವ್ಯಾಸನ ಶೈಲಿಯ ಕಲ್ಪನೆಯುಳ್ಳವರು ಅನೇಕ ಪ್ರಕ್ಷಿಪ್ತ ಪದ್ಯಗಳನ್ನು ಗುರುತಿಸಬಹುದಾಗಿದೆ. ಆದರೆ ಕವಿಯು ಒಮ್ಮೊಮ್ಮೆ ಸ್ಫೂರ್ತಿ ಭಾವಾವೇಶ ವಿಲ್ಲದ ಎಡೆಗಳಲ್ಲಿ ಶುಷ್ಕನಾಗಿ ಪರಿಣಮಿಸುವ ಸಾಧ್ಯತೆಯನ್ನು ಅಲ್ಲಗಳೆಯು ವಂತಿಲ್ಲ.

ಅಭಿವೃದ್ಧಿ ಇಲಾಖೆಯ ಆವೃತ್ತಿಯಲ್ಲಿ ಆದಿಪರ್ವದ ದಶಾವತಾರಾದಿ ಭಾಗಗಳನ್ನೆಲ್ಲ ಬಿಟ್ಟುಕೊಡಲಾಗಿದೆ. ಆದರೆ ಸಂಪಾದಕರು ತಮ್ಮ ಸಂಪಾ ದನೆಯ ಕಾರ್ಯದಲ್ಲಿ ಯಾವ ಯಾವ ಮೂಲಗಳನ್ನನುಸರಿಸಿದರು ಎಂಬ ಬಗ್ಗೆ ಯಾವ ಮಾತೂ ಇಲ್ಲ. ಅಡಿಯಲ್ಲಿ ಪಾಠಾಂತರಗಳನ್ನು ಕೊಟ್ಟಿಲ್ಲ. ತಮಗೆ ಸೂಕ್ತವೆನಿಸಿದಂತೆ ಸಂಧಿಗಳೊಡನೆ ಪಾಠಾಂತರಗಳನ್ನು ಆರಿಸಿಕೊಂಡೂ ಅದಕ್ಕೆ ಕಾರಣಗಳನ್ನು ಹೇಳಿಲ್ಲ. ಒಮ್ಮೊಮ್ಮೆ ಈ ಶಬ್ದಗಳ ಪಾಠಾಂತರಗಳು ಅಸಮರ್ಪಕವೂ ಎನಿಸುತ್ತವೆ ಈ ದೃಷ್ಟಿಯಿಂದ ಈ ಆಗ್ಗದರದ ಆವೃತ್ತಿಯ ಸಂಪಾದನೆಯು ಸಮಗ್ರವೂ ಪರಿಪೂರ್ಣವೂ ನಿರ್ದಿಷ್ಟವೂ ಎಂಬಂತೆ ನಡೆದಿಲ್ಲ

ವೆನಿಸುತ್ತದೆ. ಇಂತಹ ಲೋಪದೋಷಗಳುಳ್ಳ ಅಗ್ಗದ ಆವೃತ್ತಿಯು ಪುನರ್ಮುದ್ರಣದಲ್ಲಿಯೂ (ಮಾರಾಟದ ಜಿಲೆಯು ಏರಿಕೆಯಲ್ಲದೆ) ಮೂಲ್ಕದಲ್ಲಿ ಬೇಲ್ಕಟ್ಟವನ್ನು ಮುಟ್ಟದಿರುವದು ವಿಷಾದನೀಯ.

ಅಭಿವೃದ್ಧಿ ಇಲಾಖೆಯ ಆವೃತ್ತಿಯು ಹತ್ತು ಪರ್ವಗಳ ವ್ಯಾಪ್ತಿಯುಳ್ಳ ದ್ದಾಗಿ ಒಟ್ಟು ೧೫೧೧ ಸಂಧಿಗಳುಳ್ಳ ಸುಮಾರು ೮೦೦೦ ಪದ್ಯಗಳುಳ್ಳದ್ದಾಗಿದೆ. ಓರಿಯಂಟಲ್ ಆವೃತ್ತಿಯಲ್ಲಿ ಕಂಡುಬರಬಹುದಾದ ಮಾತೀಯವಿಚಾರದ ಪ್ರಕ್ಷಿಪ್ತವೆನಿಸಬಹುದಾದ ಸುಮಾರು ಎಲ್ಲ ಸಂದರ್ಭಗಳನ್ನೂ ಎಲ್ಲ ಪದ್ಯಗಳನ್ನೂ ಇಲ್ಲಿ ಬಿಟ್ಟು ಕೊಡಲಾಗಿದೆ ಒಂದು ರೀತಿಯಲ್ಲಿ ಕುಮಾರವ್ಯಾಸನ ಸ್ವಂತ ರಚನೆಯು ಗಾತ್ರ ಸುಮಾರು ೮೦೦೦ ಪದ್ಯಗಳೇ ಆಗಿರಬೇಕೆಂದು ತೋರುತ್ತದೆ. ಇತ್ತೀಚಿನ ಮೈಸೂರು ಅಧ್ಯಯನ ಸಂಸ್ಥೆಯ ಆವೃತ್ತಿ ಓರಿಯಂಟಲ್ ಆವೃತ್ತಿ ಹಾಗೂ ಅಭಿವೃದ್ಧಿ ಇಲಾಖೆಯ ಆವೃತ್ತಿಗಳ ಒಂದು ಸಮನ್ವಯಿತ ಸಂಪಾದನೆಯ ಅವಶ್ಯಕತೆಯಿದೆಯೆಂದು ಹೇಳಬಹುದು. ಆದರೆ ಇಷ್ಟಕ್ಕೆ ಕೆಲಸ ಮುಗಿಯಲಿಲ್ಲ. ಮದ್ರಾಸ್ ಯುನಿವರ್ಸಿಟಿ ಕರ್ನಾಟಕ ಯುನಿವರ್ಸಿಟಿಗಳ ಕನ್ನಡ ಅಧ್ಯಯನ ಭಾಗದಲ್ಲಿ ಪ್ರಕಟನೆಗಾಗಿ ಉಪಯೋಗಿಸಲ್ಪಡದೆ-ಇರುವ ಓಲೆಗರಿಯ ಪ್ರತಿಗಳು ಇನ್ನೂ ಇವೆ. ಇವಲ್ಲದೆ ಗದುಗಿನ ಭಾಗದ ಹಳ್ಳಿ ಹಳ್ಳಿಗಳಲ್ಲೂ ಹಲವಾರು ವಿದ್ವಾಂಸರ ಏಾಸಗಿ ಕೋಶಾಗಾರದಲ್ಲೂ ಇನ್ನೂ ಹಲ ಕೆಲವು ಪಸ್ತ ಪ್ರತಿಗಳು ದೊರೆಯುವ ಸಂಭವ ಇದೆ. ಮುಖ್ಯವಾಗಿ ಕೋಳಿವಾಡದ ಪಾಟೀಲರ ಮನೆಯಲ್ಲಿ ಪೂಜಾ ಸ್ಥಾನದಲ್ಲಿರುವ ಓಲೆಗರಿಯ ಪ್ರತಿಯನ್ನು ಯಾವ ಸಂಶೋಧಕರೂ, ಸಂಪಾದಕರೂ ಪೂರ್ತಿ ಪರಿಶೀಲಿಸಿ ಬಳಸಿಕೊಂತಂತಿಲ್ಲ. ಈ ಎಲ್ಲ ದೃಷ್ಟಿಯಿಂದ ಮಹಾಕವಿ ಕುಮಾರವ್ಯಾಸನ ಒಂದು ಸಮಗ್ರ ಸಪ್ರಮಾಣಿಕ ಆವೃತ್ತಿಯ ಅವಶ್ಯಕತೆ ಇದೆಯೆಂದು ತಿಳಿಯ ಪಡಿಸುವುದೆ ಈ ಲೇಖನದ ಉದ್ದೇಶ. ಅದೇ ರೀತಿ ಕವಿಯ ಕಾಲ ಚಾರಿತ್ರಿ ಕಾಂಶಗಳ ಸಂಶೋಧನೆ, ಕವಿಯ ಬಗಿಗಿನ, ಕವಿಯ ಭಾಷಾ ವಿಷಯದ ಒಂದು ಜ್ಞಾನಕೋಶದ ಅವಶ್ಯಕತೆಯನ್ನೂ ಎತ್ತಿ ತೋರುವುದೂ ಇದರ ಗುರಿ.